MYSORE LEGISLATIVE ASSEMBLY

TWENTY-SIXTH DAY.

Sunday, 28th July 1957.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

BUDGET FOR 1957-58—DEMANDS FOR GRANTS

Demand No. 2—Land Revenue.

7. *Land Revenue.*

MR. SPEAKER.—Motion moved:

"That a sum not exceeding Rs. 1,31,36,000 be granted to the Government to defray the charges which will come in course of payment during the year ending 31st day of March 1958, in respect of 'Land Revenue'."

Demand No. 19—Scientific Departments.

36. *Scientific Departments.*

MR. SPEAKER.—Motion moved:

"That a sum not exceeding Rs. 10,66,000 be granted to the Government to defray the charges which will come in course of payment during the year ending 31st day of March 1958, in respect of 'Scientific Departments'."

Demand No. 32—Famine Relief

54. *Famine.*

MR. SPEAKER.—Motion moved:

"That a sum not exceeding Rs. 28,08,000 be granted to the Government to defray the charges which will come in course of payment during the year ending 31st day of March 1958, in respect of 'Famine Relief'."

Demand No. 26—Co-operation.

42. *Co-operation.*

MR. SPEAKER.—Motion moved:

"That a sum not exceeding Rs. 64,59,200 be granted to the Government to defray the charges which will come in course of payment during the year ending 31st day of March 1958, in respect of 'Co-operation'."

Demand No. 28—Miscellaneous Departments.

47. *Miscellaneous Departments.*

MR. SPEAKER.—Motion moved:

"That a sum not exceeding Rs. 53,80,700 be granted to the Government to defray the charges which will come in course of payment during the year ending 31st day of March 1958, in respect of 'Miscellaneous Departments'."

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಇಂದು ನಾವು ಲ್ಯಾಂಡ್ ರೆವಿನ್ಯೂ, ಸೈಂಟಿಫಿಕ್ ಡಿಪಾರ್ಟ್‌ಮೆಂಟ್ಸ್, ಫ್ಯಾಮಿನ್, ಕೋ-ಆಪರೇಷನ್, ಮಿಸಲೇನಿಯಸ್ ಡಿಪಾರ್ಟ್‌ಮೆಂಟ್‌ಗಳ ವಿಚಾರ ಪರಿಶೀಲಿಸಬೇಕಾಗಿದೆ. ಬಡ್ಜೆಟ್ಟಿನಲ್ಲಿ ಯಾವ ರೀತಿಯಲ್ಲಿ ಈ ಬಾಬುಗಳ ಆಡಳಿತಕ್ಕೆ ವ್ಯವಸ್ಥೆ ಮಾಡಲು ಎಷ್ಟರ ಮಟ್ಟಿಗೆ ಅನುಕೂಲ ಮಾಡಿದ್ದಾರೆಂದು ನೋಡಬೇಕಾಗಿದೆ. ಈ ದೃಷ್ಟಿಯಿಂದ ನಾವು ಆಲೋಚನೆ ಮಾಡುವಾಗ ಮೊದಲು ನಾನು ಡಿಮ್ಯಾಂಡ್ ನಂಬರು '28-47 ಮಿಸಲೇನಿಯಸ್ ಡಿಪಾರ್ಟ್‌ಮೆಂಟ್‌ಗಳ' ವಿಚಾರ ಪ್ರಸ್ತಾಪಿಸ ಬೇಕೆಂದಿದ್ದೇನೆ. ಏಕೆಂದರೆ ನಮ್ಮ ದೃಷ್ಟಿಯಿಂದ ಅದು ಅತ್ಯಂತ ಮುಖ್ಯವಾದುದು. ಆ ಬಾಬನ್ನು ನಮ್ಮ ತತ್ವಕ್ಕನುಸಾರವಾಗಿ ನಾವು ಆಲೋಚಿಸತಕ್ಕಂಥಾದ್ದು ನಮ್ಮ ಕೆಲಸವಾಗಿದೆ. ಅದು ಬಡವರ ಸಮಸ್ಯೆಗೆ, ಕೂಲಿಗಾರರ ಸಮಸ್ಯೆಗೆ

(ಶ್ರೀ ಕೆ. ಕೆಂಚಪ್ಪ)

ಸಂಬಂಧಪಟ್ಟಿದೆ. ನಮ್ಮ ದೇಶದಲ್ಲಿ ಜನರ ಶಕ್ತಿ ಉತ್ಪಾದನಾ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು ಎಂಬ ದೃಷ್ಟಿಯಿಂದ ಅದಕ್ಕೆ ಹೆಚ್ಚು ಬೆಲೆ ಕೊಟ್ಟು ಆಲೋಚನೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಇದುವರೆಗೂ ನಡೆದುಕೊಂಡು ಬಂದಿರುವ ವಿಧಾನವನ್ನು ನೋಡಿದರೆ ಅಷ್ಟರಮಟ್ಟಿಗೆ ಈ ಬಾಬಿನ ವಿಚಾರದಲ್ಲಿ ಯೋಚನೆ ಮಾಡಲಿಲ್ಲ, ವ್ಯವಸ್ಥೆ ಮಾಡಲಿಲ್ಲ ಎಂದು ಎನ್ನಿಸುತ್ತದೆ. ಈಗ ಬಡ್ಜೆಟ್ಟಿನಲ್ಲಿರುವ ಡಿಮ್ಯಾಂಡ್ 53,80,700 ರೂಪಾಯಿಗಳು. ಇದರಲ್ಲಿ ನಮಗೆ ಆಶ್ಚರ್ಯವಾದ ವಿಚಾರ ಕಂಡುಬರುವುದು, ಇನ್ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್‌ಗೆ 2,50,900 ರೂಪಾಯಿ, ಲೇಬರ್ ಅಡ್ಮಿನಿಸ್ಟ್ರೇಷನ್‌ಗೆ 6,75,000 ರೂಪಾಯಿ, ಮತ್ತು ಸ್ಟಾರ್ಟಿಂಗ್ ಆಫ್ ವೆಲ್‌ಫೇರ್ ಸೆಂಟರ್, ವರ್ಕಿಂಗ್ ಆಫ್ ಫೆಸಿಲಿಟೀಸ್ ಎಂಬ ವಿಚಾರದಲ್ಲಿ, ಎಕ್ಸ್‌ಪ್ಯಾನ್ಷನ್ ಆಫ್ ವೆಲ್‌ಫೇರ್ ಆಕ್ಟಿವಿಟೀಸ್‌ಗೆ 50 ಸಾವಿರ ರೂಪಾಯಿ ಮಾತ್ರ, ಎಂದರೆ ಒಟ್ಟು ಇದರಲ್ಲಿರತಕ್ಕಂಥ ಪ್ರಾವಿಷನ್‌ನಲ್ಲಿ ಲೇಬರ್ ಅಡ್ಮಿನಿಸ್ಟ್ರೇಷನ್‌ಗೆ ಸುಮಾರು 6,25,000 ರೂಪಾಯಿ ಇಟ್ಟುಕೊಂಡಿದ್ದಾರೆ. ಬಾಕಿ ಉಳಿಯುವುದು 50ಸಾವಿರ ರೂಪಾಯಿ ಮಾತ್ರ, ಅಂದರೆ ಇದರಲ್ಲಿ ಎಷ್ಟು ಉಪೇಕ್ಷೆಯಿಂದ ಕೂಲಿಗಾರರ ಸಮಸ್ಯೆಯನ್ನು ಬಗೆ ಹರಿಸಿದ್ದಾರೆಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಏಕೆಂದರೆ ಬರೀ 50ಸಾವಿರ ರೂಪಾಯಿಗಳನ್ನು ಮಾತ್ರ ಈ ವಿವಿಧ ಕಾರ್ಯಕ್ರಮಗಳ ಅಭಿವೃದ್ಧಿಗಾಗಿಟ್ಟಿದ್ದಾರೆ. 53,80 700ರೂಪಾಯಿಗಳಲ್ಲಿ ಬರೀ 50ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟು ಬಾಕಿಯಾದ್ದು ಏನಾಗುತ್ತಿದೆ? ಎಲ್ಲಾ ಸಿಬ್ಬಂದಿಗೇ ಕೆಟ್ಟರೆ ಅದರ ಅರ್ಥವೇನು? ಸಿಬ್ಬಂದಿ ಮುಖ್ಯವಾದದ್ದು. ಆದರೆ ವಿವಿಧ ಕಾರ್ಯಕ್ರಮಗಳಿಗೆ ಕೊಟ್ಟಿರುವ ದುಡ್ಡಿನ ವಿಚಾರದಲ್ಲಿ ಲಕ್ಷ್ಯ ಕೊಟ್ಟಿಲ್ಲ ಎಂಬ ವಿಚಾರವನ್ನು ನಾವು ಸ್ಥೂಲವಾಗಿ ಆಲೋಚನೆ ಮಾಡಬೇಕಾಗಿ ಬಂದಿದೆ. ನಾವು ಲೇಬರ್ ಆಕ್ಟಿವಿಟೀಸ್ ವಿಚಾರದಲ್ಲಿ ಇದುವರೆಗೂ ನಡೆದುಕೊಂಡು ಬಂದಿರುವ ವಿಚಾರವನ್ನು ನೋಡಿದರೆ ಅವರ ಅಭಿವೃದ್ಧಿಗೆ ಸರ್ಕಾರಿ ನೌಕರರು ಅಷ್ಟಾಗಿ ಹೆಚ್ಚು ಕೆಲಸವನ್ನು ಇದುವರೆಗೆ ಮಾಡುತ್ತಿಲ್ಲವೆಂದು ತುಂಬ ವ್ಯಸನದಿಂದ ಹೇಳಬೇಕಾಗಿದೆ. ನಿಜವಾಗಿಯೂ ಕೆಲಸಗಾರರ ಅಭಿವೃದ್ಧಿಯ ವಿಚಾರದಲ್ಲಿ ಎಲ್ಲಿಯವರೆಗೆ ಆಸಕ್ತಿಯಿರುವುದಿಲ್ಲವೋ ಅಲ್ಲಿಯವರೆಗೆ ದೇಶದ ಪ್ರಗತಿಯಾಗುವುದಿಲ್ಲ. ಬರೀ ದುಡ್ಡಿನ ತತ್ವ, ಕ್ಯಾಪಿಟಲಿಸ್ಟಿಕ್ ಟೆಂಡೆನ್ಸಿ ಇದೆ ಯಾವುದೇ ಒಂದು ದೇಶದ ಉತ್ಪಾದನಾ ದೃಷ್ಟಿಯಿಂದ, ಕಾರ್ಖಾನೆ ಉತ್ಪಾದನಾ ದೃಷ್ಟಿಯಿಂದ ಅಥವ ಇನ್ಯಾವುದೋ ಉತ್ಪಾದನಾ ದೃಷ್ಟಿಯಿಂದ ಕೆಲಸ ನಡೆಯುತ್ತಿದೆ. ಇನ್‌ವೆಸ್ಟ್‌ಮೆಂಟ್ ಎರಡು ವಿಧವಾಗಿದೆ, ಒಂದನೆಯದು ದುಡ್ಡು, ಎರಡನೆಯದು ಕೆಲಸ. ಕೆಲಸದ ವಿಚಾರ ನೋಡಿದರೆ ದುಡ್ಡು ಎಷ್ಟು ಇನ್‌ವೆಸ್ಟ್ ಮಾಡುತ್ತೇವೋ ಅದಕ್ಕಿಂತ ಹೆಚ್ಚಾಗಿದೆ, ಶೇಕಡ 90ರಷ್ಟು ಕೆಲಸ ನಡೆಯುತ್ತದೆ. ಅದು ಅಷ್ಟು ಮುಖ್ಯವಾಗಿರುತ್ತದೆ ಎಂದು ನಾವು ಖಚಿತವಾಗಿ ಹೇಳಬೇಕಾಗುತ್ತದೆ.

ಕಾರ್ಮಿಕರ ಹಿತದೃಷ್ಟಿಯಿಂದ ಪ್ರತಿಯೊಂದು ಸಂಸ್ಥೆಗೂ ಒಂದು ಯೂನಿಯನ್ನು ಆಗಲೇಬೇಕು ಎಂಬ ಕಾನೂನು ಏಕೆ ಮಾಡಲಿಲ್ಲ? ಅದರ ಬದಲು ಯೂನಿಯನ್ನನ್ನು ಅವರೇ ಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡಿದರೆ ಆ ಪ್ರಯತ್ನಗಳಿಗೆ ಎಷ್ಟೋ ವಿಘ್ನಗಳನ್ನು ತಂದೊಡ್ಡುತ್ತಿರುವುದು ನಮ್ಮಲ್ಲಿ ಕಂಡುಬರುತ್ತಿದೆ. ಉದಾಹರಣೆಗಾಗಿ ರೋಡು ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನಲ್ಲಿ ಯೂನಿಯನ್ ಮಾಡುವುದಕ್ಕಾಗಿ ಮುಂದೆ ಬಂದಾಗ ಬೇಕಾದಷ್ಟು ಅಡ್ಡಿ ಆತಂಕಗಳನ್ನು ತಂದು ಒಡ್ಡುತ್ತಾರೆ. "ಅವರು ಹಂಗಾಮಿ ಕೆಲಸಗಾರರು, ಅವರನ್ನೇಕೆ ಸೇರಿಸುತ್ತೀರಿ, ಇವರನ್ನೇಕೆ ಸೇರಿಸುತ್ತೀರಿ" ಎಂದು ಕೇಳುತ್ತಾರೆ. ಹೀಗೆ ಅವರಿಗೆ ಎಷ್ಟೋ ತೊಂದರೆಗಳಿರುವ ವಿಚಾರವನ್ನು ಆಲೋಚನೆ ಮಾಡುವುದೇ ಇಲ್ಲ. ಇಲ್ಲಿ ಏಕೆ ಹಿಂದಿನ ಮೈಸೂರಿನ ವಿಚಾರವಾಗಿ ಹೇಳುತ್ತೀರಿ, ಹೊಸ ಮೈಸೂರಿನ ವಿಚಾರವಾಗಿ ಆಲೋಚನೆ ಮಾಡಿ ಎಂದು ಹೇಳುತ್ತಿದ್ದಾರೆ. ಹೊಸ ಮೈಸೂರು ಈಗ ತಾನೇ ಉದಿಸಿದೆ. ನಾವು ಇನ್ನು ಮುಂದೆ ಬರತಕ್ಕ ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಸರಕಾರಕ್ಕೂ ಹಿಂದಿನ ಸರಕಾರಕ್ಕೂ ಭೇದವನ್ನು ಏಕೆ ಕಲ್ಪಿಸುತ್ತಾರೋ ನನಗೆ ತಿಳಿಯುವುದಿಲ್ಲ. ನಮ್ಮ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರೇ ಇರಲಿ ಅಥವಾ ಇನ್ಯಾರೇ ಬರಲಿ, ಸರಕಾರ ಮುಖ್ಯವೇ ವಿನಾ ಬೇರೆ ಏನಲ್ಲ. ಆ ದೃಷ್ಟಿಯಿಂದ ಸರಕಾರದಲ್ಲಿರತಕ್ಕ ಲೋಪದೋಷಗಳನ್ನು ತಮಗೆ ತಿಳಿಸಿ, ಅವನ್ನು ಸರಿಪಡಿಸತಕ್ಕದ್ದು ಮುಖ್ಯ. ರಚನಾತ್ಮಕವಾದ ರೀತಿಯಲ್ಲಿ ನಮ್ಮ ಟೀಕೆಗಳನ್ನು ತಮ್ಮ ಮುಂದಿಡುವುದು ನಮ್ಮ ಕರ್ತವ್ಯ.

ಕಾರ್ಮಿಕರ ವಿಚಾರದಲ್ಲಿ ಹೇಳುವುದಾದರೆ, ಕಾರ್ಮಿಕರ ಸಮಸ್ಯೆ ಹಳೆಯ ಮೈಸೂರಿಗೆ ಸಂಬಂಧಿಸಿದುದು, ಹೊಸ ಮೈಸೂರಿಗೆ ಸಂಬಂಧಿಸಿದುದು ಎಂದು ವಿಂಗಡಿಸುವುದಕ್ಕೆ ಅಸಾಧ್ಯ ಎನ್ನುವ ದೃಷ್ಟಿಯಿಂದ ನಾನು ಇಲ್ಲಿ ಸಲಹೆ ಕೊಡುತ್ತಿದ್ದೇನೆ. ಈ ಲೇಬರ್ ವಿಷಯವನ್ನು ಎರಡು ಭಾಗ ಮಾಡಬಹುದು. ಮೊದಲನೆಯದು Employer ಎನ್ನತಕ್ಕವರು ಇರುತ್ತಾರೆ. ಅವರಿಗೆ ಕೆಲವು ಜವಾಬ್ದಾರಿಗಳಿವೆ. ಇನ್ನೊಂದು ನಿಗದಿಯಾಗಿ Employer ಎನ್ನತಕ್ಕವರಲ್ಲದವರು, ಎಂದರೆ ಇದಕ್ಕೆ ಉದಾಹರಣೆ ಕೊಡುವುದಾದರೆ, Factory Management. ಇದರ ಜೊತೆಗೆ Agricultural Labour ಎನ್ನುವುದೂ ಇದೆ. ಇದರಲ್ಲಿ Small Holdings, Big Holdings, Coffee Plantations ಬೇರೆ ಇವೆ. ಇವರಿಗೆ ಕೆಲವು ಜವಾಬಾರಿಗಳನ್ನು ಗೊತ್ತುಮಾಡಬೇಕು. ಕೈಗಾರಿಕೋದ್ಯಮಗಳಲ್ಲಿ ಇರತಕ್ಕ ಕಾರ್ಮಿಕರಿಗೆ ಒದಗಿಸಿದ ಸೌಕರ್ಯಗಳನ್ನು, Agricultural Labourಗೂ ಒದಗಿಸಬೇಕಾದುದು ಸಹಜ ಮತ್ತು ಅಗತ್ಯ. ಈ ಅಗ್ರಿಕಲ್ಚರ್ ಲೇಬರಿನ ವಿಚಾರದಲ್ಲಿ ಏನಾದರೂ ಅನುಕೂಲಗಳನ್ನು ಕಲ್ಪಿಸಿದ್ದಾರೆಯೇ ಎಂದು ನೋಡಿದರೆ, ಇವರಿಗೆ ಇದುವರೆಗೆ ಒಂದು Union ಸಹ ಮಾಡಿಲ್ಲ. ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಇವರಿಗೆ ಒಂದು ಸರಿಯಾದ ಲೇಬರ್ ಕಾನೂನಿಲ್ಲ. ಇದನ್ನು ಒತ್ತಾಯವಾಗಿ ಕಾರ್ಯಗತ ಮಾಡುವುದಕ್ಕೆ ಬೇಕಾದ ನಿಬಂಧನೆಗಳೂ ಕೂಡ Labour ಕಾನೂನಿನಲ್ಲಿಲ್ಲ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಕೆಲವು ದಿನಗಳ ಹಿಂದೆ ನಾನು ಲಕ್ಕವಳ್ಳಿಗೆ ಹೋಗುವ ಪ್ರಸಂಗಬಂತು; ಅಲ್ಲಿ ಎಲ್ಲ ಬೆಟ್ಟ, ಗುಡ್ಡ, ಹಳ್ಳಕೊಳ್ಳಗಳಲ್ಲಿ ಕೂಲಿಗಾರರು ಕೆಲಸ ಮಾಡುತ್ತಿದ್ದರು. ಸರಕಾರ ನಡೆಸತಕ್ಕ ಕೆಲಸ ಕಾರ್ಯಗಳಲ್ಲಿ ಅವರನ್ನು ಕೂಲಿಗಾರರು ಎಂದು ಉಪೇಕ್ಷಿಸಬಾರದು. ಈ ದಿನ ಬರುತ್ತಾರೆ, ನಾಳೆ ಹೊರಟು ಹೋಗುತ್ತಾರೆ ಎಂದು ತಾತ್ಸಾರ ಮಾಡಬಾರದು. ಇವರ ವಿಚಾರದಲ್ಲಿ ಖಾಯಂ ಆಗಿಲ್ಲದೆ ಇದ್ದರೂ ಏನಾದರೂ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ತಾವು ಪ್ರಯತ್ನಪಡಬೇಕು. ಅವರ ಹಿತರಕ್ಷಣೆ ಬಹಳ ಮುಖ್ಯವಾದುದು.

ಆದಕಾರಣ ಈ ಕೂಲಿಗಾರರ ಸಮಸ್ಯೆಯನ್ನು ಯಾವ ರೀತಿಯಾಗಿ ಪರಿಹರಿಸಬೇಕು. ಎನ್ನುವುದನ್ನು ಸರಿಯಾಗಿ ಆಲೋಚನೆ ಮಾಡಬೇಕಾದುದು ಸರಕಾರದ ಕರ್ತವ್ಯ. ಲಕ್ಷಾಂತರ ರೂಪಾಯಿಗಳನ್ನೇನೋ ಖರ್ಚುಮಾಡಬಹುದು. ಆದರೆ ಇವರ ಕಷ್ಟಗಳನ್ನರಿತು, ಇವರ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಯಾವರೀತಿಯಾದ ವ್ಯವಸ್ಥೆಮಾಡಿದರೆ ಅವರ ಹಿತ ರಕ್ಷಣೆಯಾಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕು. ಈಗ ಮಲೆನಾಡಿನಲ್ಲಿ ಸೊಳ್ಳೆಕಾಟ ಹೆಚ್ಚಾಗಿದೆ. ಅದಕ್ಕೋಸ್ಕರ ಅಲ್ಲಿ ಡಿ. ಡಿ. ಟಿ. ಏನ್ನೇನೋ ಹೊಡೆಯುತ್ತಿದ್ದಾರೆ. ಆದರೆ ಅಲ್ಲಿರುವ ಕೆಲಸಗಾರರಿಗೆ ಸರಿಯಾದ ಮನೆಗಳೇ ಇಲ್ಲದೆ ಅವರು ಸಣ್ಣ ಸಣ್ಣ ಗುಡಿಸಲುಗಳಲ್ಲಿದ್ದಾರೆ. ಇವರಿಗೆಲ್ಲ ಸರಿಯಾದ ವಸತಿಗೆ ಮನೆಗಳನ್ನು ಕಟ್ಟುವವರೆಗೆ ಈ D.D.T. ಹೊಡೆಯುವುದರಿಂದ ಅವರಿಗೆ ಏನೂ ಉಪಯೋಗವಾಗುವುದಿಲ್ಲ. ಅದೂ ಅಲ್ಲದೆ ಈಗ ಉಪಯೋಗಿಸುವ D.D.T. ಯಿಂದ ಸೊಳ್ಳೆಗಳು ಸಾಯುವುದಿಲ್ಲ. ದೇಶದಲ್ಲಿ ಈಗ ಇರುವ ಕೂಲಿಗಾರರು ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಅವರಿಗೆ ಸಣ್ಣಸಣ್ಣ ಮಕ್ಕಳುಗಳಿವೆ. ಮತ್ತು ತೀರಾ ಬಡವರಾಗಿರುವುದರಿಂದ ಏನಾದರೂ ಕಾಯಿಲೆ ಬಂದರೆ ಅವರು ದುಡ್ಡು ಕೊಟ್ಟು ಔಷಧಿಯನ್ನು ತಂದು ಉಪಯೋಗಿಸುವ ಸ್ಥಿತಿಯಲ್ಲಿಲ್ಲ. ಅನೇಕವಾಗಿ ಈ ಕೂಲಿಗಾರರು ಬಳ್ಳಾರಿ, ಸೇಲಂ ಪ್ರದೇಶಗಳಿಂದ ಬಂದಿರತಕ್ಕವರು. ಏನಾದರೂ ತೊಂದರೆ ಒದಗಿದರೆ ಇವರೆಲ್ಲ ದಿಕ್ಕಾಪಾಲಾಗಿ ಓಡಿ ಹೋಗಿರುವುದನ್ನೂ ಕಣ್ಣಾರೆ ಕಂಡಿದ್ದೇನೆ. ಏತಕ್ಕಾಗಿ ನಾನು ಇಷ್ಟನ್ನು ಹೇಳುತ್ತಿದ್ದೇನೆಂದರೆ, ಲೇಬರ್ ಎನ್ನುವುದು ಎಷ್ಟು ಪ್ರಾಮುಖ್ಯವಾದುದು ಎಂಬುದನ್ನು ತಿಳಿಸುವುದಕ್ಕಾಗಿ ಹೇಳುತ್ತಿದ್ದೇನೆ.ನಮ್ಮ ಪ್ರಜಾಸೋಷಿಯಲಿಸ್ಟ್ ಪಾರ್ಟಿಯ ದೃಷ್ಟಿಯಿಂದ ಹೇಳುವುದಾದರೆ, ಹಾಗೂ ವಿರೋಧ ಪಕ್ಷದ ಬಹು ಭಾಗದ ಸದಸ್ಯರ ಪರವಾಗಿ ಹೇಳ ಬೇಕಾದರೆ, ಈ ಕೂಲಿಗಾರರ ಸಮಸ್ಯೆಯನ್ನು ಬಿಡಿಸುವುದಕ್ಕಾಗಿ ನಾವು ಏನು ಮಾಡುವುದಕ್ಕೂ ತಯಾರಾಗಿದ್ದೇವೆ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹಿರಿಯೂರಿನ ಬಳಿ ಆದಿವಾಳದಲ್ಲಿ ಒಂದು ಲೇಬರ್ ಕಾಲೋನಿಯನ್ನು ಮಾಡಿದ್ದಾರೆ. ಆ ರೀತಿ ಆ ವ್ಯವಸ್ಥೆಯಾಗಿರತಕ್ಕ ಸ್ಥಳವನ್ನು ನಾನು ಎಲ್ಲಿಯೂ ನೋಡಿಲ್ಲ. ಬೆಂಗಳೂರಿನಲ್ಲೇ ಅಲ್ಲ, ಇತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ದಾವಣಗೆರೆಯಲ್ಲಿ ನೋಡಿದ್ದೇನೆ. ಸಕ್ಕರೆ ಕಂಪೆನಿಯಿರತಕ್ಕ ಮಂಡ್ಯದಲ್ಲಿಯೂ ನೋಡಿದ್ದೇನೆ. ಹಿರಿಯೂರಿನಲ್ಲಿರತಕ್ಕ ಕಾಲೋನಿಯಂತೆ ನಾನು ಎಲ್ಲಿಯೂ ನೋಡಲಿಲ್ಲ. ನಮ್ಮ ಹಿರಿಯೂರಿನಲ್ಲಿರುವ ಕಾಲೋನಿಯ ಸ್ಥಿತಿ ಹೇಗಿದೆ ಎಂದರೆ, ಈ ಕೆಲಸಗಾರರು ವಾಸಮಾಡುವ ಸ್ಥಳಗಳ ಸುತ್ತ ಮುತ್ತ ಎಷ್ಟೋ ಹಳ್ಳ ಕೊಳ್ಳಗಳಿವೆ. ಅದರಲ್ಲಿ ಜರಿ ಎನ್ನುವ ಹಾಗೆ ನೀರು ಹರಿಯುತ್ತ ಇರುತ್ತದೆ. ಇದರಿಂದ ಸೊಳ್ಳೆಗಳು ಹೆಚ್ಚಾಗಿ ಅವರ ಆರೋಗ್ಯ ಕೆಡುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಹರಿಯುವ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದಿಲ್ಲ.

ಶ್ರೀ ಕೆ. ಕಂಚಪ್ಪ.—ಹರಿಯುವ ನೀರು ಅಲ್ಲಲ್ಲಿ ನಿಂತುಕೊಳ್ಳುತ್ತದೆ. ಅಲ್ಲಿ ಸೊಳ್ಳೆಗಳಿರುತ್ತವೆ ಎನ್ನುವುದು ಸರ್ವೇ ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಸೊಳ್ಳೆಗಳಿಂದ ಅನೇಕ ರೋಗಗಳು ಹರಡುತ್ತವೆ. ನೀರು ಎಲ್ಲೆಲ್ಲಿ ನಿಂತುಕೊಂಡಿರುತ್ತದೆಯೋ ಅಲ್ಲೆಲ್ಲ ಸೊಳ್ಳೆಗಳಿರುತ್ತವೆ. ಇದು ಪ್ರಕೃತಿ ನಿಯಮ, ಇಷ್ಟು ಸಣ್ಣ ವಿಚಾರವನ್ನು ತೆಗೆದುಕೊಂಡು ಸುಮ್ಮನೆ ಲಘುವಾಗಿ ಕೇಳಬಾರದು.

ಆದುದರಿಂದ ನಾನು ಹೇಳುವುದು Slum Clearance ಆಗಬೇಕು.

Sri B. VAIKUNTA BALIGA (Minister for Labour).—Slum clearance is only in cities. In Hiriyur where water is flowing, there is no question of Slum clearance.

ಶ್ರೀ ಕೆ. ಕಂಚಪ್ಪ.—ಹಾಗಲ್ಲ. Slum clearance ಹಳ್ಳಿಯ ಭಾಗದಲ್ಲಿಯೂ ಆಗಬೇಕು. ಈ ಗುಡಿಸಲುಗಳ ಸುತ್ತಮುತ್ತಲೂ ಹಳ್ಳ ಕೊಳ್ಳಗಳಿವೆ, ಅದರಲ್ಲಿ ನೀರು ನಿಂತಿರುತ್ತದೆ. ಈ ಕೂಲಿಗಾರರ. ವಸತಿಗಾಗಿ ಸರಿಯಾದ ಸರ್ವೆಕೂಡ ನಡೆಸಿಲ್ಲ ಇವರಿಗೆ ಜಾಗವನ್ನು ಕೊಡಲು ಮುನಿಸಿಪಾಲಿಟಿಗಳಲ್ಲಿ ಹೋದರೆ ಅವರು ದುಡ್ಡು ಕೇಳುತ್ತಾರೆ. ಈ Labour ಕಾಲೋನಿಗಳನ್ನು developಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದರಲ್ಲಿ ಈ slum clearance ಎನ್ನುವುದು ಮುಖ್ಯವಾದ ವಿಚಾರ. ಇದನ್ನು ಮೊದಲು ಮಾಡಬೇಕಾದುದು ಅಗತ್ಯ. ಈ ಕೆಲಸದ ವಿಚಾರ ಬಹಳ ಉಪೇಕ್ಷೆಯಿಂದ ನಡೆಯುತ್ತಿದೆ.

ಈ ಲೇಬರ್ ಆಕ್ಟಿನ ವಿಚಾರದಲ್ಲಿ ಹೇಳಬೇಕಾದರೆ, ಈ ಕಾನೂನಿಗೆ ತುಂಬ ಸುಧಾರಣೆಗಳು ಆಗ ಬೇಕಾಗಿವೆ. ಇದು ಬಹಳ ಹಳೆಯದಾಗಿದೆ. ಇದರಿಂದ ಹೆಚ್ಚಿನ ಉಪಯೋಗಗಳು ದೊರೆಯುತ್ತಿಲ್ಲ. ಆದಕಾರಣ ತಾವು ಈ ಲೇಬರ್ ಆಕ್ಟನ್ನು ತುಂಬಾ ಸುಧಾರಿಸಬೇಕಾಗಿದೆ. ಇದನ್ನು ಸರಿಯಾಗಿ ಆಲೋಚನೆ ಮಾಡಿ ಮಾಡಬೇಕಾಗಿದೆ.

ಇನ್ನೊಂದು ಮುಖ್ಯ ವಿಚಾರವನ್ನು ಹೇಳ ಬೇಕಾಗಿದೆ. ಒಂದು Land Army ಎನ್ನತಕ್ಕದ್ದನ್ನು ಮಾಡಬೇಕು. ಲೇಬರಿಗೆ ಸಂಬಂಧಪಟ್ಟಂತೆ ಇದೇನೂ ಖಾಯಂ ಆದ ಸಂಸ್ಥೆಯಾಗಿರಬೇಕಾಗಿಲ್ಲ. ಜಮೀನಿಲ್ಲದವರನ್ನು ಒಂದುಗೂಡಿಸಿ ಈ Land Army ಯನ್ನು ನಿರ್ಮಿಸಬೇಕು ಇದರಿಂದ ಎಷ್ಟು ಜಮೀನಿದೆ ಎಂಬುದು ತಿಳಿಯುತ್ತದೆ. Development Schemeನಲ್ಲಿ ಅನೇಕ ಕೆಲಸಗಳನ್ನು ಮಾಡಬೇಕಾಗಿರುತ್ತದೆ. Bund construction work and Reclamation work, ಈ ಕೆಲಸಗಳನ್ನು ಈ Land Army ಕೈಲಿ ಮಾಡಿಸಬಹುದು. ಇದನ್ನು ಬೇಕಾದರೆ ಖಾಯಂ Labour force ಎಂತಲೂ ಪರಿಗಣಿಸಬಹುದು. ಇವರ ಸಹಾಯದಿಂದ ವ್ಯವಸಾಯ ಮಾಡುವ ಜಮೀನನ್ನು ಅವರಿಗೆ ಕ್ರಮೇಣ ಕೊಟ್ಟು, ಅವರನ್ನು ನೆಲಸುವಂತೆ ಮಾಡಬಹುದು. ಅವರಿಗೆ ಬೇಕಾದ ಎತ್ತು, ದನ, ಕರು ವಗೈರೆಗಳನ್ನು ಕೊಟ್ಟು ಸಹಾಯ ಮಾಡಬೇಕು. ಈ ರೀತಿಯಲ್ಲಿ ಲೇಬರ್ ಸಮಸ್ಯೆಯನ್ನು ಪರಿಹರಿಸಲು ನಮ್ಮ ಪ್ರಜಾಸೋಷಿಯಲಿಸ್ಟ್ ಪಾರ್ಟಿಯವರು ತಮ್ಮ ಸಂಪೂರ್ಣ ಸಹಾಯ ಮತ್ತು ಸಹಕಾರವನ್ನು ನೀಡುತ್ತಾರೆ. ಈ ವಿಚಾರದಲ್ಲಿ ನಮ್ಮ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಪರವಾಗಿ ಒಂದು ಆಶ್ವಾಸನೆ ಕೊಡುತ್ತೇನೆ. ಇಂಥಾ ಒಂದು ಯೋಜನೆಯನ್ನು ತಯಾರ ಮಾಡಿ ಕಾರ್ಯಗತಮಾಡಿದರೆ ದೇಶಕ್ಕೆ ತುಂಬ ಸಹಾಯವಾಗುತ್ತದೆಯಾದಕಾರಣ ನಾವು ಸಂಪೂರ್ಣ ಸಹಾಯ ಮತ್ತು ಸಹಕಾರ ಕೊಡುತ್ತೇವೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಏನು ಸಹಾಯಮಾಡುತ್ತೀರಿ?

ಶ್ರೀ ಕೆ. ಕೆಂಚಪ್ಪ.—ಜನರನ್ನೊದಗಿಸುತ್ತೇವೆ, ಸ್ಥಳಗಳನ್ನು ತೋರಿಸುತ್ತೇವೆ; ಹಣವನ್ನು ಕೊಟ್ಟು ಸಹಾಯ ಮಾಡುವುದಕ್ಕಾಗುವುದಿಲ್ಲ. ಇಷ್ಟು ಮಾಡಿದರೆ, ಅದು ಸಹಕಾರ ಕೊಟ್ಟಂತಾಗಲಿಲ್ಲವೆ?

Sri H. M. CHANNABASAPPA (Krishnarajanagar).—Shall I take it that you will put in enthusiasm into the producer?

ಶ್ರೀ ಕೆ. ಕೆಂಚಪ್ಪ.—ಕೂಡಲೇ ಈ ಯೋಜನೆಯನ್ನು ಮಾಡಬೇಕೆಂದು ಕಳಕಳಿಯಿಂದ ಕೇಳುತ್ತೇವೆ. ಇದನ್ನು ಮಾಡುವುದರಿಂದ ದೇಶಕ್ಕೆ ಒದಗಿರುವ ಆಹಾರಾಭಾವ ತಪ್ಪುತ್ತದೆಯಲ್ಲದೆ ಲೇಬರ್ ಸಮಸ್ಯೆಯೂ ಪರಿಹಾರವಾಗುತ್ತದೆ.

ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಾರರಿಗೆ ಸಂಬಂಧಪಟ್ಟ ಕೆಲವು ಪ್ರಶ್ನೆಗಳು ಮೂರುವರ್ಷಗಳಿಂದ ಪರಿಹಾರವಾಗದೆ ಹಾಗೆಯೇ ಉಳಿದಿವೆ. ಸರ್ಕಾರಕ್ಕೇಕೆ ಇಷ್ಟು ಉಪೇಕ್ಷೆ? ಅವರು ಕನಿಷ್ಠ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಹತ್ತು ಹನ್ನೆರಡು ವರ್ಷಗಳವರೆಗೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸ ಮಾಡಿ ತಮ್ಮ ಜೀವವನ್ನೇ ಒತ್ತೆ ಇಟ್ಟಿರುವ ಜನರನ್ನು ಖಾಯಂ ಮಾಡಬಾರದೆ? ಇಂಥವರನ್ನು ಖಾಯಂ ಮಾಡಬೇಕೆಂದು ಕಾನೂನು ಮಾಡಬೇಡವೆ? ಇಷ್ಟು ಮಾಡದೇ ಯಿರುವವರು ಕಾರ್ಮಿಕರ ಅಭಿವೃದ್ಧಿಯನ್ನು ಇನ್ನೇನು ಮಾಡುತ್ತಾರೆಂದು ಕೇಳುತ್ತೇನೆ.

ಮೊನ್ನೆ ತಾನೇ ಅರಮನೆಯಲ್ಲಿ ಕೆಲಸಮಾಡುತ್ತಿದ್ದ 500 ಜನ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಖರ್ಚು ಕಡಮೆಮಾಡುವುದಕ್ಕಾಗಿ ತೆಗೆದಿರಬಹುದು. ಆದರೆ ಬೇರೆ ಕೆಲಸ ಕೊಡಿ ಎಂದು ಅವರು ಕೇಳಿದರೆ ಏಕೆ ಕೊಡಬಾರದು?

Sri B. VAIKUNTA BALIGA.—They are not Government servants. They are servants of the Maharaja.

Sri K. KENCHAPPA.—They are also labourers, they also come under the Labour Act. They must also have the right of forming a union and get all facilities from the Government.

Sri R. CHENNIGARAMIAH.—That question does not come within the purview of the Budget head.

ಶ್ರೀ ಕೆ. ಕೆಂಚಪ್ಪ.—ಇದು ಒಂದು ಯೂನಿಯನ್ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟದ್ದು. Miscellaneous departments ನಲ್ಲಿ ಲೇಬರ್ ಯೂನಿಯನ್ ಬರುವುದಿಲ್ಲವೆ? ಕೆಲಸ ಮಾಡುವವರಿಗೆ ಸಹಾಯ ಮಾಡುವ ವಿಚಾರ ಬರುವುದಿಲ್ಲವೆ? ಕೆಲಸದಿಂದ ತೆಗೆದುಹಾಕಲ್ಪಟ್ಟಿರುವ ಜನರಿಗೆ ಬೇರೆ ಕೆಲಸಗಳನ್ನು ಕೊಡಬೇಕು. ಈ ವಿಷಯವನ್ನು ತೀವ್ರವಾಗಿ ಆಲೋಚನೆಮಾಡಿ ಸರ್ಕಾರ ಜಾಗ್ರತೆ ಅವರಿಗೆ ಜೀವನ ಮಾಡಿಕೊಳ್ಳಲು ಬೇರೆಕಡೆ ಕೆಲಸಗಳನ್ನು ಕೊಡಬೇಕು.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಲೇಬರ್ ಕಾನೂನುಗಳನ್ನು, ಕನಿಕರದಿಂದ, ಮಾನವೀಯತೆಯ ದೃಷ್ಟಿಯಿಂದ, ದೇಶದ ಕೆಲಸ ಕಾರ್ಯಗಳು ಪ್ರಗತಿದಾಯಕವಾಗಿ ನಡೆಯುವ ದೃಷ್ಟಿಯಿಂದ ಮಾಡಬೇಕು. ಸಹಕಾರ ಸಂಘಗಳನ್ನು ಮಾಡುವುದರ ಮೂಲಕ ಯಾವ ಮನುಷ್ಯ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾನೋ ಅವನು ತಾನೇ ಮಾಲೀಕನೆಂಬ ಭಾವನೆಯಿಂದ ಕೆಲಸ ಮಾಡುವಹಾಗೆ ಮಾಡಬೇಕು. ಏಕೆಂದರೆ, there is such a thing as economic democracy. Democracy does not mean democracy in administration only. ಈ economic democracy ಎನ್ನುವುದು ನಾರ್ವೆ ಮತ್ತು ಸ್ವೀಡನ್ನಲ್ಲಿದೆ. ಇಂಥ ವ್ಯವಸ್ಥೆಯನ್ನು ಮಾಡಿದರೆ, ಕಾರ್ಮಿಕನು ಯಾವ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದಾನೋ ಆ ಕಾರ್ಖಾನೆ ತನ್ನದು ಎಂಬ ಒಂದು ಮನೋಭಾವ ಅವನಲ್ಲಿ ಬರುತ್ತದೆ. ಈಗ ಸರ್ಕಾರ ಬಂಡವಾಳಶಾಹಿಯ ಸ್ಥಾನದಲ್ಲಿ ಬಂದು ಕುಳಿತುಕೊಳ್ಳುತ್ತಿದೆ. ಆದರೆ ಕಾರ್ಮಿಕ ಎನ್ನುವವನು ತಾನೇ ಮಾಲೀಕನಾಗಬೇಕು. ಚಿನ್ನದ ಗಣಿಗಳಲ್ಲಿ ಕೆಲಸ ಮಾಡತಕ್ಕ ಜನರು ಕಡಮೆ ಕೂಲಿಯನ್ನು ತೆಗೆದುಕೊಳ್ಳುತ್ತಾ ಒಂದು ಸಹಕಾರ ಸಂಘದ ಮೂಲಕ ಆ ಗಣಿಗಳ ಕೆಲಸ ಮಾಡಿದರೆ, ಅವರಲ್ಲಿ ಅದು ನನ್ನದು ಎಂಬ ಮನೋಭಾವ ಬಂದು ದೇಶದ ಉತ್ಪತ್ತಿ ಹೆಚ್ಚಾಗಬಹುದು. ಈ ಹೊತ್ತಿಗಿಂತ ಹತ್ತರಷ್ಟು, ನೂರರಷ್ಟು ಉತ್ಪತ್ತಿ ಹೆಚ್ಚು ಮಾಡಲು ಅವರು ಮನಸ್ಸು ಮಾಡಬಹುದು. ಉತ್ಸಾಹದಿಂದ ಕೆಲಸ ಮಾಡಿದರೆ ಕಾರ್ಮಿಕನು ಹೆಚ್ಚು ಕೆಲಸ ಮಾಡಿ ಉತ್ಪತ್ತಿಯನ್ನು ಹೆಚ್ಚಿಸುತ್ತಾನೆ. ಈ ದೃಷ್ಟಿಯಿಂದ Economic Democracy ಬರಬೇಕೆಂದು ಕಳಕಳಿಯಿಂದ ಹೇಳುತ್ತೇವೆ. ಇದನ್ನು ಕಾರ್ಯಗತ ಮಾಡುವುದಾದರೆ ನಮ್ಮ ಬೆಂಬಲ ತುಂಬ ಇರುತ್ತದೆ. ರಚನಾತ್ಮಕ ಸಲಹೆ ಕೊಡಬೇಕೆಂದು ಸರ್ಕಾರ ಹೇಳುತ್ತಿರುತ್ತಾರೆ; ಅದರಂತೆ ಕೊಡುತ್ತಿದ್ದೇನೆ. ಲ್ಯಾಂಡ್ ರೆವಿನ್ಯೂ 1,46,13,000 ರೂಪಾಯಿ ಇದೆ. ಐದು ತಿಂಗಳಿಗೆ 45,29,400 ರೂಪಾಯಿ ಖರ್ಚಿದೆ. ಉಳಿತಾಯವಾಗುವುದು ದೇಶಕ್ಕೆ 83,600 ರೂಪಾಯಿ ಈ ಐದು ತಿಂಗಳಲ್ಲಿ. ಅಮೇಲೆ ಈಗ ಮುಂದಿನ ವರ್ಷ ಸರ್ಕಾರದ ಅಂದಾಜಿನ ಪ್ರಕಾರ ಉತ್ಪತ್ತಿ 4,48,88,000 ರೂಪಾಯಿ, ಖರ್ಚು 1,31,36,000 ರೂಪಾಯಿ. ಒಟ್ಟು ದೇಶಕ್ಕೆ ಉಳಿತಾಯವಾಗುವುದು 3,17,72,000 ರೂಪಾಯಿ ಈ ಲೆಕ್ಕವನ್ನು ನಾನು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ಏಕೆಂದರೆ, Indian Taxation Enquiry Committee ಯವರು ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. "Land Revenue should be purely a local tax to be levied and collected by local bodies for the utilisation of local schemes." ಎಂದು ಹೇಳಿದ್ದಾರೆ. ನಾನು ಲೆಕ್ಕ ಮಾಡಿರುವ ಪ್ರಕಾರ, ನಮ್ಮ ದೇಶದ 19 ಜಿಲ್ಲೆಗಳಲ್ಲಿ 26 ಸಾವಿರ ಹಳ್ಳಿಗಳಿವೆ. ನಮಗೆ ಈಗ ಉಳಿತಾಯವಾಗುವುದು 3,17,52,000 ರೂಪಾಯಿ ಮಾತ್ರ. ಇದರಲ್ಲಿ ಜಿಲ್ಲಾ ಬೋರ್ಡುಗಳಿಗೆ ಶೇಕಡ 25 ರಷ್ಟು ಕೊಟ್ಟು ಉಳಿಯುವುದನ್ನು . . . .

Sri M. P. PATIL (Minister for Revenue).—There is the question of compensation to be paid for Inam Abolition and Settlement work which has to be taken into consideration. They are all important things.

Sri K. KENCHAPPA.—They are all temporary. They are not recurring. ನಾನು ಹೇಳುವುದು recurring expenses ವಿಚಾರ. ನಮ್ಮ ಕಾನೂನಿನ ಪ್ರಕಾರ ಶೇಕಡ 12½ ಗ್ರಾಮ

ಪಂಚಾಯಿತಿಗಳಿಗೆ, ಶೇಕಡ 12½ ಜಿಲ್ಲಾ ಬೋರ್ಡು ಗಳಿಗೆ ಕೊಡುತ್ತಾರೆ. ಗ್ರಾಮ ಪಂಚಾಯಿತಿ ಜಿಲ್ಲಾ ಬೋರ್ಡುಗಳನ್ನು ಭಿಕ್ಷುಕರಂತೆ ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು.—ಅಲ್ಲಿ ಕೆಲವು ಕಡೆ ನೂರಕ್ಕೆ 15 ರಷ್ಟು ಭಾಗ ಕೊಡುತ್ತಿದ್ದಾರೆ. ಮಾತನಾಡುವಾಗ ಬರಿಯ ಹಿಂದಿನ ಮೈಸೂರಲ್ಲದೆ ಹೊಸ ಮೈಸೂರಿನ ವಿಚಾರವನ್ನೂ ತಿಳಿದುಕೊಂಡು ಹೇಳಬೇಕೆಂದು ಮಾನ್ಯ ಸದಸ್ಯರನ್ನು ಪ್ರಾರ್ಥಿಸುತ್ತೇನೆ. It is a general request, I am making to the Hon'ble Members. They may look into all the areas and all the regions and offer their remarks so that it may be more useful.

ಶ್ರೀ ಕೆ. ಕೆಂಚಪ್ಪ.—ಈಗ ನಮ್ಮ ಹಳೆಯ ಮೈಸೂರು ದೇಶದ ಕಾನೂನಿನ ಪ್ರಕಾರ ಹೀಗಿದೆ. ಮುಂದೆ ಆಗಬೇಕಾದ ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ. Indian Taxation Enquiry Commission ಅವರು ಕೊಟ್ಟಿರುವ ಅಭಿಪ್ರಾಯವನ್ನು ತೆಗೆದುಕೊಂಡರೆ, ಪದೇಪದೇ ಗುಲ್ಬರ್ಗ ಜಿಲ್ಲೆಯ ಕೆಲವಾರು ಹಳ್ಳಿಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಹಣವನ್ನು ಕೊಟ್ಟಿದ್ದಾರೆಂದು ಹೇಳಬಹುದು. ಗ್ರಾಮ ಪಂಚಾಯಿತಿ ಜಿಲ್ಲಾ ಬೋರ್ಡುಗಳಿಗೆ ಈಗ ಇಲ್ಲಿ ನಿಗದಿ ಮಾಡಿರತಕ್ಕ ಮೊಬಲಗಿನಲ್ಲಿ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಹಣವಿಲ್ಲ. ಆದುದರಿಂದ ಸರ್ಕಾರವನ್ನು ಭಿಕ್ಷೆ ಬೇಡಿ ಗ್ರಾಂಟು ತೆಗೆದುಕೊಳ್ಳಬೇಕಾಗಿದೆ. ಆ ಸಂಸ್ಥೆಗಳ ಸ್ಥಿತಿ ಹೀಗಿದೆ. ಇದು ಬೇಡ, ಅವುಗಳು ಸ್ವಾವಲಂಬಿಗಳಾಗಿರುವಂತೆ ಮಾಡಬೇಕು. ಅವರು ಕೇಳಿದಾಗ ಬೇಕಾದ ಹಳ್ಳಿಗಳಿಗೆ ಬೇಕಾದಷ್ಟು ಹಣವನ್ನು ಸರ್ಕಾರ ಕೊಡಬಹುದು. ಇದೆಲ್ಲವನ್ನೂ ಲೆಕ್ಕಹಾಕಿದರೆ ಅದಕ್ಕಿಂತ ಹೆಚ್ಚಾಗಬಹುದು. ಪ್ರತಿ ಹಳ್ಳಿಯ ಅಭಿವೃದ್ಧಿಗಾಗಿ ಕಾನೂನೇಕೆ ಮಾಡುವುದಿಲ್ಲ? ಈಗ ಜಿಲ್ಲಾ ಬೋರ್ಡ್ ಗ್ರಾಮಪಂಚಾಯಿತಿಗಳಿಗೆ ಕೊಡುವ ಹಣವನ್ನು ಎಂದರೆ, ಹಳೆಯ ಮೈಸೂರಿನ ಕಾನೂನಿನ ಪ್ರಕಾರ ಕೊಡಬೇಕಾದ ಹಣವನ್ನೂ ಕೊಟ್ಟಿಲ್ಲ. ಬಹಳ ಕಡಮೆ ಕೊಟ್ಟಿದ್ದಾರೆ. 106 (2) ನೆಯ ನಿಯಮದ ಪ್ರಕಾರ ಕೊಟ್ಟಿಲ್ಲ. 106 (1) ರ ಪ್ರಕಾರ ಅಲ್ಪಸ್ವಲ್ಪ ಕೊಟ್ಟಿದ್ದಾರೆ, ಇದನ್ನೂ ಪೂರ್ತಿ ಕೊಟ್ಟಿಲ್ಲ. ಇದರ ವಿಚಾರ ಆಗಲೇ ಚರ್ಚೆನಡೆದಿದೆ. ಈ ದೃಷ್ಟಿಯಿಂದ ಆಲೋಚನೆ ಮಾಡಿದರೆ, ಎಲ್ಲ ಹಳ್ಳಿಗಳಿಗೂ ಸರ್ಕಾರ 4,48,88,000 ರೂಪಾಯಿಗಳನ್ನಾದರೂ ಕೊಡಬೇಕಾಗಿ ಬರುತ್ತದೆ. ಇದನ್ನೆಲ್ಲಾ ಲೆಕ್ಕಮಾಡಿ ನಾನು ಆಲೋಚನೆ ಮಾಡಿದ್ದೇನೆ.

9 A.M.

ಶೇಕಡ 25ರಷ್ಟು ಕೊಟ್ಟರೆ ಎಷ್ಟಾಗುತ್ತದೆ, ಶೇಕಡ 75ರಷ್ಟು ಕೊಟ್ಟರೆ ಎಷ್ಟಾಗುತ್ತದೆ ಎಂಬುದನ್ನು ಲೆಕ್ಕಹಾಕಿ ನೋಡಬೇಕಾಗಿದೆ. ಹಾಗೆ ಕೊಟ್ಟರೂ ಸಹ ಅದು ಬಹಳ ಕಡಮೆಯೇ ಆಗುತ್ತದೆ. ಆ ದಾವಾಪಷದ ಪ್ರಕಾರ ಕೊಟ್ಟಾಗ್ಯೂ ಒಂದೊಂದು ಹಳ್ಳಿಗೆ ಒಂದು ವರ್ಷಕ್ಕೆಲ್ಲಾ 800-900 ಬಂದರೆ ಹೆಚ್ಚಾಯಿತು. ಆಗ ಇಡೀ ರಾಜ್ಯಕ್ಕೆಲ್ಲ ಸುಮಾರು 50-60ಸಾವಿರ ಖರ್ಚು ಬಂದಂತಾಗುತ್ತದೆ. ಆದರೆ ಅವರಿಗೆ ಬರತಕ್ಕ ಮೊಬಲಗು ತೀರಕಡಮೆಯಾದ್ದರಿಂದ 19 ಜಿಲ್ಲೆಗಳವರೂ ಇದನ್ನು ಕೇಳುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ನಾನು ಈದಿವಸ ಸ್ವಲ್ಪ ಹೆಚ್ಚಿನ ವ್ಯಸನದಿಂದ ಹೇಳಬೇಕಾದ ಸಂಗತಿ ಇನ್ನೂ ಒಂದಿದೆ. ಈ ದಿವಸ ಶಿರಾ-ಹಿರಿಯೂರುಗಡಿಗಳ ಹತ್ತಿರ ಕರಿಯಾಲ ಪ್ರಾಜೆಕ್ಟ್ ಎಂಬ ಒಂದು ನೀರಾವರಿ ಯೋಜನೆಯನ್ನು ಮಾಡಿದ್ದಾರೆ. ಆ ಪ್ರಾಜೆಕ್ಟಿನ ಕೆಳಗಿರತಕ್ಕ ಜಮೀನುಗಳಿಗೆ ಎಕರೆಯೊಂದಕ್ಕೆ 500ರೂ.ಗಳ ಕಾಂಟ್ರಿಬ್ಯೂಷನ್ ಮತ್ತು 15ರೂ. ಗಳ ನೀರು ಸರದಿ ಕೊಡುತ್ತೇವೆಂದು ರೈತರಿಂದ ಸರ್ಕಾರದವರು ಮುಚ್ಚಳಿಕೆ ಬರೆಸಿಕೊಳ್ಳಬೇಕೆಂದಿದ್ದಾರಂತೆ. ಹೀಗೆ ಅವರು ಯಾವ ಆಧಾರದ ಮೇಲೆ ಕೇಳುತ್ತಿದ್ದಾರೆ? ಇವರು ಯಾವತ್ತು ಭೂಮಿಯನ್ನು ಕ್ಲಾಸಿಫೈಮಾಡಿದ್ದಾರೆ ಎಂದು ಕೇಳುತ್ತೇನೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಭಾಗದಲ್ಲಿ ಎಕರೆಗೆ ಎರಡಾಣೆ ಕಂದಾಯವಿದೆ. ಅದನ್ನು ಕೇಳಿದ ಕೂಡಲೆ ಏನಪ್ಪಾ! ಇಷ್ಟು ಕಡಮೆ ಕಂದಾಯ, ಎಂಬ ಭಾವನೆ ಜನರಲ್ಲಿ ಬರಬಹುದು. ಆದರೆ ಆರೀತಿ ಕಡಮೆ ಕಂದಾಯ ಹಾಕಿರುವುದು ಆ ಜಮೀನು ಅಷ್ಟು ಕನಿಷ್ಠ ದರ್ಜೆಯದೆಂಬುದನ್ನು ತೋರಿಸುತ್ತದೆಯೇ ವಿನಾ ಕಂದಾಯ ಕಡಮೆ ಎಂದೇನೂ ಅಲ್ಲ. ಸುಮಾರು ಇಲ್ಲಿಗೆ 50-100ವರ್ಷಗಳ ಕೆಳಗೆ ಮೊದಲನೇ ಬಾರಿಗೆ ಜಮೀನುಗಳ ಒರಿಜಿನಲ್ ಸರ್ವೆಯನ್ನು 1863ರಲ್ಲಿ ನಡೆಸಲಾಯಿತು. ಆ ನಂತರ 1902 ರಲ್ಲಿ ರೀಸರ್ವೆಮಾಡಿದರು. ಹಾಗೆ ಆಗಿನಕಾಲದಲ್ಲಿ ಜಮೀನುಗಳ ಸರ್ವೆ ನಡೆದಾಗ ಪ್ರತಿಯೊಂದು ಭಾಗದ ಜಮೀನೂ ಎಂಥಾದ್ದು ಮತ್ತು ಅದರ ಶಕ್ತಿ ಎಷ್ಟಿದೆ-ಅದರ ಸಾರದ ಪ್ರಮಾಣ ಎಷ್ಟು ಇತ್ಯಾದಿಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ಅದಕ್ಕನುಗುಣವಾಗಿ ಭೂಮಿಗಳನ್ನು ಆ ದಿವಸ ಕ್ಲಾಸಿಫೈ ಮಾಡಿದರು. ಆ ಕ್ಲಾಸಿಫಿಕೇಷನ್ನೇ ಈವರೆಗೂ ನಡೆದುಕೊಂಡು ಬರುತ್ತಿದೆ. ಆದರೆ ಇತ್ತೀಚೆಗೆ ಅಲ್ಲಲ್ಲೆ ಕೆಲವು ಕಡೆ ರೀಸರ್ವೆ ಕೆಲಸವನ್ನು ನಡೆಸಿರಬಹುದು. ಆದಾಗ್ಯೂ ಈಚೆಗೆ ಈ ಕಾರ್ಯವನ್ನು ಹಿಂದಿನವರ ಹಾಗೆ ಯಾರೂ ಅಷ್ಟು ಕಳಕಳಿಯಿಂದ ಮಾಡುತ್ತಿಲ್ಲ. ವಾಸ್ತವಾಂಶಗಳು ಹೀಗಿರುವಾಗ ಜನರ ಮನಸ್ಸಿನಲ್ಲಿರತಕ್ಕ ಒಂದುಭಾವನೆ-ಏನೆಂದರೆ, ಏನಪ್ಪಾ-ಕೋಲಾರದಲ್ಲಿ ಜಮೀನ್ ಕಂದಾಯ ಎಕರೆ ಒಂದಕ್ಕೆ ಎರಡು ರೂಪಾಯಿಗಳಿದ್ದರೆ ಚಿತ್ರದುರ್ಗದಲ್ಲಿ 2 ಆಣೆಯಿದೆ, ಇಲ್ಲಿ ಕಂದಾಯ ಬಹಳ ಕಡಮೆ ಎನ್ನತಕ್ಕ ಮನೋಭಾವನೆ ಹೋಗಬೇಕು. ಈ ಹಿಂದೆ ಈ ರೀತಿ ಕಂದಾಯವನ್ನು ನಿರ್ಧರಿಸಿದವರು ತಜ್ಞರೇ ಹೊರತು ಬೇರೆಯವರಲ್ಲ. ಆಗಿನ ಕಾಲದಲ್ಲಿ ಪ್ರತಿಯೊಂದು ಅಂಶವನ್ನೂ ಗಣನೆಗೆ ತೆಗೆದುಕೊಂಡು ಕಂದಾಯವನ್ನು ಜಮೀನಿನ ಸಾರಕ್ಕನುಸಾರವಾಗಿ ನಿಗದಿಮಾಡಿರುತ್ತಾರೆ. ಹೀಗಿರುವಾಗ ಈ ದಿವಸ ಆ ಕರಿಯಾಲ ಪ್ರಾಜೆಕ್ಟಿನ ಕೆಳಗೆ ಇರುವ ಕನಿಷ್ಟಸಾರದ ಜಮೀನುಗಳಿಗೆಲ್ಲ ಎಕರೆಗೆ 500 ರೂಪಾಯಿಗಳ ಕಾಂಟ್ರಿಬ್ಯೂಷನ್ನನ್ನು ಸರ್ಕಾರದವರು ಯಾವ ಆಧಾರದಮೇಲೆ ಕೇಳುತ್ತಿದ್ದಾರೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಆ ಕರಿಯಾಲ ಪ್ರಾಜೆಕ್ಟಿನ ಕೆಳಗೆ ಬರತಕ್ಕ ಅಚ್ಚುಕಟ್ಟೆಲ್ಲ 2¾ ಅಥವಾ 3 ಸಾವಿರ ಎಕರೆಗಳಿದ್ದರೆ ಹೆಚ್ಚಾಯಿತು. ಇಷ್ಟು ಪ್ರದೇಶಕ್ಕೇ ಇವರು ಈ ರೀತಿ ಕಾಂಟ್ರಿಬ್ಯೂಷನ್—ವಾಟರ್‌ರೇಟ್ ಹಾಕತಕ್ಕದ್ದು ತುಂಬಾ ದುಬಾರಿ. ತಪ್ಪು ಲೆಕ್ಕಾಚಾರದ ಮೇಲೆ ಹಾಗೆ ಮಾಡುತ್ತಿದ್ದಾರೆ. ಈಹಿಂದೆ ಅಂಜನಾಪುರದಲ್ಲಿ 75-80ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒಂದು ಕೆರೆಯನ್ನು ಕಟ್ಟಿಸಲಾಯಿತು. ಆ ಕೆರೆಯ ಕೆಳಗೆ ಈ ಕರಿಯಾಲಾ ಪ್ರಾಜೆಕ್ಟಿನ ಅಚ್ಚುಕಟ್ಟು ಎಷ್ಟಿದೆಯೋ ಅದಕ್ಕೂ ಹೆಚ್ಚಾ ಗಿದೆ; ಎಂದರೆ ಅಲ್ಲಿ 80ಸಾವಿರ ಎಕರೆ ಸಾಗುವಳಿ ಆಗುತ್ತಿದೆ. ಆದರೆ ಅಲ್ಲಿ ಈರೀತಿ ಕಾಂಟ್ರಿಬ್ಯೂಷನ್ ಹಾಕಿಲ್ಲ. ಮಲೆನಾಡು—ಮೈದಾನ ವೆಂಬ ನೆಪದಮೇಲೆ ಹೀಗೆ ಜಾಸ್ತಿಹಾಕುವುದಾದರೆ ನಾನು

(ಶ್ರೀ ಕೆ. ಕೆಂಚಪ್ಪ)

ಕೇಳುತ್ತೇನೆ—ಬೈಲುಸೀಮೆ ಎಂದರೆ ಹೆಸರಾಗಿರತಕ್ಕ ಶಿರಾ, ಪಾವಗಡ, ಚಳ್ಳಕೆರೆ ಮೊಳಕಾಲ್ಮೂರು, ಹೊಸದುರ್ಗ ಇತ್ಯಾದಿ ಸ್ಥಳಗಳಲ್ಲೇನಾದರೂ ಅಲ್ಲಲ್ಲಿ ಹರಿದು ಹೋಗತಕ್ಕ ನೀರನ್ನು ಹಿಡಿದು ಒಂದುಕಟ್ಟೆ ಹಾಕಬೇಕೆಂದರೆ ಅಲ್ಲಿಗೆ ಈ ರೀತಿ ಲೆಕ್ಕಹಾಕಿ ಜನರಿಂದ ಕಾಂಟ್ರಿಬ್ಯೂಷನ್ ಕೇಳುವುದಾದರೆ, ಆ ಪ್ರದೇಶಗಳ ದೂ ತಲೆಯೆತ್ತುವಂತೆಯೇ ಇಲ್ಲ. ಆದ್ದರಿಂದ ಸರ್ಕಾರ ಈಗ ಹಾಕಿಕೊಂಡಿರತಕ್ಕ ಲೆಕ್ಕ ಶುದ್ಧಾಂಗವಾಗಿ ತಪ್ಪಾಗಿದೆ ಎಂದು ನನಗೆ ತೋರುತ್ತಿದೆ. Calculation is starting from a wrong point of view. ಆದುದರಿಂದ ನಾನು ಹೇಳುತ್ತಿರುವುದೇನೆಂದರೆ, ಈ ಹಿಂದೆ ಅವರೇನು ಆ ಒಂದು ಕ್ಲಾಸಿಫಿಕೇಷನ್ನನ್ನು ಲ್ಯಾಂಡ್ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾಲದಲ್ಲಿ ಮಾಡಿರುತ್ತಾರೋ ಅದರಂತೆ—ಎಂದರೆ ಆ ಕಾಲದಲ್ಲಿ ಸರ್ವೆ ಇಲಾಖೆಯವರು ಪ್ರತಿಯೊಂದು ಹಿಡುವಳಿ ಜಮೀನಿನ ಸಾರ ಆ ಜಮೀನು ಭಾಟಾ ಮಾರ್ಗಕ್ಕೆಷ್ಟು ದೂರದಲ್ಲಿದೆ ಅಥವಾ ಹತ್ತಿರದಲ್ಲಿದೆ ಮತ್ತು ರೈಲ್ವೆ ಲೈನಿಗೆ ಎಷ್ಟು ದೂರದಲ್ಲಿದೆ ಅಥವಾ ಎಷ್ಟು ಸಮೀಪದಲ್ಲಿದೆ, ಮತ್ತು ಅದಕ್ಕಿರುವ ನೀರಾವರಿ ಸೌಕರ್ಯಗಳೇನು ಎಂಬುದನ್ನೆಲ್ಲಾ ವಿಮರ್ಶೆಮಾಡಿ ಅದಕ್ಕನುಗುಣವಾಗಿ, ಕ್ಲಾಸಿಫಿಕೇಷನ್ ಮಾಡಿರುವುದರಿಂದ ಈಗಲೂ ಅವರು ಹಾಕಿರತಕ್ಕ ಕಂದಾಯಕ್ಕೆ ವಿರೋಧವಾಗಿ ಜನರಿಂದ ಹಣವನ್ನು ಸುಲಿಗೆ ಮಾಡಬಾರದೆಂದು ಹೇಳುತ್ತಿದ್ದೇನೆ. ಆ ಹೊಟ್ಟೆಗಿಲ್ಲದ ಜನರನ್ನು ಎಕರೆಗೆ 500ರೂಪಾಯಿ ಕಾಂಟ್ರಿಬ್ಯೂಷನ್ ಕೊಡಿ ಎಂದರೆ ಅವರೇನು ಕೊಟ್ಟಾರು? ಹಾಗೂ ಕೆಲವರು ವಿಧಿಯಿಲ್ಲದೆ ಎಕರೆಗೆ 300ರೂಪಾಯಿಗಳನ್ನು ಕೊಡುತ್ತೇವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದಾರಂತೆ. ಆದರೆ ಈ ಪ್ರಾಜೆಕ್ಟಿನ ಕೆಳಗಿರತಕ್ಕ ಭೂಮಿಯೆಲ್ಲ ಬಹಳ ನಿಕೃಷ್ಟವಾದದ್ದು. ಇದು ಫಲವತ್ತಾದ ಭೂಮಿಯಾಗಬೇಕಾಗಿದ್ದರೆ ಇನ್ನೂ 10-12ವರ್ಷಗಳು ಕಳೆಯಬೇಕು. ಆದಕಾರಣ ಸರ್ಕಾರದವರು ಹಾಗೆ ಹೆಚ್ಚಿನ ಕಾಂಟ್ರಿಬ್ಯೂಷನ್ ವಿಧಿಸುವ ವಿಚಾರದಲ್ಲಿ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ ಎಂದು ನಾನು ಸೂಚನೆ ಮಾಡುತ್ತೇನೆ. ಈ ಹಿಂದೆ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾಲದಲ್ಲಿ ಹೇಗೆ ಭೂಮಿಯನ್ನು ಕ್ಲಾಸಿಫೈ ಮಾಡಿದ್ದರೋ ಹಾಗೆಯೇ ಈಗಲೂ ಕ್ಲಾಸಿಫೈಮಾಡಿ, ಅನಂತರ ಸರ್ಕಾರದವರು ನೀರುಸರದಿ, ಕಾಂಟ್ರಿಬ್ಯೂಷನ್ ಇತ್ಯಾದಿಗಳನ್ನು ನಿರ್ಧರಿಸಬೇಕಾದದ್ದು ನ್ಯಾಯ. ಇತ್ತೀಚೆಗೆ ಜಮೀನ್ ಕಂದಾಯವನ್ನೂ ಸಹ ಅಧಿಕಾರಿಗಳೇ ತಮ್ಮ ಮನಸ್ಸಿಗೆ ಬಂದಹಾಗೆ, ಮನಸೋಇಚ್ಛೆ ಹಾಕುತ್ತಿದ್ದಾರೆಂದು ಕೇಳುತ್ತೇನೆ. ಹೀಗೆ ಜಮೀನ್ ಕಂದಾಯವನ್ನು ಮೊಕರೂರ್ ಮಾಡುವ ಅಧಿಕಾರ ಈ ರೆವಿನ್ಯೂ ಅಧಿಕಾರಿಗಳಿಗಿಲ್ಲ. ಆದರೆ ಎಲ್ಲೋ ಕೇವಲ ಹಂಗಾಮಿ ನೀರುಸರದಿಗಳ ಬಗ್ಗೆ ಇವರಿಗೆ ಅಧಿಕಾರವಿರಬಹುದು. ಕೆಲವು ಹಳ್ಳದ ಅಕ್ಕಪಕ್ಕದಲ್ಲಿರುವ ಖುಷ್ಕಿ ಜಮೀನುಗಳಿಗೆ ನೀರನ್ನು ಬಿಟ್ಟುಕೊಳ್ಳಲು ಅವಕಾಶ ಕೊಡಬೇಕೆಂದು ಯಾರಾದರೂ ಕೇಳಿದರೆ ರೆವಿನ್ಯೂ ಅಧಿಕಾರಿಗಳು ಹಂಗಾಮಿ ಪರವಾನಿಗೆಯನ್ನು ಕೊಡಬಹುದೆಂದು ರೂಲ್ಸಿನಲ್ಲಿದೆ. 1950ರಲ್ಲಿ ಹಿರಿಯೂರು ತಾಲ್ಲೂಕಿನಲ್ಲಿ ಜಮೀನ್ ಕಂದಾಯವನ್ನು ನಿರ್ಧರಿಸುವಾಗ ಜಮೀನ್ ರೀಸರ್ವೆ ನಡೆಸಿ ಅದರ ಕಂದಾಯವನ್ನು ರೆವಿನ್ಯೂ ಇಲಾಖಾ ಅಧಿಕಾರಿಗಳು, ಎಂದರೆ, ಡಿ.ಸಿ. ಮತ್ತು ರೆವಿನ್ಯೂ ಕಮಿಷನರುಗಳೇ ನಿಗದಿ ಮಾಡಿಬಿಟ್ಟಿದ್ದಾರೆ. ಈ ರೀತಿ ವಾಣೀವಿಲಾಸ ಸಾಗರದ ಹಿಂದೆ ಮಾಡಿರುತ್ತಾರೆ. ಆದರೆ ಕಾನೂನಿನಲ್ಲಿ ಹಂಗಾಮಿ ನೀರುಸರದಿಗೆ 4½ರೂಗಳಿತ್ತು. ಬೇಸಿಗೆಯಲ್ಲಿ ನೀರು ಸರಬರಾಯಿ ಕೇಳಿದವರಿಗೆ ಒಂದು ರೂಪಾಯಿ ಜಾಸ್ತಿ ಎಂದರೆ 5½ರೂಪಾಯಿಗಳೆಂದಿತ್ತು. ಹೀಗಿರುವಾಗ ಕಂದಾಯ ಹೆಚ್ಚಿಸುವುದಕ್ಕೆ ಯಾರಿಗೆ ಅಧಿಕಾರವಿದೆ? ನೀರಾವರಿ ಜಮೀನುಗಳಿಗೆ ಹಾಕತಕ್ಕ ಕಂದಾಯಕ್ಕೆ ಕೆಲವು ಖಚಿತವಾದ ನಿಯಮಗಳಿವೆ. ಅವುಗಳನ್ನು ಉದಾಸೀನಮಾಡಿ ಈ ದಿವಸ ಒಂದುರೀತಿ ಕಾನೂನು—ನಾಳೆ ಇನ್ನೊಂದು ರೀತಿ ಕಾನೂನು ಮತ್ತೊಂದು ದಿವಸಕ್ಕೆ ಮತ್ತೊಂದು ರೀತಿ ಕಾನೂನು ಮಾಡುವುದು ಸರ್ವಥಾ ಸರಿಯಾದದ್ದಲ್ಲ. Where is the question of certainty, permanency? It is a fundamental principle in land revenue that there should be certainty and permanency—permanent in the sense that it must be permanent for at least thirty years. ಹೀಗೆ ಮೂವತ್ತುವರ್ಷಗಳಿಗೊಮ್ಮೆ ಆಗತಕ್ಕ ಸರ್ವೆ ಅಂಡ್ ಸೆಟಲ್‌ಮೆಂಟನ್ನು ಈದಿವಸ ಸರ್ಕಾರದವರು 1940ನೇ ಇಸ್ವಿಯಲ್ಲೇ ಒಂದುತರಹ ಕಾನೂನು, 1947ರಲ್ಲಿ ಮತ್ತೊಂದು ರೀತಿಯ ಕಾನೂನು, 1957ಕ್ಕೇ ಒಂದುರೀತಿ ಕಾನೂನು, ಹೀಗೆಲ್ಲಾ ಮಾಡುವುದಕ್ಕೆ ಇವರಿಗೆ ಅಧಿಕಾರವೆಲ್ಲಿಂದ ಬಂತು? ನಾನು ಲ್ಯಾಂಡ್ ರೆವಿನ್ಯೂಕೋಡು ರೂಲ್ಸು-ರೆಗ್ಯುಲೇಷನ್ ಇತ್ಯಾದಿಗಳನ್ನೆಲ್ಲಾ ಓದಿದ್ದೇನೆ. ಎಲ್ಲಿ ಹುಡುಕಿ ನೋಡಿದರೂ ಸರ್ಕಾರದವರಿಗೆ ಹೀಗೆ ಜಮೀನಿಗೆ ಸಂಬಂಧಪಟ್ಟ ಕಾನೂನುಗಳನ್ನು ಕ್ಷಿಪ್ರಕಾಲದಲ್ಲೇ ಬದಲಾವಣೆ ಮಾಡತಕ್ಕಂಥ ಅಧಿಕಾರವಿದ್ದಹಾಗೆ ಕಂಡು ಬರುತ್ತಿಲ್ಲ. ಸರ್ಕಾರದವರು ಯಾವ ಕೆಲಸವನ್ನೇ ಮಾಡಲಿ ಅದು ಕಾನೂನು-ನಿಯಮಗಳಿಗೆ ಒಳಪಟ್ಟಿದ್ದಾಗಿರಬೇಕು. ಆದರೆ ಅದನ್ನು ಉದಾಸೀನಮಾಡಿ ಕಾರ್ಯಮಾಡತಕ್ಕ ಸಂದರ್ಭಗಳು ಕಂಡುಬರುತ್ತಿರುವುದರಿಂದ ಅವರು ಬಹಳ ಹುಷಾರಾಗಿರಬೇಕೆಂದು ಹೇಳುತ್ತೇನೆ. ಸರ್ಕಾರದವರು ಕಾನೂನನುಸರಿಸಿ ಕೆಲಸ ಮಾಡಲಿ, ಅದಕ್ಕೆ ನಾವೆಂದೂ ಬೇಡ ಎಂದು ಹೇಳುವುದಿಲ್ಲ. ಇಲ್ಲಿಯವರೆಗೂ ನಾನು ಕೇವಲ ಈ ಜಮೀನ್ ಕಂದಾಯ ಒಂದರ ವಿಚಾರ ಹೇಳಿದಂತಾಯಿತು. ಇನ್ನು ಇದಕ್ಕೆ ಸಂಬಂಧಿಸಿದ ಹಾಗೆ ಅನೇಕ ಸೆಸ್‌ಗಳನ್ನು ಬೇರೆ ಸರ್ಕಾರ ರೈತನಿಂದ ವಸೂಲ್ಮಾಡುತ್ತಿದ್ದಾರೆ. ಪ್ರತಿಯೊಬ್ಬರೈತನೂ ತಾನು ತೆರಬೇಕಾದ ಜಮೀನ್ ಕಂದಾಯದ ಜೊತೆಗೆ ಎಜ್ಯುಕೇಷನ್ ಸೆಸ್, ಇರಿಗೇಷನ್ ಸೆಸ್, ಲೋಕಲ್‌ಫಂಡ್ ಸೆಸ್, ರೈಲ್ವೆಸೆಸ್, ಇತ್ಯಾದಿ ಅನೇಕ ಸೆಸ್‌ಗಳನ್ನೂ ಕೊಡಬೇಕು. ರೈತನಿಂದ ಈದಿವಸ ಸರ್ಕಾರದವರು ವಸೂಲ್ಮಾಡುತ್ತಿರುವ ಸೆಸ್‌ಗಳ ವಿಚಾರವಾಗಿ ಈಹಿಂದೆ ಶ್ರೀ. H. B. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದ್ದ ಲ್ಯಾಂಡ್‌ರೆವಿನ್ಯೂ-ರಿವಿಜನ್ ಸಮಿತಿಯವರು ಒಂದು ವಿಚಾರವನ್ನು ತಿಳಿಸಿದ್ದಾರೆ. ಅದೇನೆಂದರೆ, ರೈತನ ಮೇಲೆ ಸರ್ಕಾರದವರು ಈ ಸೆಸ್ಸುಗಳನ್ನು ವಿಧಿಸುತ್ತಿರುವುದು ಒಂದು ದೊಡ್ಡತಪ್ಪು ಎಂದು. ಈ ದಿವಸ ರೈತರಾದವರು ತಾವು ಉಳತಕ್ಕ ಜಮೀನಿಗೆ ಕಂದಾಯ ಕೊಡಬೇಕು ಹತ್ತಾರು ಸೆಸ್ ಮೊಬಲಗನ್ನು ತೆರಬೇಕು; ಆ ನಂತರ ಸೇಲ್ಸ್‌ಟ್ಯಾಕ್ಸ್ ಕೊಡಬೇಕು, ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಕೊಡಬೇಕು; ಹೀಗೇ ಅವನು ಇನ್ನೂ ಎಷ್ಟೋ ತೆರಿಗೆಗಳನ್ನು ಕೊಡಬೇಕು. ತೆರಿಗೆಕೊಡುವವನೊಬ್ಬ, ಅನುಕೂಲ ಹೊಂದುವವನು ಬೇರೊಬ್ಬ. ಹೀಗಿರುವಾಗ ಆ ರೈತನಮೇಲೆ ಹೀಗೆ ಈ ತೆರಿಗೆಗಳನ್ನೆಲ್ಲಾ ವಿಧಿಸುತ್ತಿರಿ. This

is a kind of exploitation. ಆದ್ದರಿಂದ ಈ ವಿಚಾರದಲ್ಲಿ ಹಿಂದೆ ನೇಮಕವಾಗಿದ್ದ ಲ್ಯಾಂಡ್ ರೆವಿನ್ಯೂ ರಿವಿಜನ್ ಸಮಿತಿಯವರು ಕೊಟ್ಟಿರತಕ್ಕ ಸೂಚನೆ ಬಹಳ ಸಾಧುವಾದದ್ದಾಗಿದೆ. ಇನ್ನುಮೇಲಾದರೂ ತಾವು ರೈತನಮೇಲೆ ಇಂದು ಹಾಕುತ್ತಿರುವ ಸೆಸ್‌ಗಳನ್ನು ಸಂಪೂರ್ಣವಾಗಿ ಮನ್ನಾಮಾಡಬೇಕೆಂದು ಹೇಳುತ್ತೇನೆ. ಇನ್ನುಮೇಲೆ ಸರ್ಕಾರದವರು ಖಂಡಿತವಾಗಿಯೂ ರೈತರನ್ನು ಹೀಗೆ ಎಕ್ಸ್‌ಪ್ಲಾಯಿಟ್ ಮಾಡಬಾರದು. ನಾನಿಲ್ಲಿಯತನಕ ಮಾತನಾಡುತ್ತಿದ್ದುದು ನಮ್ಮ ಹಳೆಯ ಮೈಸೂರಿಗೆ ಸಂಬಂಧಪಟ್ಟ ವಿಚಾರವನ್ನು ಮಾತ್ರ. ಆದ್ದರಿಂದ ಇಲ್ಲಿನ ವಿಚಾರ ಮಾತ್ರ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದನ್ನು ಇನ್ನೂ ಮೇಲೆ ಸ್ವಲ್ಪ ಓದಿರಿ. You are the leader of the opposition.

ಶ್ರೀ ಕೆ. ಕೆಂಚಪ್ಪ.—ಓದುತ್ತೇನೆ. ಇದೊಂದೇ ತಿಳಿದುಕೊಂಡರೆ ಸಾಕಾಗುವುದಿಲ್ಲ.

Mr. SPEAKER.—I am trying to get from Bombay and other places so that you can have a comprehensive idea.

ಶ್ರೀ ಕೆ. ಕೆಂಚಪ್ಪ.—ಮುಂದಿನ ಮೀಟಿಂಗಿನ ವೇಳೆಗೆ ಅದನ್ನೆಲ್ಲಾ ತಿಳಿದುಕೊಳ್ಳುತ್ತೇನೆ. ಲ್ಯಾಂಡ್‌ರೆವಿನ್ಯೂ ಕಮಿಟಿಯವರು ಒಂದು ಅಭಿಪ್ರಾಯ ಕೊಟ್ಟಿದ್ದಾರೆ:

"Sales Tax or a tax on produce cannot be a usitable substitute for land revenue in view of the practical difficulties of levying cesses on agricultural produce" ಇದನ್ನು ಸ್ವಲ್ಪ ಗಮನಿಸಬೇಕು. Agricultural Incom-tax ಹಾಕುವುದರಲ್ಲಿ ಒಂದು ತತ್ವವಿರಬೇಕು. Minimum Holdings ಎಂಬುದನ್ನು ತೀರ್ಮಾನಮಾಡಿ ಅದರ ಮೇಲೆ assessment ತೆಗೆದು ಹಾಕಿ ತಾವು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ, ಅದು ತತ್ವಕ್ಕನುಗುಣವಾಗಿರುತ್ತದೆ. ಏಕೆಂದರೆ ಇತ್ತಲಾಗಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸನ್ನೂ ಕೊಡಬೇಕು. ಅತ್ತಲಾಗಿ ಲ್ಯಾಂಡ್ ರೆವಿನ್ಯೂ, ಸೇಲ್ಸ್‌ಟ್ಯಾಕ್ಸ್ ಮುಂತಾಗಿ ಇತರ ವಿವಿಧ ತೆರಿಗೆಗಳನ್ನೂ ಕೊಡಬೇಕೆಂದರೆ ಅವನಿಗೆಷ್ಟು ಕಷ್ಟವಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಅವರು ಅಲ್ಲಿ 'substitute' ಎಂಬ ಪದವನ್ನು ಉಪಯೋಗಿಸಿದ್ದಾರೆ. ಅಂದರೆ ಇಲ್ಲವೇ, ತಾವು ಮಿನಿಮಂ ಹೋಲ್ಡಿಂಗ್ಸ್ ಇಟ್ಟುಕೊಂಡು ಕಂದಾಯ ವಜಾಮಾಡಿ, ಇನ್‌ಕಂಟ್ಯಾಕ್ಸ್ ಹಾಕಿ, ಇಲ್ಲದಿದ್ದರೆ ಜಮೀನು ಕಂದಾಯ ಇಟ್ಟುಕೊಂಡು ಇನ್‌ಕಂ ಟ್ಯಾಕ್ಸ್ ಬಿಟ್ಟುಬಿಡಿ. ಇದು ಒಂದು ವಿಷಯವಾಯಿತು. ಅಲ್ಲದೆ, ಕಮಿಟಿಯವರು ಇನ್ನೂ ಒಂದು ವಿಷಯವನ್ನು ತಿಳಿಸಿದ್ದಾರೆ. "In Mysore conditions are favourable for the introduction of Agricultural Incom-tax" ಎಂದು. ಆದ್ದರಿಂದ ನೀವೀಗ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿರುವಾಗ ಇದನ್ನು ಸ್ವಲ್ಪ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ, ನಮ್ಮ ಲ್ಯಾಂಡ್ ರೆವಿನ್ಯೂ ಆಕ್ಟಿನಲ್ಲಿ ಖುಷ್ಕಿ ಜಮೀನಿನಲ್ಲಿ ಅಕಸ್ಮಾತ್ತಾಗಿ ಮಳೆ ಬಾರದೆ ಬೆಳೆ ಹೋದರೆ ಯಾವರೀತಿ ರೆಮಿಷನ್ ಕೊಡಬೇಕೆಂಬುದನ್ನು ಹೇಳಿಲ್ಲ. ಹಿಂದೆ ಒಂದಾನೊಂದು ಕಾಲದಲ್ಲಿ ಇದೇ ನಮ್ಮ ಕಾಂಗ್ರೆಸ್ ಮಿತ್ರರು ಇದೇ ಅಂಶದ ಬಗ್ಗೆ ತಮ್ಮ ಅಸಮ್ಮತಿಯನ್ನು ಸೂಚಿಸಿ, ಈ ಬಗ್ಗೆ ಒಂದು ಕಾನೂನು ಮಾಡಬೇಕೆಂದು ಹೇಳಿ walk out ಕೂಡ ಮಾಡಿದ್ದರು. ಈ ಮಂತ್ರಿಗಳೇ ಆಗ ಇದ್ದರು. 1938 ನೆಯ ಇಸವಿಯಲ್ಲಿ ದೊಡ್ಡ ಗಲಾಟೆಯೇ ನಡೆದಿತ್ತು. ಇಂಥ ಸಂದರ್ಭದಲ್ಲಿ ರೆಮಿಷನ್ ಏನಾದರೂ ಕೊಡಬೇಕಾಗಿದ್ದರೆ ಅದಕ್ಕೊಂದು ಸ್ಪೆಷಲ್ ಆರ್ಡರನ್ನೇ ಸರ್ಕಾರ ಹೊರಡಿಸಬೇಕು. ಈ ಪದ್ಧತಿಯೇಕೆ? ನೇರವಾಗಿ ಲ್ಯಾಂಡ್ ರೆವಿನ್ಯೂ ರೆಮಿಷನ್ ಮಾಡಬೇಕೆಂದು ಕಾನೂನು ಮಾಡುವುದರಲ್ಲಿರುವ ತೊಂದರೆಯೇನು ನಮ್ಮನ್ನು constructive suggestions ಕೊಡಲಿಲ್ಲ, ಕೊಡಲಿಲ್ಲ ಎಂದು ಹೇಳುತ್ತಿರುತ್ತೀರಲ್ಲ, ತೆಗೆದುಕೊಳ್ಳಿ, ಎಷ್ಟು ಬೇಕು, ತಮಗೆ ಕೊಡುತ್ತೇವೆ.

(Laughter in the House)

ಹಿಂದೆ ಒಂದುಸಾರಿ 1945-46 ನೆಯ ಇಸವಿಯಲ್ಲಿ ಚಿತ್ರದುರ್ಗ, ಕೋಲಾರ, ತುಮಕೂರು ಈ ಮೂರು ಜಿಲ್ಲೆಗಳಲ್ಲೂ ಮಳೆಬಾರದೆ ಬೆಳೆಯಾಗಲಿಲ್ಲ. ಅಂಥ ರೆಮಿಷನ್ ಕೊಡಬೇಕಾದ ಸಂದರ್ಭದಲ್ಲೂ ನೇರವಾಗಿ ಅವಕಾಶವಿಲ್ಲದ ರಿಂದ ಅದಕ್ಕಾಗಿ ಒಂದು ಸರ್ಕಾರಿ ಆರ್ಡರ್ ಸಾದರು ಮಾಡಿ ಅರ್ಧ ರೆಮಿಷನ್ ಮಾತ್ರ ಕೊಟ್ಟರು. ಇನ್ನರ್ಧವನ್ನು ಬರುವ ವರ್ಷ ವಸೂಲು ಮಾಡಬೇಕೆಂದು ಹೇಳಿದರು.

ತರೀ ಕಂದಾಯದಲ್ಲಿ ತಾನೆ ರೆಮಿಷನ್ ಹೇಗೆ ಮಾಡುತ್ತೀರಿ? ನೀರುಬರದೇ ಇದ್ದರೆ ಶೇಕಡ 25ರಷ್ಟು ರೆಮಿಷನ್ ಮಾಡಬಹುದೆಂದಿದೆ. ಇದಕ್ಕೂ ಸರ್ಕಾರಿ ಹುಕುಂ ಸಾದರು ಮಾಡಬೇಕು. ಇದೇಕೆ? ಡೆಪ್ಯುಟಿ ಕಮಿಷನರೆ, ಮಳೆಬಾರದೆ ಕೆರೆಗೆ ನೀರು ಬರದಿರುವುದನ್ನು ನೋಡಿಕೊಂಡು ರೆಮಿಷನ್ ಕೊಡಬಹುದೆಂದೇಕೆ ಅಧಿಕಾರ ಕೊಡಕೂಡದು?

ಇನ್ನು regulation of the use of pasturage ವಿಚಾರದಲ್ಲಿ ಒಂದು ಮಾತು. ದಿನ ಬೆಳಗಾಗಿ ಎದ್ದರೆ ಗೋಸಂಪತ್ತನ್ನು ಹೆಚ್ಚುಮಾಡಬೇಕು ಗೋಸಂರಕ್ಷಣೆಯಾಗಬೇಕು ಎಂದು ದೊಡ್ಡ ದೊಡ್ಡ ಪದಗಳು ಎಲ್ಲೆಲ್ಲೂ ಕೇಳಿಬರುತಿವೆ. ತಾವು Cattle showಗಳಲ್ಲಿ ಮಾಡುವ ಭಾಷಣಗಳನ್ನು ನೋಡಿ. ಆಗ ತಾವು ಹೇಳುವುದಕ್ಕೂ, ಇಲ್ಲಿ pasturage ಗಳನ್ನು regulate ಮಾಡುತ್ತಿರತಕ್ಕ ನೀತಿಗೂ ಎಷ್ಟು ಅಂತರ! ಹಿಮಾಲಯಕ್ಕೂ ಕನ್ಯಾಕುಮಾರಿಗೂ ಇರುವಷ್ಟು ದೂರವಿದೆಯಲ್ಲಾ ನಿಮ್ಮ ಭಾವನೆಗಳಿಗೂ ನಿಮ್ಮ ಆಚರಣೆಗಳಿಗೂ. ಹಳ್ಳಿಗಳಲ್ಲಿ pasturage ಇಟ್ಟುಕೊಳ್ಳುವುದರಲ್ಲಿ ನೀವಿಟ್ಟಿರತಕ್ಕ ನಿಯಮವೇನು? ಹಳ್ಳಿಯಲ್ಲಿ ಎಷ್ಟು ದನಗಳಿವೆ, ಅವಕ್ಕೆ ಮೇಯುವುದಕ್ಕೆ ಎಷ್ಟು ಜಮೀನುಬೇಕು ಆದನ್ನು ನೋಡಿ ಸಾಕಷ್ಟು ಬಿಡಬೇಕಲ್ಲವೆ? ಅದೂ ತಾವೀಗ ಬಿಟ್ಟಿರತಕ್ಕದ್ದು ಹುಲ್ಲು ಬೆಳೆಯತಕ್ಕ ಜಮೀನೆ ಅಥವಾ ಕಲ್ಲು ಬುರುಡೆ ಜಮೀನೇ? "ಈ ಮೂವತ್ತು ಕೋಟಿ ಜನರು ನರರೇ ಅಥವಾ ನರಕುರಿಗಳೇ" ಎಂದು ಒಂದು ಪದ್ಯದಲ್ಲಿ ಹೇಳುವಂತೆ ನಾನು ಇಂದು ಕೇಳುತ್ತೇನೆ, ಈ ಮೂವತ್ತು ಲಕ್ಷ ದನಗಳು, ದನಗಳೇ ಅಥವಾ ಬಂಡುಗಳೇ ಎಂದು. ದನಗಳು ಹೊರಗೆ ಹೋದರೆ ಅವಕ್ಕೆ ಮೇವು ಬೇಡವೇ? ಒಂದೊಂದು ಊರಿನಲ್ಲೂ ಗೋಮಾಳಗಳೆಂಬುದನ್ನೇ ತೆಗೆದು ಹಾಕಿ ಯಾರ್ಯಾರಿಗೋ ಬೇಸಾಯಕ್ಕೆ ಕೊಟ್ಟುಬಿಟ್ಟಿದ್ದೀರಿ. ಈ ನಿಯಮವನ್ನು ಎಷ್ಟು ದಿವಸ ನೀವಿಟ್ಟುಕೊಂಡಿರುತ್ತೀರೋ ಅಷ್ಟು ದಿವಸ ನಮ್ಮ ಪಶುಸಂಪತ್ತು ಅಭಿವೃದ್ಧಿಯಾಗಲಾರದು ಎಂದು ಹೇಳುತ್ತೇನೆ. ಒಂದು ಸರ್ವೆಮಾಡಿ ಯಾವಯಾವ ಊರಿನಲ್ಲಿ ಎಷ್ಟು ದನಗಳಿವೆ, ಈ ಹೊತ್ತು ಎಷ್ಟಿದೆ, ಇನ್ನು ಹತ್ತು ವರ್ಷಗಳಾದಮೇಲೆ ಎಷ್ಟಿರುತ್ತವೆ ಎಂಬುದನ್ನು

(ಶ್ರೀ ಕೆ. ಕೆಂಚಪ್ಪ)

ಅಂದಾಜುಮಾಡಿ, ಅದಕ್ಕೆ ತಕ್ಕಂತೆ ಗೋಮಾಳಗಳನ್ನು ಬಿಡಿ.

Sri M. P. PATIL.—On a point of information. All this census has been collected. Records are there, rules are there. Gomal lands are reserved for the purpose.

Sri K. KENCHAPPA.—Gomals are not reserved for the purpose. They are being released. There are some villages in which there is no pasturage.

Sri M. P. PATIL.—That is not correct. If the gomal lands are in excess, then they are being released.

ಶ್ರೀ ಕೆ. ಕೆಂಚಪ್ಪ.—ನಾನು ಬೇಕಾದಷ್ಟು ಹಳ್ಳಿಗಳನ್ನು ತೋರಿಸುತ್ತೇನೆ. ಎಷ್ಟೋ ಹಳ್ಳಿಗಳಲ್ಲಿ Pasturage ಏನೂ ಇಲ್ಲ. ಇನ್ನು ಕೆಲವು ಕಡೆಗಳಲ್ಲಿ ಹುಲ್ಲೇ ಬೆಳೆಯುದಿರುವ ಭೂಮಿಯನ್ನು ಗೋಮಾಳವೆಂದು ಬಿಟ್ಟಿರುತ್ತಾರೆ.

ಶ್ರೀ ಆರ್. ಚನ್ನಿಗರಾಮಯ್ಯ.—ಗೋಮಾಳವೇ ಇಲ್ಲದಿರುವ ಅನೇಕ ಕಡೆಗಳಲ್ಲಿ ಗೋಸಂಪತ್ತು ಬಹಳ ಚೆನ್ನಾಗಿದೆಯಲ್ಲಾ, ಅದಕ್ಕೇನು ಹೇಳುತ್ತೀರಿ?

ಶ್ರೀ ಕೆ. ಕೆಂಚಪ್ಪ.—ಅದು ಗೋಸಂಪತ್ತಲ್ಲ. ನೆಪಮಾತ್ರಕ್ಕೆ ಎರಡೆರಡು ಕಟ್ಟಿಕೊಂಡು ವರ್ಷವರ್ಷವೂ ತಮ್ಮಲ್ಲಿ ಗೊಬ್ಬರವಿಲ್ಲ, ಹಿಂಡಿಕೊಡಿ, ಉಪ್ಪು ಕೊಡಿ ಎಂದು ಭಿಕ್ಷಕ್ಕೆ ಬರುತ್ತಿರುವುದನ್ನು ನೋಡಿದರೇ ಅವರಲ್ಲಿ ಗೋಸಂಪತ್ತು ಎಷ್ಟಿದೆಯೆಂದು ಗೊತ್ತಾಗುತ್ತದೆ. ಮೊನ್ನೆ ದಿವಸ ಇದೇ ವಿಚಾರವಾಗಿ ಒಂದು Interpellation ನ್ನಿಗೆ ಉತ್ತರ ಕೊಟ್ಟಿದ್ದು ಎಷ್ಟು ಅಸಮಂಜಸವಾಗಿತ್ತೆಂಬದನ್ನು ಹೇಳುವ ಹಾಗಿಲ್ಲ. ರೈತನು ತನ್ನ ಜಮೀನಿನಮೇಲೆ ಮನೆ ಕಟ್ಟಿ ಕೊಳ್ಳುವ ವಿಷಯದಲ್ಲಿ, ಡೆಪ್ಯುಟಿ ಕಮೀಷನರ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಲ್ಯಾಂಡ್ ರೆವಿನ್ಯು ಕೋಡಿನ 63 ನೆಯ ಸೆಕ್ಷನ್ನಿನಲ್ಲಿ encouragement to raiyats to live in their lands ಎಂದು ಏನು ಹೇಳಿದೆ ಯೆಂಬುದನ್ನು ನೋಡಿದ್ದಾರೆಯೇ? ಉತ್ತರ ಕೊಡುವಾಗ ಈ ಸೆಕ್ಷನ್‌ಗಳ ಅರ್ಥವನ್ನು ತಿಳಿದುಕೊಂಡು ಮಾತನಾಡಿದರೆ ಚೆನ್ನಾಗಿತ್ತು ಎನಿಸುತ್ತದೆ. 63 ನೆಯ ಸೆಕ್ಷನ್ನಿನಲ್ಲಿ ಮೂರು ಭಾಗಗಳಿವೆ. (1) ನೆಯ ಭಾಗದಲ್ಲಿ ಹೇಳಿರುವ ಪ್ರಕಾರ ರೈತನು ವಾಸದ ಮನೆಗಳನ್ನು ತನಗಾಗಲಿ ತನ್ನ ಕೂಲಿಗಾರರಿಗಾಗಲಿ ಕಟ್ಟಿಸಿಕೊಡುವುದಕ್ಕೆ ಡೆಪ್ಯುಟಿ ಕಮೀಷನರ ಅನುಮತಿಯನ್ನು ಕೇಳಬೇಕಾಗಿಯೇ ಇಲ್ಲ. ಬೇರೆ ಉದ್ದೇಶಗಳಿಗಾಗಿ ಮನೆಗಳನ್ನು ಕಟ್ಟಬೇಕಾಗಿದ್ದರೆ ಮಾತ್ರ ಅವನು ಕೇಳ ಬೇಕು ಅಷ್ಟೆ. ಇದೇವಿಚಾರದಲ್ಲಿ ಗುಂಡಪ್ಪ ಗೌಡರ ಕಮಿಟಿಯವರು ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ:

> "*Encouragement to ryots to live on their lands.*—We find that the people of the rural areas are not generally aware of the provisions of Section 63 of the Land Revenue Code which permits occupants of lands to erect, on agricultural land, farm buildings and dwelling houses, for agriculturists and their labourers without any permission"

ಎಂದು ಹೇಳಿದೆ. ಸ್ವಾಮಿ, ತಾವೇ ದಯವಿಟ್ಟು ಈ ಸೆಕ್ಷನನ್ನು ಓದಿ. ಪುಸ್ತಕ ಇಲ್ಲಿಯೇ ಇದೆ. ಅದರಲ್ಲಿ ಅನುಮಾನಕ್ಕಾಸ್ಪದವಿಲ್ಲದಂತೆ ಹೇಳುತ್ತದೆಯೋ ಇಲ್ಲವೋ ನೋಡಿ. ಹೀಗಿರುವಾಗ ತಿಳಿವಳಿಕೆಯಿಲ್ಲದ ಹಳ್ಳಿಗಾಡಿನ ರೈತರ ಮೇಲೆ T.T. ಕೇಸುಗಳನ್ನು ಮೇಲಿಂದ ಮೇಲೆ ಹಾಕುತ್ತಾ discourage ಮಾಡುತ್ತಿದ್ದೀರಲ್ಲಾ. ಅವರುಗಳು ಪರ್ಮಿಷನ್ ತೆಗೆದು ಕೊಳ್ಳಬೇಕೆಂದು ಹೇಳುವುದು ಯಾವ ನ್ಯಾಯ? ತಾವು ಕಾನೂನು ತಿಳಿಯದೆ ಈ ರೀತಿ ಮಾಡುತ್ತಿದ್ದೀರೋ ಅಥವಾ ವ್ಯವಸಾಯಗಾರರಿಗೆ ಗೊತ್ತಿಲ್ಲವೋ ಯೋಚನೆಮಾಡಿ. ಆದ್ದರಿಂದ ದಯವಿಟ್ಟು ಈ ರೀತಿ ಮಾಡಬೇಡಿರಿ. ದಯವಿಟ್ಟು ಸರಿಯಾಗಿ ಸೂಚನೆಗಳನ್ನು ಕೊಡಿ, ಕೊಟ್ಟು ತಮ್ಮ ಜನಗಳು ಮನೆಕಟ್ಟುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿರಿ ಎಂದು ಹೇಳುತ್ತೇನೆ. ಹೆಚ್ಚು ಹೇಳಿದರೆ ಕಾಲ ವಿಳಂಬವಾಗುತ್ತದೆ. ಹಿಕ್ಕಲ್ ಎಂದು ಇರುತ್ತದೆ. ಅದು ಮ್ಯಾಪ್‌ನಲ್ಲಿ ಇರುವುದಿಲ್ಲ. ಮ್ಯಾಪ್‌ನಲ್ಲಿ ಹಿಕ್ಕಲ್ ಸೂಚಿಸಿ ಅದನ್ನು ತಯಾರು ಮಾಡಿ. ಸೀಲಿಂಗ್ ಆಫ್ ಲ್ಯಾಂಡ್‌ಹೋಲ್ಡಿಂಗ್ ಪ್ರಶ್ನೆ ಇದೆ, ಅದನ್ನು ತೀರ್ಮಾನಮಾಡಿಲ್ಲ. ಮ್ಯಾಕ್ಸಿಮಂ ಲಿಮಿಟ್ ಆಫ್ ಹೋಲ್ಡಿಂಗ್ ಆಫ್ ಪ್ರಾಪರ್ಟೀಸ್ ಜಾಗ್ರತೆ ಮಾಡಬೇಕೆಂದು ಗುಂಡಪ್ಪಗೌಡರ ಸಮಿತಿ ಶಿಫಾರ್ಸು ಇದೆ. ಆ ದೃಷ್ಟಿಯಿಂದ ಅದನ್ನು ಜಾಗ್ರತೆ ಮಾಡಿ ಎಂದು ಹೇಳುತ್ತೇನೆ.

ಸಹಕಾರದ ವಿಚಾರದಲ್ಲಿ ಎರಡು ಮಾತನ್ನು ಹೇಳಿ ಮುಗಿಸುತ್ತೇನೆ. ನಾನು ತಿಳಿದುಕೊಂಡಿರತಕ್ಕ ರೀತಿಯಲ್ಲಿ ಕೋ-ಆಪರೇಟೀವ್ ಸೊಸೈಟಿಗಳ ಆಡಳಿತ ಕಲ್ಪವೃಕ್ಷ ಇದ್ದಹಾಗೆ. ಅದರ ಮೇಲೆ ನಮ್ಮ ದೇಶದ ಅಭಿವೃದ್ಧಿ. ಈ ಕಲ್ಪವೃಕ್ಷ ಎಷ್ಟರಮಟ್ಟಿಗೆ ತನ್ನ ಮನೆತನವನ್ನು ಅಭಿವೃದ್ಧಿಪಡಿಸುತ್ತದೆ, ಕೋ-ಆಪರೇಟೀವ್ ಸೊಸೈಟಿಗಳು ದೇಶದ ಅಭಿವೃದ್ಧಿಪಡಿಸ ತ್ತಿವೆ ಎಂಬುದನ್ನು ಯೋಚನೆ ಮಾಡೋಣ. ಈ ಕೋ-ಆಪರೇಟೀವ್ ಸೊಸೈಟಿ ಮತ್ತು ಸಹಕಾರ ಪದ್ಧತಿಯಲ್ಲಿ ನಾವು ಎಷ್ಟು ಶ್ರಮಿಸಿದರೂ ಸಾಲದು. ಇದನ್ನು ಬಹಳ ವ್ಯಸನದಿಂದ ಹೇಳುತ್ತೇನೆ. ನಮ್ಮ ಹಳೆಯ ಮೈಸೂರು ಸಂಸ್ಥಾನದಲ್ಲಿ ಸಹಕಾರ ಸಂಸ್ಥೆಗಳ ವ್ಯವಸ್ಥೆ ತುಂಬ ಅತೃಪ್ತಿಕರವಾಗಿದೆ. ತಿನ್ನುವವರ ಪಾಲುಆಗಿದೆ. ಇದನ್ನು ತೋರಿಸುವುದಕ್ಕೆ ಸುಮ್ಮನೆ ಆಧಾರವಿಲ್ಲದೆ ಈ ಅಸೆಂಬ್ಲಿಯಲ್ಲಿ ಹೇಳಿದರೆ ಚೆನ್ನಾಗಿರುವುದಿಲ್ಲ ಎಂದು ನಾನು ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಇದೇ ಊರಿನಲ್ಲಿರತಕ್ಕ ಸಿವಿಲ್ ಸ್ಪೇಷಲ್ ಕೋ-ಆಪರೇಟೀವ್ ಸೊಸೈಟಿಯಲ್ಲಿ ಎಷ್ಟು ದುಡ್ಡು ದುರುಪಯೋಗವಾಗಿದೆ ಎಂಬುದು ಗೊತ್ತಾಗುತ್ತದೆ. ಹಿರಿಯೂರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು. ಹಿರಿಯೂರು ಮಲ್ಟಿಪರ್ಪಸ್ ಕೋ-ಆಪರೇಟೀವ್ ಸೊಸೈಟಿಯಲ್ಲಿ ಏನಾಗಿದೆ ಎಂಬುದನ್ನು ಮೊನ್ನೆತಾನೆ ಪೇಪರ್‌ನಲ್ಲಿ ಓದಿದೆ. ಅನೇಕ ಕಾಗದಗಳನ್ನು ಮಾನ್ಯ ಮಂತ್ರಿಗಳಿಗೆ ಬರೆದಿದ್ದೇನೆ. ವೀರಾಜಪೇಟೆಯ ಕೋ-ಆಪರೇಟೀವ್ ಬ್ಯಾಂಕ್‌ನಲ್ಲಿ ಒಂದು ಲಕ್ಷ 82 ಸಾವಿರ ರೂಪಾಯಿ ದುರುಪಯೋಗವಾಗಿದೆ. ಅದರ ಸೆಕ್ರೆಟೆರಿಯವರು ಕಾಗದ ಬರೆದಿಟ್ಟು ದೈವಾಧೀನರಾಗಿದ್ದಾರೆ. He committed suicide. ಹೆಚ್ಚು ಕಾಲ ಇಲ್ಲ. ಕಾಲ ತೆಗೆದುಕೊಂಡು ಹೆಚ್ಚು ಕಾಲ ಕೊಡಿ ಎಂದು ಕೇಳುವುದಕ್ಕೆ ನನಗೆ ಇಷ್ಟವಿಲ್ಲ. ಇಲ್ಲದೇಇದ್ದರೆ ವಿವರವಾಗಿ

ಹೇಳುತ್ತಾ ಇದ್ದೆ. ಮೊನ್ನೆ ದಿವಸ ಹೇಳಿದರು ಕೋ-ಆಪರೇಟೀವ್ ಸೊಸೈಟಿ ಇನ್‌ಸ್ಪೆಕ್ಟರು ಮೂರು-ನಾಲ್ಕು ವರ್ಷ ಜನರಲ್‌ಬಾಡಿ ಮೀಟಿಂಗ್ ಕರೆಯಲಿಲ್ಲ ಎಂದು. ಏಕೆ ಸುಮ್ಮನೆ ಇದ್ದಿರಿ ಎಂದು ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರು ಮತ್ತು ರಿಜಿಸ್ಟ್ರಾರ್‌ರವರು ಅವರ ಮೇಲೆ ಕುಪಿತರಾಗಿದ್ದಾರೆ ಎಂಬ ಭಾವನೆಯಲ್ಲಿ ಹೇಳಿದರು. ಇದು ಬಹಳ ವ್ಯಸನವಾಗುತ್ತದೆ. ಏಕೆಂದರೆ ಕಾನೂನು ಪ್ರಕಾರ ಕೋ-ಆಪರೇಟೀವ್ ಸೊಸೈಟಿ ಜನರಲ್‌ಬಾಡಿ ಮೀಟಿಂಗ್ ಇಂಥ ಸೆಕ್ಷನ್ ಪ್ರಕಾರ ಕರೆಯದಿದ್ದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕರೆಯಬೇಕು ಎಂದು ಇರುವಾಗ ಕೋ-ಆಪರೇಟೀವ್ ಸೊಸೈಟಿ ಇನ್‌ಸ್ಪೆಕ್ಟರು ಅಧಿಕಾರ ಇಲ್ಲದೆ ಏನು ಮಾಡುವುದು? ಆದ್ದರಿಂದ ಅವರ ಮೇಲೆ ತಪ್ಪು ಹಾಕಿದರೆ ಏನು ಪ್ರಯೋಜನ. ವೀರಾಜಪೇಟೆಯ ಸೆಕ್ರೆಟರಿಯವರು ದುರುಪಯೋಗ ಮಾಡಿದ್ದಾರೆ ಎಂದು ಹೇಳುವುದು ಒಂದು ಲಕ್ಷ 82 ಸಾವಿರ ರೂಪಾಯಿಗಳು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ವಿಷಯದಲ್ಲಿ ಸಹಾನುಭೂತಿ ಇಲ್ಲ. ದೊಡ್ಡ ಅಧಿಕಾರಿಗಳ ವಿಚಾರದಲ್ಲಿ ಕ್ರಮ ಕೈಗೊಳ್ಳುವುದು ಬಿಟ್ಟು ಸಣ್ಣ ನೌಕರರ ವಿಚಾರದಲ್ಲಿ ಮನಸ್ಸು ಮಾಡುತ್ತೀರಲ್ಲಾ? ಎಲ್ಲಿಯವರೆಗೆ ಈ ಬಿಗಿ ತಪ್ಪಿದ ಆಡಳಿತ ನಡೆಯುತ್ತದೆಯೋ ಅಲ್ಲಿಯವರೆಗೂ ಈ ಕಲ್ಪವೃಕ್ಷದೋಪಾದಿಯಲ್ಲಿರತಕ್ಕ ಕೋ-ಆಪರೇಟೀವ್ ಸೊಸೈಟಿಗಳು ಅಭಿವೃದ್ಧಿಗೆ ಬರುತ್ತದೇನು? ಇನ್ನೂ ಒಂದು ವಿಚಾರ ಹೇಳುತ್ತಾ ಇದ್ದೇನೆ. ಈ ಕೋ-ಆಪರೇಟೀವ್ ಸೊಸೈಟಿಗಳಿಗೆ ತಾವು ಮೀಸಲಾಗಿಟ್ಟಿರುವುದರ ಪೈಕಿ ಡೈರೆಕ್ಷನ್‌ಗೆ 24.84,000 ರೂಪಾಯಿಗಳು ಇವೆ. ಸೂಪರ್‌ಇಂಟೆಂಡೆನ್ಸ್‌ಗೆ 19,34,600 ರೂಪಾಯಿಗಳಿವೆ. ಇತರ ಖರ್ಚಿಗಾಗಿ 13,17,700 ರೂಪಾಯಿಗಳು ಇವೆ. ಒಟ್ಟು 57,37,200 ರೂಪಾಯಿ ಆಗುತ್ತದೆ, ಎಂದರೆ ಮೀಸಲಾಗಿಟ್ಟಿರತಕ್ಕ ದುಡ್ಡಿನಲ್ಲಿ 89% ಅಡ್ಮಿನಿಸ್ಟ್ರೇಷನ್‌ಗೆ ಇದೆ. ಇನ್ನೂ 6,97,800 ರೂಪಾಯಿ ಮಾತ್ರ ಸಹಾಯಾರ್ಥ ಧನವಾಗಿಟ್ಟಿದ್ದಾರೆ. ಇದು ನಿಜವಾಗಿಯೂ ಸಾಕಾಗುತ್ತದೆಯೇ? ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಆಗಿರತಕ್ಕ ಒಂದು ವ್ಯವಸ್ಥೆ ಇದೆ. ಅದಕ್ಕೆ ಹೋಬಳಿ ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಸೊಸೈಟಿ ವಗೈರೆ ಇಟ್ಟುಕೊಂಡಿದ್ದೀರಿ. ಅದಕ್ಕೆಲ್ಲಾ ಅಂಥ ಮಹನೀಯರ ವಿಚಾರವನ್ನು ತೆಗೆದುಕೊಳ್ಳಬಾರದೆಂದು ಹೇಳುತ್ತೇನೆ. ನಾನು ಕೋ-ಆಪರೇಟೀವ್ ಮಿನಿಸ್ಟರನ್ನು ನಿರ್ದಿಷ್ಟವಾಗಿ ಕೇಳುತ್ತೇನೆ. ಈಗ ದುಡ್ಡು ತಾವು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದೀರಿ. ನಿಜವಾಗಿಯೂ ರಿಪೋರ್ಟ್ ತರಿಸಿದ್ದೀರಾ? ಇಂಡಸ್ಟ್ರಿಯಲ್ ಡೆವಲಪ್‌ಮೆಂಟಿಗೆ ಎಷ್ಟು ಮಟ್ಟಿಗೆ ದುಡ್ಡು ಖರ್ಚಾಗಿದೆ ಎಂಬುದನ್ನು ನೋಡಿದ್ದೀರಾ? ಮಹನೀಯರ ಹೆಸರನ್ನು ಇಟ್ಟುಕೊಂಡು ಈ ರೀತಿ ಮಾಡಬಾರದು. ಒಂದು ದಿವಸ ಒಂದು ಹೋಬಳಿ ಕೋ-ಆಪರೇಟೀವ್ ಸೊಸೈಟಿಯಲ್ಲಿ ನಾನು ನಿಂತಿದ್ದಾಗ ನಿಮ್ಮ ಅಧಿಕಾರಿಗಳು ಇಷ್ಟು ಇತ್ತು, ಇಷ್ಟು ಖರ್ಚುಮಾಡಿದ್ದೇವೆ, ಇಷ್ಟು ಜನಕ್ಕೆ ಸಹಾಯವಾಗಿದೆ ಎಂದು ಹೇಳುತ್ತಾ ಇದ್ದರು. ಆಗ ನಾನು ಇಂಡಸ್ಟ್ರಿಯಲ್ ಡೆವಲಪ್‌ಮೆಂಟಿಗೆ ಎಷ್ಟು ಖರ್ಚಾಗಿದೆಯೋ ಅದಕ್ಕೆ ತಕ್ಕಂತೆ ಎಷ್ಟುಮಟ್ಟಿಗೆ ಇಂಡಸ್ಟ್ರೀ ಡೆವಲಪ್ ಆಗಿದೆ, ಆ ಮೂಲಕ ಜನರ ಉತ್ಪನ್ನ ವೃದ್ಧಿ ಯಾವ ರೀತಿ ಆಗಿದೆ ಎಂದು ಕೇಳಿದ್ದಕ್ಕೆ ಉತ್ತರವಿಲ್ಲ. ಅದು ಹೋಗಲಿ, ಕೊಟ್ಟಂಥ ದುಡ್ಡಿಗೆ ಎಷ್ಟುಮಟ್ಟಿಗೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಗಿದೆ ಎಂಬ ವರದಿಯನ್ನಾದರೂ ತಾವು ತರಿಸಿದ್ದೀರಾ? ಬಹಳ ವ್ಯಸನಪೂರ್ವಕವಾಗಿ ಹೇಳುತ್ತೇನೆ. ಹೀಗೆ ಮಾಡಬೇಡಿ. ಕಾಟೇಜ್ ಇಂಡಸ್ಟ್ರೀ ಡೆವಲಪ್‌ಮೆಂಟ್ ವಿಚಾರದಲ್ಲಿ ಮಹಾತ್ಮಾಜಿಯವರು ಬಹಳವಾಗಿ ಶ್ರಮಿಸಿದ್ದಾರೆ. ಅವರ ಹೆಸರೂ ಇದರ ಜೊತೆಗೆ ಬರುತ್ತದೆ. ನಮ್ಮ ದೇಶದ ಪ್ರಗತಿಗೆ ಮೂಲ ಕಾರಣರಾಗಿರತಕ್ಕ ಮಹಾ ವ್ಯಕ್ತಿಗಳಾದ ವಿಶ್ವೇಶ್ವರಯ್ಯನವರ ಹೆಸರು ಬರುತ್ತದೆ. ಇದನ್ನೆಲ್ಲಾ ಏಕೆ ತೆಗೆಯಬಾರದು? ಸುಮ್ಮನೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಸ್ಕೀಂ ಎಂದು ಮಾಡಿ. ಇನ್ನೊಬ್ಬರ ಹೆಸರನ್ನು ಬಳಸಿಕೊಂಡು ಹೀಗೆ ಮಾಡುವುದು ಸರಿಯಲ್ಲ. ಆದ್ದರಿಂದ ದಯವಿಟ್ಟು ಈ ಹೆಸರು ತೆಗೆದುಹಾಕಿಬಿಡಿ. ಮುಂದೆ ನೀವು ಏನಾದರೂ ಮಾಡಿಕೊಳ್ಳಿ.

ಇನ್ನು ಮಲ್ಟಿಪರ್‌ಪಸ್ ಸೊಸೈಟಿ ವಿಚಾರ, ಸ್ವಾಮಿ, ನಾನು ಎಂ.ಎ. ನಲ್ಲಿ ಎಕನಾಮಿಕ್ಸ್ ಓದಿರುವ ಮನುಷ್ಯ. ಒಂದೊಂದು ಉದ್ದೇಶಕ್ಕೆ ಎಷ್ಟೋ ದುಡ್ಡು ಬೇಕಾಗುತ್ತದೆ. ಅಂಥಾದ್ದರಲ್ಲಿ ವಿವಿಧ ಉದ್ದೇಶಗಳಿಗೆ ಎಂದು 5,000 ರೂಪಾಯಿಗಳನ್ನು ಇಟ್ಟಿದ್ದೀರಿ, ಇದರಿಂದ ಯಾರಿಗೂ ಸಮರ್ಪಕವಾಗಿ ಪ್ರಯೋಜನವಾಗುವುದಿಲ್ಲ. ಸುಮ್ಮನೆ ಎರಡು ರೂಪಾಯಿನಲ್ಲಿ ರಾಜರಿಗೆ ಯೋಗ್ಯವಾದ ಭವ್ಯವಾದ ಒಡವೆಗಳು ಸಿಕ್ಕುತ್ತವೆ ಎಂದು ಹೇಳಿದಹಾಗೆ ಆಗುತ್ತದೆ. ಒಂದು ಕಡೆ ಹಣ ದುರುಪಯೋಗವಾಗುತ್ತಿದೆ. ಇನ್ನೊಂದು ಕಡೆ ಈ ಹಣದಿಂದ ಏನೂ ಪ್ರಯೋಜನವಿಲ್ಲ. ಒಂದೊಂದು ಉದ್ದೇಶಕ್ಕೆ ಎಷ್ಟೋ ಹಣ ಬೇಕಾಗುತ್ತದೆ. ರೈತರ ಉಪಯೋಗಕ್ಕೆ ಎಂದು ಹೇಳುತ್ತೀರಿ. ನಮ್ಮ ರೈತರೆಲ್ಲಾ ವಿಪರೀತ ಸಾಲವೊಂದಿಗರಾಗಿದ್ದಾರೆ. ಹಾಗಿರುವಾಗ ರೈತರ ಸಾಲವನ್ನು ಎಷ್ಟರಮಟ್ಟಿಗೆ ತೊಡೆದುಹಾಕಿದ್ದೀರಿ ಎಂಬ ದೃಷ್ಟಿಯಲ್ಲಿ ಕೇಳುತ್ತಾ ಇದ್ದೇನೆ. ಮತ್ತು ನಿಜವಾಗಿಯೂ ತೊಡೆದುಹಾಕುವುದಕ್ಕೆ ಸಾಧ್ಯವೇ? ಹಿರಿಯೂರಿನಲ್ಲಿರುವ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಲಾಭ ಬಂದಿದೆ ಎಂದು ಹೇಳಿದರೆ ಅದನ್ನೇ ಎಲ್ಲಕ್ಕೂ ಅನ್ವಯಿಸಬೇಡಿ. ಯಾವುದಕ್ಕೋ ಕನ್‌ಸೆಷನ್ ಕೊಟ್ಟು ಲೆಕ್ಕಾಚಾರ ಹಾಕಿದ್ದೀರಿ. ವಿಚಾರ ಮಾಡಿನೋಡಿ, ಬತ್ತೆಯಲ್ಲಿ ಎಷ್ಟು ಬಂದಿದೆ, ಕಬ್ಬಿಣದಲ್ಲಿ ಎಷ್ಟು ಬಂದಿದೆ ಎಂಬುದನ್ನು ಒಂದೊಂದಾಗಿ ತೆಗೆದುಕೊಂಡು ನೋಡಿ. ಹೆಚ್ಚು ಹೇಳುವುದಿಲ್ಲ. ಒಂದು ವಿಚಾರ ಮಾತ್ರ ಹೇಳಿ ಮುಗಿಸುತ್ತೇನೆ.

Even for the administrators there should not be multi-purposes; there shall be only one purpose and that is socialising the society.

9-30 A.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸಹಕಾರ ಮತ್ತು ಸೈಂಟಿಫಿಕ್ ರಿಸರ್ಚ್ ಇವೆರಡೂ ಮುಖ್ಯವಾದ ಬಾಬುಗಳು. ಸೈಂಟಿಫಿಕ್ ರಿಸರ್ಚ್ ಬಾಬಿನಿಂದ ಸರ್ಕಾರಕ್ಕೆ ಬಹಳ ಹಣ ಬರುತ್ತದೆ. ಅದಕ್ಕೆ ಉತ್ತರ ಹೇಳುವವರೇ ಇಲ್ಲ. ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಮಾತನಾಡಿದರೆ ಅದಕ್ಕೂ ಉತ್ತರ ಹೇಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳಿಲ್ಲ. ಇವುಗಳಿಗೆ ಯಾರು ಉತ್ತರ ಹೇಳುತ್ತಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಇಂಥವರೇ ಉತ್ತರ ಹೇಳಬೇಕೆಂದೇನೂ ಇಲ್ಲ. ಸರ್ಕಾರದ ಪರವಾಗಿ ಯಾರಾದರೊಬ್ಬ ಮಂತ್ರಿಗಳು ಜವಾಬು ಹೇಳಬಹುದು.

ಡಾ॥. ಟಿ. ಪಾರ್ಥಸಾರಥಿ (ಮಲ್ಲೇಶ್ವರ).—Multipurpose Minister ಒಬ ರನ್ನು ಕೂಡಿಸಿದರೆ ಅವರು ಎಲ್ಲಕ್ಕೂ ಉತ್ತರ ಕೊಡಬಹುದು.

ಅಧ್ಯಕ್ಷರು.—ಅದು ನನ್ನ ಕೈಯ್ಯಲ್ಲಿಲ್ಲ. ಮುಖ್ಯ ಮಂತ್ರಿಗಳು ಬೇಕಾದರೆ ಮಾಡಬಹುದು.

Sri G. SIVAPPA (Chitaldrug).—Sir, while supporting the demands under consideration, I will confine my remarks to the Department of Co-operation. I should like to know which Minister would reply to the remarks about the D partment of Co-operation.

Sri R. CHENNIGARAMAIAH.—I am going to reply.

Sri G. SIVAPPA.—I want to make suggestions with regard to the Department of Co-operation. This is a very important Department. This has become much more important after the publication of the report of the Rural Credit Survey which has been accepted by the Planning Commission and the Government of India.

The Leader of the Opposition made very strong criticism about the working of this Department. I do not think that all the criticisms that he made are correct and based on facts. Even then there is some force in some of his arguments. I would like to ask Government whether this Department is working satisfactorily and according to the expectations of the Planning Commission. Much has been said about Co-operation in the First Five-Year Plan and Second Five-Year Plan also. In the Second Five-Year Plan great stress has been laid on the role of Co-operation and large funds have been allotted for Co-operation. In spite of this, I may tell Government that this Department is not working satisfactorily and up to expectations. The most important function of the Department is organisation of credit facilities in the rural area. Therefore Government thought of organising well-equipped credit societies in the rural area.

As regards the short term credit societies, they were started in the old Mysore area about three years ago. In some Districts these societies are working very well. The District Co-operative Bank is advancing capital and it is working very well. The collections also are very good. Under the Second Five-Year Plan some large scale societies are expected to be started in the districts. In addition, some marketing societies also are expected to be started. The Assistant Registrar of our District had recommended to the Registrar that certain primary societies in our district should be converted into large scale societies in view of the fact that they are working very efficiently. Similarly, for marketing society another society which had advanced a good amount of money to the agriculturists was recommended. But to our surprise the Registrar under the influence of some people did not accept the recommendation of the Assistant Registrar and he has recommended some other societies to be converted into large scale societies and marketing societies. Sir, I am the Director of the District Bank and my Hon'ble friend Sri Duggappa is the Vice-President. We are the people working there and we know how these societies are working. We have taken great pains in organising these societies and they are working very well. In spite of this, it is surprising to find that instead of recommending these societies to be converted into large scale societies the Registrar has recommended some other societies which are not working well to be converted into large scale societies. I would ask the Registrar and the concerned Minister through you what the people would feel when they find that such inefficient societies are recommended to be converted into large scale societies. I made an interpellation to which the Minister gave a very evasive reply. I should say it was a very ingenious and clever reply. I would submit that it is not fair to convert the societies recommended by the Registrar which are not at all working well, into large scale societies when there are other societies which are working well and which should really be converted into large scale societies.

With regard to marketing society the Chitaldrug Multi-purpose Society has been recommended. Before this society was recommended we had held a co-operative conference at Holalkere and we found that the Holalkere Society was working well. Therefore, at that conference we requested Government to convert this society into a

marketing society. But our recommendation was not accepted and another society has been recommended by the Registrar. I want to say that the society recommended by the Registrar would not work well.

Coming to long term credit, it is given through the Central Adaman Co-operative Bank. It is working very well. Yesterday, the Leader of the Opposition tabled a question about the working of this Bank. I am the President of this Bank. I may say that though there was misappropriation of about Rs. 22,632-1-11 between 1949 and 1953, the affairs of the Bank are now going on very well and the Bank is now very sound. We have now completely thrown out the professional co-operators who are depending solely on co-operaion. Now this Bank is one of the biggest banks in the whole of Karnatak.

As regards long term credit, yesterday my Hon'ble friend had put some interpellation with regard to exemption. Though there was a Government Order for exemption, that order was published only after a period of two months. This speaks of the efficiency of the Department. It is very wrong on the part of the Department to delay the publication of such important Government Orders. The exemption given by that order is only for a period of one year. I do not understand why they should give exemption only for a year at a time and why they should go on extending the exemption every year. Why not give them complete exemption for four or five years. If the exemption is given every year, there would be delay and thereby the societies would suffer.

The next important point I would refer to is the fact that hitherto the collection work of the co-operative societies were being done by the revenue officers. They know very well how to collect money. It was being done free of cost without any burden on any society. Now this onerous task has been taken over by the Department. Now the Society Inspectors have to collect the amount. May I ask the Government whether it would not be possible for the revenue officers to collect the amounts. The Society Inspectors do not know this work and only the revenue officers who are well-trained in collection work, can do it properly. Sir, the societies are also being asked to deposit 3 per cent as collection charges. It would not be necessary to ask this share. It will be a great burden on the primary societies, particularly because in a number of taluks the societies are not well-organised.

Sri J. H. SHAMSUDDIN (Honawar).—Is it possible for another member to surrender his time in favour of another member ? (*Laughter*)

Sri G. SIVAPPA.—I have not completed ten minutes, Sir. So far as co-operative farming is concerned, my taluk is very famous. I may point out that the ex-hon. Ministers, Dr. Nagan Gowda and Sri Channabassappa have appreciated the working of the three farms. But they are not working well now, Sir. May I ask the Government why they should not close down the farms if they are functioning inefficiently. Some of these farms are farms only from a theoretical point of view. It is better they are closed.

(*Several Members then rose.*)

Mr. SPEAKER.—I do not tolerate persons who act like this. If anybody wants a chance, let him see me in my chamber.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಹಾಗಾದರೆ ಪ್ರತಿಯೊಬ್ಬರೂ ತಮ್ಮ ಛೇಂಬರಿಗೆ ಬಂದು ಕಾಣಬೇಕೋ ?

ಅಧ್ಯಕ್ಷರು.—ಯಾರಿಗೆ ಬೇಕೋ ಅವರು ಬಂದು ನನ್ನನ್ನು ಕಾಣಬೇಕು.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳಿಗೆ ಸಂಬಂಧಪಟ್ಟ ಇಲಾಖೆಗಳಲ್ಲಿಯ ಲೋಪದೋಷಗಳನ್ನು ಸರಕಾರದ ಗಮನಕ್ಕೆ ತಂದು ಕೆಲವು ಸೂಚನೆಗಳನ್ನು ಮಾಡಲಿಚ್ಛಿಸುತ್ತೇನೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯಂತೆ ಕೊಡಲಾದ ಜಮೀನಿನ ಮೇಲೆ ವಿಧಿಸಬೇಕಾದುದಕ್ಕಿಂತ 10-20ರಷ್ಟು ಹೆಚ್ಚು ಕಂದಾಯವನ್ನು ಕಾನೂನಿಗೆ ವಿರೋಧವಾಗಿ ರೈತರಿಂದ ವಸೂಲು ಮಾಡಲಾಗಿದೆ. ಹಾಗೆ ವಸೂಲು ಮಾಡಿದುದನ್ನು ವಾಪಸ್ ಕೊಡಬೇಕು.

ಎರಡನೆಯದಾಗಿ ಭೂಮಿಯ ಹಂಚಿಕೆಯ ವಿಚಾರ. ಪ್ರಜಾಪ್ರಭುತ್ವ ಬಂದ ನಂತರ ರಾಜ್ಯಾಂಗದ ಅನುಸಾರವಾಗಿ ಜಮೀನು ಇಲ್ಲದವನು ಜಮೀನು ಪಡೆಯ

*Asterisk indicates that the remarks or speeches have not been revised by the Member concerned.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ತಕ್ಕಂಥ ಒಂದು ಹಕ್ಕು ಇದೆ. ಭೂಮಿ ಇಲ್ಲದೇ ಇರತಕ್ಕಂಥವರು ಇನ್ನೂ ಅನೇಕರು ಇದ್ದಾರೆ. ಭೂಮಿಯಿಲ್ಲದೇ ಇರತಕ್ಕಂಥವರು ಯಾರೂ ಇರಬಾರದೆಂಬ ನೀತಿಯಿಂದ ಭೂಮಿಯನ್ನು ಹಂಚಬೇಕು. ಬಡಜನರಿಗೆ ಬೂಮಿಯನ್ನು ಪಡೆಯಲು ಬಹಳ ತೊಂದರೆಯಾಗುತ್ತಾ ಇದೆ. ನಿಗದಿ ಮಾಡಿದ ಕಾಲದಲ್ಲಿ ಎಲ್ಲರಿಗೂ ಭೂಮಿಯ ಹಂಚಿಕೆಯನ್ನು ಮಾಡಬೇಕು. ಸರಕಾರ ಒಂದು ನಿರ್ದಿಷ್ಟ ಕಾರ್ಯಕ್ರಮದಂತೆ ಭೂಮಿ ಇಲ್ಲದವರಿಗೆಲ್ಲಾ ಜಮೀನು ಹಂಚಬೇಕೆಂದು ನಾನು ಸೂಚಿಸುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಬೇರೆ ಜಿಲ್ಲೆಗಳಿಗಿಂತ ಹೆಚ್ಚು ಭೂಕಂದಾಯ ವಿಧಿಸಲಾಗಿದೆ. ಸರಕಾರ ಏನಾದರೂ ಪರಿಹಾರ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾಕಷ್ಟು ಪರಿಹಾರ ಕೊಟ್ಟಿಲ್ಲವೆಂದರೆ ಅದು ತಪ್ಪಾಗಲಾರದು.

ತರಿ ಕಂದಾಯ ಬಹಳ ಜಾಸ್ತಿಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಸಕಾಲಕ್ಕೆ ಮಳೆಯಾಗದೆ ಅಕಾಲದಲ್ಲಿ ಮಳೆಯಾಗಿ ರೈತರಿಗೆ ವಿಶೇಷವಾಗಿ ತಮ್ಮ ಬೆಳೆಯಲ್ಲಿ ನಷ್ಟವಾಗುತ್ತಿದೆ. ಅದು ಸರ್ಕಾರಕ್ಕೆ ಗೊತ್ತಿದೆ. ಆದರೂ ತರಿ ಕಂದಾಯವನ್ನು ಜಾಸ್ತಿ ಕೊಡಬೇಕು ಎಂದು ಹೇಳುತ್ತಾರೆ. ಇದರಿಂದ ರೈತರು ಯಾವ ರೀತಿ ಜೀವಿಸಬೇಕು ? ಆದ್ದರಿಂದ ಸರ್ಕಾರದವರು ದಯಮಾಡಿ ಇರಿಗೇಷನ್ ವೆಲ್ಸನ್ನು ಜಾಗ್ರತೆ ಕೊಡುವ ಹಾಗೆ ತಕ್ಕ ವ್ಯವಸ್ಥೆ ಮಾಡಬೇಕು. ಅಷ್ಟರಮಟ್ಟಿಗೆ ಅವಕಾಶ ಮಾಡಿಕೊಟ್ಟರೆ ಎಷ್ಟೋ ಉಪಕಾರವನ್ನು ರೈತವರ್ಗದವರಿಗೆ ಮಾಡಿದಂತಾಗುತ್ತದೆ. ಈ ವಿಷಯದ ಬಗ್ಗೆ ಸುಮಾರು ಹತ್ತು ವರ್ಷಗಳಿಂದಲೂ ಸರ್ಕಾರದವರನ್ನು ಪ್ರಾರ್ಥನೆಮಾಡುತ್ತಲೇ ಇದ್ದೇವೆ. ಸರ್ಕಾರದವರೇನೋ ಅದಕ್ಕೆ ಮನಸ್ಸು ಮಾಡಿ ಗಮನ ಕೊಡುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿದ್ದಾರೆ. ಆದರೆ ಇದುವರೆಗೂ ಅದು ಕಾರ್ಯಗತವೇನೋ ಆಗಲಿಲ್ಲ. ಈಗಲಾದರೂ ಇರಿಗೇಷನ್ ವೆಲ್ಸನ್ನು ಜಾಗ್ರತೆಯಾಗಿ ಮಾಡಿಸಿ ಕೊಡಲು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಕೇಂದ್ರ ಸರ್ಕಾರದವರು ಅನೇಕ ಬೋರ್‌ವೆಲ್‌ಗಳನ್ನು ಮಾಡಿಸಿ ಕೊಡಲು ಸಹಾಯ ಮಾಡಿದ್ದಾರೆ. ನಮ್ಮ ದೇಶದಲ್ಲಿ ಅದು ಜಾರಿಗೆ ಬಂದಿಲ್ಲ. ವ್ಯವಸಾಯಕ್ಕೆ ಬೋರ್‌ವೆಲ್‌ಗಳು ಬಹಳ ಅವಶ್ಯಕವಾಗಿರುವುದರಿಂದ ಅವುಗಳನ್ನು ಯಥೇಚ್ಛವಾಗಿ ನಮ್ಮ ದೇಶದ ರೈತರ ಅನುಕೂಲಕ್ಕಾಗಿ ಒದಗಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ವಿಷಯದಲ್ಲಿ ಹಲವು ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈಗ ಸರ್ಕಾರದವರು ಸಂಸ್ಥಾನದ ರೆವಿನ್ಯೂ ಉತ್ಪತ್ತಿಯಲ್ಲಿ ಗ್ರಾಮಪಂಚಾಯಿತಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಸ್ವಲ್ಪಭಾಗವನ್ನು ಕೊಡುತ್ತಿರುವಂತೆ ಆಯಾ ಗ್ರಾಮದ ರೆವಿನ್ಯೂ ಹುಟ್ಟುವಳಿಯಲ್ಲಿ ಆಯಾ ಗ್ರಾಮದ ಪೌರ ಸಭೆಗೆ ಅಥವಾ ಮುನಿಸಿಪಾಲಿಟಿಗಳಿಗೆ ಒಂದು ಭಾಗವನ್ನು ಕೊಡುವ ಹಾಗೆ ತಕ್ಕ ವ್ಯವಸ್ಥೆಯನ್ನು ಕೂಡಲೇ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ದಾಮಾಷಾ ಪ್ರಕಾರ ಈಗ ಸೆಸ್ಸುಗಳನ್ನು ವಸೂಲು ಮಾಡುವುದರಲ್ಲಿ ಬಹಳ ಅನ್ಯಾಯವಿದೆ. ಕೆಲವರಿಂದ ತೆರಿಗೆ ವಸೂಲು ಮಾಡುವುದು, ಮತ್ತೆ ಕೆಲವರಿಂದ ಸರಿಯಾಗಿ ತೆರಿಗೆಯನ್ನು ವಸೂಲು ಮಾಡದೇ ಇರುವುದು—ಇದು ಧರ್ಮವಲ್ಲ. ಪಟ್ಟಣಗಳಲ್ಲಿ ಸುಮಾರು 3,500 ರೂಪಾಯಿಗಳಷ್ಟು ಸಂಪಾದನೆ ಮಾಡುವವರಲ್ಲಿ ಅನೇಕರು ಯಾವ ತೆರಿಗೆಯನ್ನೂ ಕೊಡುವುದಿಲ್ಲ. ಆದರೆ ಹಳ್ಳಿಗಾಡಿನ ಒಬ್ಬ ಬಡ ರೈತ ತನ್ನ ಜೀವನೋಪಾಯಕ್ಕಾಗಿ ಒಂದು ಎಕರೆ ಜಮೀನನ್ನು ಇಟ್ಟುಕೊಂಡರೆ ಅವನ ಮೇಲೆ ಒಂದು ರೂಪಾಯಿ ಸೆಸ್, ಒಂದು ರೂಪಾಯಿ ಕಂದಾಯ ಹಾಕಿ ಅವನು ಈಗ ಋಣಬಾಧೆಯುಳ್ಳವನಾಗಿದ್ದಾನೆ. ಒಬ್ಬ ಬಡ ರೈತನು ಸರ್ಕಾರಕ್ಕೆ ನಾನಾ ರೂಪದಲ್ಲಿ ತೆರಿಗೆ ತೆರಬೇಕಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ನ್ಯಾಯವಾಗಿಲ್ಲ. ಇದನ್ನು ಕೂಡಲೆ ಸರಿಪಡಿಸಬೇಕು. ಇನ್ನು ರೈಲ್ವೆ ಸೆಸ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಹಿಂದೆ ನಮ್ಮ ದೇಶದಲ್ಲಿ ಪ್ರಜೆಗಳ ಅಭಿಪ್ರಾಯಕ್ಕನುಸಾರವಾಗಿ ರೈಲ್ವೆ ಕನ್‌ಸ್ಟ್ರಕ್ಷನ್ ಆಗುತ್ತಿತ್ತು. ಈಗ ನಮ್ಮ ಸರ್ಕಾರದವರು ಏನಾದರೂ ಈ ಬಗ್ಗೆ ಒಂದು ಪ್ಲಾನನ್ನು ಇಟ್ಟುಕೊಂಡು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿದ್ದಾರೆಯೇ ಎಂದು ನೋಡಿದರೆ ಅದೇನೂ ಕಾಣಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ರೈಲ್ವೆ ಸೆಸ್ ನಮ್ಮಲ್ಲಿ ಅಬಾಲಿಷ್ ಆಗಿದೆ. ಉತ್ತರ ಹಿಂದೂಸ್ಥಾನದಲ್ಲಿ ರೈಲ್ವೆ ಕನ್‌ಸ್ಟ್ರಕ್ಷನ್ ಆಗುತ್ತಿರುವುದರಿಂದ, ಅಲ್ಲಿ ರೈಲ್ವೆ ಸೆಸ್ ಕೊಡುತ್ತಾರೆ. ಇಲ್ಲಿ ಆ ಸೆಸ್ಸನ್ನು ಏತಕ್ಕೆ ಕೊಡಬೇಕು ? ರೈಲ್ವೆ ಸೆಸ್ ಪ್ರಶ್ನೆ ಈ ರಾಜ್ಯಕ್ಕೆ ಸಂಬಂಧಪಡುವುದಿಲ್ಲ ಹಳೇ ಮೈಸೂರಿನಲ್ಲಿ ರೈಲ್ವೆ ಸೆಸ್ ಇತ್ತು. ಈಗ ಅದು ಅಬಾಲಿಷ್ ಆಗಿದೆ.

Sri B. L. NARAYANA SWAMY.—I have noted with thanks.

ಇನ್ನು ಕ್ಷಾಮ ನಿವಾರಣೆಯ ವಿಷಯ. ಮೈಸೂರಿನಲ್ಲಿ ಕ್ಷಾಮಕ್ಕೆ ತುತ್ತಾಗಿರುವ ಪ್ರದೇಶಗಳು ಎಂದರೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ್ತು ಮುಳಬಾಗಿಲು.

ಅಧ್ಯಕ್ಷರು.—ಅವು ಅಷ್ಟೇ ಅಲ್ಲ. ಕ್ಷಾಮಕ್ಕೀಡಾದ ಪ್ರದೇಶಗಳು ಬೇಕಾದಷ್ಟಿವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅದಕ್ಕೆ ನಾನು ಸಂತೋಷಪಡುವುದಿಲ್ಲ. ಸ್ವಾಮಿ, ಕ್ಷಾಮ ತಲೆದೋರಿದಾಗ, ಪ್ರಜೆಗಳಿಗೆ ಕಷ್ಟವಿರುವಾಗ ಪರಿಹಾರ ಕ್ರಮವನ್ನು ನಮ್ಮ ಸರ್ಕಾರದವರು ತೆಗೆದುಕೊಂಡಿದ್ದಾರೆ. ಅದಕ್ಕೆ ನಾನು ಬಹಳ ಕೃತಜ್ಞನಾಗಿದ್ದೇನೆ. ಆದರೆ ಖಾಯಂ ಆಗಿ ಪರಿಹಾರ ದೊರಕಿಸಿಕೊಟ್ಟಂತಾದರೆ ಒಳ್ಳೆಯದು. ಪರಿಹಾರ ಕೊಡುತ್ತೇವೆ ಎಂದಮಾತ್ರಕ್ಕೆ ಕ್ಷಾಮ ಸದಾ ಪ್ರಾಪ್ತವಾಗದಿರುವ ಹಾಗೆ ನಮಗೆ ಒಂದು ಶಾಶ್ವತವಾದ ಪರಿಹಾರ ಮಾರ್ಗವನ್ನು ಏರ್ಪಡಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. ಕೋಲಾರದಲ್ಲಿ ನೀರಾವರಿ ಸೌಕರ್ಯಕ್ಕಾಗಿ ಬೋರ್‌ವೆಲ್‌ಗಳನ್ನು ಮಾಡಿಸಿಕೊಟ್ಟರೆ ನಿಜವಾಗಿ ಬಹಳ ಉಪಯೋಗವಾಗುತ್ತದೆ. ಇದರಿಂದ ಬೆಳೆ ಬೆಳೆದು ರೈತರು ಸುಖವಾಗಿ ಜೀವನಮಾಡಬಹುದು. ಜೊತೆಗೆ ಇರಿಗೇಷನ್ ಪಂಪುಗಳಿಗೆ ಬೇಕಾದಷ್ಟು ದರಖಾಸ್ತುಗಳು ಬರುತ್ತಾ ಇದ್ದರೂ ಅನೇಕ ಸಂದರ್ಭಗಳಲ್ಲಿ ಐರನ್ ಪೋಲುಗಳನ್ನು ಹಾಕುವುದರಿಂದ ಸರಿಯಾಗಿ ರಿಟರ್ನ್ ಬಾರದೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದರು ಇದನ್ನು ಗಮನಿಸಿ ನೀರಾವರಿ ಪಂಪಿಗೋಸ್ಕರ ಬಲಿಗಾಪೋಲ್ಸನ್ನು ಉಪಯೋಗಿಸುವ ಆಲೋಚನೆ ಮಾಡಬೇಕು. ಹೀಗೆಮಾಡಿ ನೀರಾವರಿ ಪಂಪುಗಳನ್ನು ರೈತರಿಗೆ ಒದಗಿಸಲು ಇಂಡಿಯಾ ಸರ್ಕಾರದವರಲ್ಲಿ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸಹಕಾರದ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ದೇಶದಲ್ಲಿ ಸಮಾಜ ಹಿತರಕ್ಷಣೆ

ಮಾಡಬೇಕು. ಅದನ್ನು ಬೆಳೆಸುವುದಕ್ಕೆ ಎಲ್ಲರ ಸಹಕಾರವಿದ್ದೇ ಇದೆ. ಆದರೆ ಆಡಳಿತದಲ್ಲಿ ನಿಜವಾಗಿಯೂ ಸಹಕಾರ ಪದ್ಧತಿ ಯಶಸ್ವಿಯಾಗಿ, ಅದರಿಂದ ಹೆಚ್ಚಿನ ಪ್ರಯೋಜನವನ್ನು ಜನರು ಪಡೆಯುತ್ತಿದ್ದಾರೆಯೇ ಎಂದರೆ ಅದೇನೂ ಕಂಡುಬರುತ್ತಿಲ್ಲ. ಕಾರಣ, ಕೇವಲ ಸರ್ಕಾರದವರನ್ನು ದೂಷಿಸಿದರೆ ಸಾಲದು. ಸಹಕಾರವನ್ನು ಯಶಸ್ವಿಗೊಳಿಸುವುದು ಎಲ್ಲರ ಹಿಡಿತದಲ್ಲಿಯೂ ಇದೆ. ಕೆಲವು ಸೊಸೈಟಿಗಳ ಆಡಳಿತ ಸಮರ್ಪಕವಾಗಿಲ್ಲ. ಕಾರಣ ಅನುಭವ ಸಾಲದೆ ಇರಬಹುದು ಅದನ್ನು ಸರಿಪಡಿಸಬೇಕಾದರೆ, ಇಲಾಖೆಯವರು ಹೆಚ್ಚಿನ ದಕ್ಷತೆಯಿಂದ ಮತ್ತು ಮುತುವರ್ಜಿಯಿಂದ ಕೆಲಸಮಾಡಿದರೆ, ಪ್ರತಿಯೊಂದು ಸಹಕಾರ ಸಂಘವೂ ಯಶಸ್ವಿಯಾಗಿ ಕೆಲಸ ಮಾಡುತ್ತದೆ. ಇದಕ್ಕಾಗಿ ಹೆಚ್ಚಿಗೆ ಪ್ರಚಾರ ನಡೆಯಬೇಕು. ಮುಖ್ಯವಾಗಿ ನಾನು ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹರಿಜನರಿಗಾಗಿ ಒಂದು ಸೊಸೈಟಿಯನ್ನು ಪ್ರಾರಂಭಮಾಡಬೇಕೆಂದು ಎರಡು ವರ್ಷಗಳಿಂದಲೂ ಕೇಳುತ್ತಿದ್ದೇನೆ. ಇದಕ್ಕಾಗಿ 90 ಸಾವಿರ ರೂಪಾಯಿಗಳನ್ನು ಕೊಡಲು ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ. 20 ಸಾವಿರ ರೂಪಾಯಿಗಳನ್ನು ನಮ್ಮ ಸಂಸ್ಥಾನ ಸರ್ಕಾರದವರನ್ನು ಕೇಳಿದ್ದೇವೆ. ಈಗ ಪತ್ರ ಬಂದು ಆರು ತಿಂಗಳು ಆಗಿದೆ. ನಮ್ಮ ಸಂಸ್ಥಾನದ ಸರಕಾರದವರು ಈ ಬಗ್ಗೆ ಹೆಚ್ಚು ನಿಗಾ ತೆಗೆದುಕೊಂಡರೆ ನಿಜವಾಗಿ ಬಹಳ ಮಟ್ಟಿಗೆ ಸಹಾಯವಾಗುತ್ತದೆ. ಕ್ಷಾಮನಿವಾರಣೋಪಾಯಕ್ಕೆ ಇದೂ ಒಂದು ಮಾರ್ಗವೆಂದು ಸೂಚಿಸುತ್ತೇನೆ. ಗೃಹ ಕೈಗಾರಿಕೆಗಳು ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳು ಅಭಿವೃದ್ಧಿಯಾಗುವುದಕ್ಕೆ ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲ್ಲೂಕುಗಳಲ್ಲಿ ಸಾಕಾದಷ್ಟು ಸೌಕರ್ಯಗಳಿವೆ. ಅಲ್ಲಿ ಗೇರು ಹಣ್ಣಿನ ಗಿಡಗಳನ್ನು ಬೆಳೆಸಬಹುದು ಮತ್ತು ಮಾವಿನ ಹಣ್ಣುಗಳನ್ನು ಜಾಸ್ತಿ ಬೆಳೆಯಬಹುದು. ಅದಕ್ಕನುಸಾರವಾಗಿ ಬೇಕಾದಷ್ಟು ಕಾರ್ಖಾನೆಗಳನ್ನು ಸ್ಥಾಪನೆ ಮಾಡಬಹುದು. ಈಗಲಾದರೂ ದಯವಿಟ್ಟು ಸರಕಾರದವರು ಆ ತಾಲ್ಲೂಕುಗಳಲ್ಲಿ ಈ ಬಗ್ಗೆ ತಕ್ಕವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

The House adjourned for recess at Ten of the Clock and reassembled at Thirty Minutes past Ten of the Clock.

[MR. SPEAKER] in the Chair]

[Sri N. O. SAMAJI spoke in Marathi. His speech is printed in the appendix number to this Volume]

ಶ್ರೀ ಎಸ್. ವೆ. ಪಾಟೀಲ್ (ಸಿಂದಿಗಿ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದಿರುವ ಬೇಡಿಕೆಗೆ ಅನುಮೋದನೆಯನ್ನು ಕೊಟ್ಟು ಮುಖ್ಯವಾಗಿ ದುಷ್ಕಾಲದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ಮೈಸೂರು ರಾಜ್ಯದ ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆಯ ದಕ್ಷಿಣ ಭಾಗ, ಗುಲ್ಬರ್ಗ ಜಿಲ್ಲೆ, ಸಿಂದಗಿ ತಾಲ್ಲೂಕು, ಬೆಳಗಾಂ ಜಿಲ್ಲೆಯ ಅಥನಿ ಭಾಗ, ಬಳ್ಳಾರಿ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಕೋಲಾರದ ಜಿಲ್ಲೆ ಭಾಗಗಳು —ಈ ಕಡೆ ಸಂಸ್ಥಾನದ ಕಾಲು ಭಾಗಕ್ಕಿಂತ ಹೆಚ್ಚು ಪ್ರದೇಶ ದುಷ್ಕಾಲ ಪೀಡಿತವಾಗಿದೆಯೆಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರಲ್ಲೂ ನಮ್ಮ ಬಿಜಾಪುರ ಜಿಲ್ಲೆಯ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಈ ದೃಷ್ಟಿಯಿಂದ ಸಾಧಾರಣವಾಗಿ ಬೇರೆ ಬೇರೆ ಜಿಲ್ಲೆಯ ಮಹಾಜನರು, ಮಾನ್ಯ ಸದಸ್ಯರು ತಮ್ಮ ಜಿಲ್ಲೆಯ ಪರಿಸ್ಥಿತಿ ಬಗ್ಗೆ, ಕಾಫಿ ಪ್ಲಾಂಟೇಷನ್ ಸಲುವಾಗಿ ಅಥವಾ ಬೇರೆ ಬೇರೆ ಸುಧಾರಣೆ ಹೇಳುತ್ತಿರುವಾಗ ನಾವು ದುರ್ದೈವದಿಂದ ದುಷ್ಕಾಲದ ಅನುಭವವನ್ನು ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ದುಷ್ಕಾಲದ ಅನುಭವವಲ್ಲದೆ ನಮಗೆ ಮತ್ತಾವ ಅನುಭವವೂ ಇಲ್ಲ, ದುಷ್ಕಾಲ ಪರಿಸ್ಥಿತಿಯ ಸುಧಾರಣೆಗೆ ಏನು ಮಾಡಬೇಕೆಂಬುದನ್ನು ಹೇಳುವುದು ಹೊರತು ಮತ್ತೇನೂ ನಮಗೆ ಅನುಭವವಿಲ್ಲ. ನಮ್ಮ ಜಿಲ್ಲೆ ರೈತರಿಗೆ ದುಷ್ಕಾಲದ ಸಲುವಾಗಿ ಪ್ರವಾಸ ಮಾಡುವುದು, ದುಷ್ಕಾಲದ ವಿಷಯವಾಗಿ ಅನುಭವ ಪಡೆಯುವುದು ಈ ತೊಂದರೆ ಇನ್ನು ಮುಂದೆ ಇರಬಾರದು. ಸಿಂದಿಗಿ ತಾಲ್ಲೂಕಿನಲ್ಲಿ ಪ್ರವಾಸ ಮಾಡಿರುವ ಜನರಿಗೆ ಅಲ್ಲಿರುವ ಬಹುಭಾಗದ ದುಷ್ಕಾಲ ಪರಿಸ್ಥಿತಿ ಅನುಭವಕ್ಕೆ ಬಂದಿರುತ್ತದೆ. ಸಾಧಾರಣವಾಗಿ ಅಲ್ಲಿರುವ ಕಷ್ಟಪರಿಸ್ಥಿತಿಯನ್ನು ಹತ್ತು ನಿಮಿಷಗಳಲ್ಲಿ ಹೇಳುವುದು ಅಸಾಧ್ಯ. ನಮ್ಮ ಜಿಲ್ಲೆಯಲ್ಲಿರುವಂತೆಯೇ ಬಳ್ಳಾರಿ ಜಿಲ್ಲೆಯಲ್ಲೂ ತೀವ್ರವಾದ ದುಷ್ಕಾಲ ಪರಿಸ್ಥಿತಿಯಿದೆ. ಬಿಜಾಪುರ ಜಿಲ್ಲೆ ಜನರ ಪರಿಸ್ಥಿತಿಯನ್ನು ಮಾನ್ಯ ಕ್ಯಾಬಿನೆಟ್ಟಿನವರೂ ಮತ್ತು ಮಾನ್ಯ ಸದಸ್ಯರೂ ಪೂರ್ಣವಾಗಿ ಅಭ್ಯಾಸ ಮಾಡಿ ದುಷ್ಕಾಲ ಪರಿಸ್ಥಿತಿಯಿರುವ ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಬಿಜಾಪುರ ಮುಂತಾದ ಜಿಲ್ಲೆಗಳ ಸಲುವಾಗಿ ಒಂದು ಯೋಜನೆ ಮಾಡಿ ಪರಿಹಾರದ ಉಪಾಯವನ್ನು ಕಂಡುಹಿಡಿಯುವುದು ಅವರ ಆದ್ಯಕರ್ತವ್ಯವೆಂದು ನಮ್ರತೆಯಿಂದ ಹೇಳುತ್ತೇನೆ. ಈ ದೃಷ್ಟಿಯಿಂದ ಬಿಜಾಪುರ ಜಿಲ್ಲೆ ಮಟ್ಟಿಗೆ ಹೇಳುವುದಾದರೆ ಸರ್ಕಾರದ ಅಪ್ಪರ್ ಕೃಷ್ಣ ಪ್ರಾಜೆಕ್ಟ್, ಮೇಜರ್ ಇರಿಗೇಷನ್ ವರ್ಕ್ಸ್, ಘಟಪ್ರಭಾ ಯೋಜನೆ, ಎರಡು ದಂಡೆ ಯೋಜನೆ ಇವೆಲ್ಲಾ ಪೂರ್ಣವಾಗಬೇಕು. ಸಿಂದಗಿ ತಾಲ್ಲೂಕು ವಿಷಯ ನಮಗೆ ಸಂಬಂಧಪಟ್ಟಿದೆಯೆಂಬ ದೃಷ್ಟಿಯಿಂದ ಹೇಳುತ್ತಿಲ್ಲ, ಅಲ್ಲಿ ಕೆಟ್ಟ ಪರಿಸ್ಥಿತಿಯಿರುವುದರಿಂದ ಹೇಳುತ್ತಿದ್ದೇನೆ. ಅಲ್ಲಿ ಮುಖ್ಯವಾಗಿ ಅಪ್ಪರ್ ಕೃಷ್ಣ ಮತ್ತು ಧೋಂಡ್ ಯೋಜನೆಯೇನಿದೆ ಅವನ್ನು ತೀವ್ರವಾಗಿ ಕೈಕೊಳ್ಳಬೇಕು. ಬಿಜಾಪುರ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ 1917 ರಿಂದ 1957ರವರೆಗೆ 1917, 1918, 1923, 1924, 1927, 1930, 1936, 1937, 1941, 1942, 1945, 1947, 1951 ಮತ್ತು 1955—ಈ ವರ್ಷಗಳಲ್ಲಿ, ಹೋದವರ್ಷ ಮತ್ತು ಇಂದು ದುಷ್ಕಾಲ ಪರಿಸ್ಥಿತಿ ಇದೆ. ಇದನ್ನು ವಿಚಾರ ಮಾಡುವುದಾದರೆ ಪ್ರತಿ ಎರಡು-ಮೂರು ವರ್ಷಗಳಿಗೊಂದುಸಲವಾದರೂ ದುಷ್ಕಾಲ ಪರಿಸ್ಥಿತಿ ಬರುತ್ತಿರುತ್ತದೆಯೆಂಬುದು ವ್ಯಕ್ತವಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಇದನ್ನು ಸಹಿಸಿದೆವು; ಸ್ವಾತಂತ್ರ್ಯ ಬಂದ ಮೇಲೆ ನಮ್ಮದೇ ಸರ್ಕಾರವಿರುವಾಗ ಈ ಪರಿಸ್ಥಿತಿಯಿರಬಾರದೆಂಬುದನ್ನು ನಮ್ಮ ಸರ್ಕಾರ ಅವಶ್ಯವಾಗಿ ವಿಚಾರ ಮಾಡಬೇಕು. ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಏರ್ಪಾಡು ಮಾಡಿರುವ ದುಷ್ಕಾಲ ಕಾಂಗಾರಿಗಳಿವೆ, ಈ ವರ್ಷವೂ ದುಷ್ಕಾಲವಿದೆ. ಹೋದವರ್ಷ ಮಳೆ ಹೆಚ್ಚಾಗಿ ದುಷ್ಕಾಲ ಬಂತು, ಈ ವರ್ಷ ಮಳೆಯಿಲ್ಲದೆ

(ಶ್ರೀ ಎಸ್. ವೈ. ಪಾಟೀಲ್)

ಶೇಂಗಾ ಬೀಜ ಬಿತ್ತುವುದಕ್ಕಾಗಿ ಇಟ್ಟುಕೊಂಡಿದ್ದುದನ್ನು ಮಾರಾಟ ಮಾಡುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬರೆದಿರುತ್ತಾರೆ. ಈ ಕನಿಕರ ಪರಿಸ್ಥಿತಿ ಮುಂದುವರಿದರೆ ಸರ್ಕಾರ ಹೆಚ್ಚು ಹಣ ಒದಗಿಸಬೇಕಾಗುತ್ತದೆ, ತೊಂದರೆ ಹೆಚ್ಚುತ್ತದೆ, ರೈತರಿಗೆ ಬಹಳ ತ್ರಾಸಾಗುತ್ತದೆ ಎಂಬ ಕಲ್ಪನೆಯಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ದುಷ್ಕಾಲ ಕಾಂಗಾರಿಗಳಿಗೆ ಹೆಚ್ಚು ಹಣ ಕೊಡಬೇಕೆಂದು ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳಬೇಕಾಗಿದೆ. ಈ ರೋಗದ ಔಷಧಿಗೆ ಹೆಚ್ಚು ಖರ್ಚಾಗಬೇಕು. ಈಗ ಏಳೂವರೆ ಲಕ್ಷ ರೂಪಾಯಿಗಳು ಖರ್ಚಿಗಿದೆ, ಅದನ್ನು 14 ಲಕ್ಷಕ್ಕೆ ಬೆಳೆಸಿದರೂ ಸಾಲದೆಂಬ ಪರಿಸ್ಥಿತಿಯಿದೆ. ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಅಭಿಪ್ರಾಯ ಹೇಳುವಾಗ ಕೆಲವು ವಿಚಾರ ಹೇಳಿದ್ದೇನೆ. 1918ನೆಯ ಇಸವಿಯಲ್ಲಿ ಮುಂಬಯಿ ಸರ್ಕಾರ ಒಂದು ಕೋಟಿ 65 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿತು. ಬಳ್ಳಾರಿ ಮುಂತಾದ ಕಡೆ ಎಲ್ಲಿ ದುಷ್ಕಾಲವಿದೆಯೋ ಮೇಜರ್ ಇರಿಗೇಷನ್ ಕೆಲಸ, ಮೈನರ್ ಇರಿಗೇಷನ್ ಕೆಲಸ ಎಷ್ಟು ಮಾಡಲು ಸಾಧ್ಯವಿದೆ ಅಷ್ಟನ್ನೂ ಕೈಗೊಳ್ಳಬೇಕು. ನೀರಾವರಿ ಸೌಕರ್ಯವಿಲ್ಲದಿರುವ ಕಡೆ ಕೊಳವೆ ಬಾವಿಗಳನ್ನಾದರೂ ತೆಗೆಸಿ ಸೌಕರ್ಯ ಮಾಡಬೇಕು, ಹೇಗಾದರೂ ಮಾಡಿ ಇರುವ ಯೋಜನೆಗಳನ್ನು ಪೂರೈಸಿ ಜನರಿಗೆ ಅನುಕೂಲ ಒದಗಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮನುಷ್ಯರೂ ದನಗಳೂ ನೀರಿದ್ದಲ್ಲಿ ಹೋಗಿ ಕುಡಿಯಬಹುದು; ಆದರೆ ಹೊಳೆಗಳ ನವಿರಾದ ಬೆಳೆಗಳೂ ಸಹ ನೀರನ್ನು ನೋಡುತ್ತಾ ಒಣಗಿ ಹೋಗುತ್ತವೆ. ಅದು ದುಃಖದ ಸಂಗತಿ. ಈ ಹೊತ್ತು ನಮ್ಮ ಕಡೆ ಹರಿಯುವ ಐದು ನದಿಗಳ ನೀರು ಉಪಯೋಗವಾಗದೆ ಸಮುದ್ರ ಸೇರುತ್ತಿದೆ. ಅದನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ. ಬಿಜಾಪುರದ ಕಡೆ ಕೆಳಮಟ್ಟದಲ್ಲಿ ನೀರು ಹರಿಯುತ್ತದೆ, ಮೇಲಿಲ್ಲ, ಅದರಿಂದ ಉಪಯೋಗಕ್ಕೆ ಒದಗಿಸುವುದು ಕಷ್ಟ ಎಂದು ಹೇಳುತ್ತಾರೆ. ಆದರೆ ಈಗ ಬೇಕಾದಷ್ಟು ಸೈನ್ಸ್ ಶೋಧನೆ ಇರುವಾಗ ಉಪಾಯಮಾಡಿ ಉಪಯೋಗಕ್ಕೆ ಅವಕಾಶ ಮಾಡಬಹುದಾಗಿದೆ. ಯಾವುದು ತಾನೆ ಅಸಾಧ್ಯ? ಐದು ಹೊಳೆಗಳು ಇದ್ದು ಫಲವತ್ತಾದ ಭೂಮಿ ಇದ್ದು ನೀರಿಗಾಗಿ ತೊಂದರೆಪಡುವುದನ್ನು ನೋಡಿ ಕಣ್ಣೀರು ಉದುರಿಸಬೇಕಾಗಿದೆ. ಹೊಳೆಯ ಲೆವಲ್ ಕೆಳಗಿದ್ದರೂ ಅದನ್ನು ಉಪಯೋಗಕ್ಕೆ ಬರುವಂತೆ ಮಾಡಲು ಈಗಿನ ಸುಧಾರಣೆ ಕಾಲದಲ್ಲಿ ಅವಕಾಶವಿದೆ. ಸರ್ಕಾರ ಇದರ ಪರಿಶೀಲನೆಗಾಗಿ ಬಹಳ ಕಾಲ ಕಳೆಯಬಾರದು. ಮುನಿರಾಬಾದಿನಲ್ಲಿ ಸರ್ವೆಕಾರ್ಯಕ್ಕೆ ಒಂದು ಡಿವಿಷನ್ ತೆಗೆದು ಹತ್ತು ವರ್ಷಗಳಾದರೂ ಪರಿಹಾರ ದೊರಕಿಲ್ಲ. ಇದರ ಸಲುವಾಗಿ ಬಿಜಾಪುರದಲ್ಲಿ ಒಂದು ಡಿವಿಜನ್ ತೆಗೆದು ಅನುಕೂಲ ಮಾಡಿಕೊಡಬೇಕು. ರಾಜ್ಯದ ದುಷ್ಕಾಲ ಬೀಳುವ ಎಲ್ಲ ಭಾಗದ ಸರ್ವೆ ನಡೆಸಬೇಕು. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ನಮಗೆ ಹೆಚ್ಚು ಲಾಭವಾಗಲಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಾದರೂ ನಮ್ಮ ಕಡೆ ಯೋಜನೆಗಳು ಪರಿಪೂರ್ಣವಾಗಬೇಕು. ಘಟಪ್ರಭ ಯೋಜನೆಯಾದರೂ ಬಿಜಾಪುರದ ದಕ್ಷಿಣಭಾಗಕ್ಕೆ ಅನುಕೂಲವಾಗುವುದು. ಉತ್ತರ ಭಾಗಗಳಿಗೆ ಅನುಕೂಲವಾಗ ವುದಿಲ್ಲ. ಬಿಜಾಪುರ ಜಿಲ್ಲೆ ಉತ್ತರ ಭಾಗಗಳಲ್ಲಿ ಕಣ್ಣೀರುದುರಿಸುವ ಪರಿಸ್ಥಿತಿಯಿದೆ. ಆ ದೃಷ್ಟಿಯಿಂದ ಉತ್ತರ ಭಾಗದವರಿಗೆ ಸಹಾಯವಾಗಲು ಅಪ್ಪರ್ ಕೃಷ್ಣ ಮತ್ತು ಧೋಂಡ್ ಯೋಜನೆಗೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಬೇಕು. ಕೇಂದ್ರ ಸರ್ಕಾರದಲ್ಲಾದರೂ ಒತ್ತಾಯ ಮಾಡಿ ಸಹಾಯ ಪಡೆದು ಈ ಯೋಜನೆ ತೆಗೆದುಕೊಳ್ಳಬೇಕಾದ್ದು ಅವಶ್ಯಕ. ನಮ್ಮ ಕಡೆ ಪರಿಸ್ಥಿತಿ ಹೇಗಿದೆಯೆಂದು ರಾಮಮೂರ್ತಿ ಸಮಿತಿಯವರು ಚಿತ್ರಿಸಿದ್ದಾರೆ. ಈ ದಿವಸ ಶ್ರೀಮಂತರಾದರೆ ಎಲ್ಲಿಬೇಕಾದರೂ ಹೋಗಬಹುದು, ಬಡವರು ಹೇಗಾದರೂ ಕಾಲ ಕಳೆಯುತ್ತಾರೆ, ಆದರೆ ಮಧ್ಯವರ್ತಿ ಜನರು ಬಹಳ ಕಷ್ಟಪಡಬೇಕಾಗಿದೆ, ಬೆಳೆ ತೆಗೆಯುವುದಕ್ಕೆ ಸಾಧ್ಯವಿಲ್ಲ, ಐಶ್ವರ್ಯವಿಲ್ಲ, ಈ ದೃಷ್ಟಿಯಿಂದ ಮಧ್ಯಮವರ್ಗಕ್ಕೆ ಬಹಳ ಗೋಳಿದೆ, ಇದನ್ನು ವಿಚಾರ ಮಾಡಬೇಕು.

ಇನ್ನೊಂದು, ಕೋ-ಆಪರೇಟಿವ್ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಹಳ್ಳಿಗಳಲ್ಲಿ ಲಂಬಾಣಿಗಳು ಮತ್ತು ಹರಿಜನರ ಸಲುವಾಗಿ ಹೆಚ್ಚಾಗಿ ಹೌಸಿಂಗ್ ಸೊಸೈಟಿಗಳನ್ನು ತೆರೆಯಬೇಕು. ಹರಿಜನರ ವಸತಿ ಬಹಳ ಹೀನವಾಗದಲ್ಲಿರುವುದರಿಂದ ಮಲೇರಿಯ ಮುಂತಾದ ರೋಗಾದಿಗಳಿಗೆ ಗುರಿಯಾಗಲು ಅವಕಾಶವಿದೆ. ಇದರ ಸಲುವಾಗಿ ಅಸ್ಪೃಶ್ಯತಾ ನಿವಾರಣೆ ಸಲುವಾಗಿ ಅವರಿಗೆ ಎತ್ತರವಾದ ಕಡೆ ಉತ್ತಮವಾದ ಸ್ಥಳ ಕೊಡಬೇಕು. ಅದಕ್ಕೆ ಸಾಕಷ್ಟು ಹಣ ತೆಗೆದಿಡಬೇಕು.

ಇನ್ನೊಂದು ಮಾತು, ದುಷ್ಕಾಲದಲ್ಲಿ ಗ್ರಾಚ್ಯುಯಿಟಸ್ ರಿಲೀಫ್ ಬೆಂಗಳೂರಿಗೆ 50 ಸಾವಿರ ರೂಪಾಯಿ, ಮೈಸೂರಿಗೆ 50 ಸಾವಿರ ರೂಪಾಯಿ ಕೊಟ್ಟು ಬೆಳಗಾಂಗೆ ಐದು ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ದುಷ್ಕಾಲ ಕಾಂಗಾರಿ ಸಾಮಾನು ನೋಡಿದರೆ 50 ವರ್ಷಗಳಿಂದ ಕೊಡುವ ಮಂಡ ಗುದ್ದಲಿ ಮುಂತಾದ ಹಳೆಯ ಸಾಮಾನುಗಳೇ ಇವೆ, ಹೊಸ ಸಾಮಾನು ಕೊಡುತ್ತಿಲ್ಲ. ಜನರಿಗೆ ಆರಾಣೆ ಕೂಲಿ ಮಾತ್ರವಿದೆ. ಹೊಸ ಸಾಮಾನು ಇದರ ಸಲುವಾಗಿ ಒದಗಿಸಬೇಕು.

ಶ್ರೀ ಎಂ. ಪಿ. ಪಾಟೀಲ್.—ಡಿಸ್ಟ್ರೆಸ್ ರಿಲೀಫ್‌ಗೆ ಕೊಟ್ಟಿರುವ ಹಣ ಹಂಚಿದೆ, ಹೆಚ್ಚು ಬೇಕಾದರೆ ಕೊಡಿ ಎಂದು ಕೇಳಬಹುದು.

ಶ್ರೀ ಎಸ್. ವೈ. ಪಾಟೀಲ್.—ಇನ್ನೊಂದು ಮಾತು ಹೇಳುವುದು; ಈ ದುಷ್ಕಾಲ ಕಾರ್ಯಗಳಿಗಿರುವ 7,90,000 ರೂಪಾಯಿಗಳನ್ನು ಹೆಚ್ಚಿಸಿ ದುಷ್ಕಾಲ ಕಾಂಗಾರಿಗಳಿರುವುದನ್ನು ಪೂರ್ಣಮಾಡಲು ಡಿವಿಷನ್ ತೆರೆದು ಯೋಜನೆ ಹಾಕಿ ಸರ್ವೆ ಮಾಡಿ ಕೆಲಸ ಮಾಡಬೇಕು ಮತ್ತು ಟೆಕ್ನಿಕಲ್ ಸಿಬ್ಬಂದಿ ಕೊರತೆಯಿಂದ ಬಿಜಾಪುರ ಜಿಲ್ಲೆಯಲ್ಲಿ ಮಂಜೂರಾದ ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸ ಮತ್ತು ಇತರ ಕೆಲಸಗಳು ಆಗಿಲ್ಲ. ಅದನ್ನು ಬೇಕಾಗಿರುವ ಕಡೆಗೆ ಒದಗಿಸಿ ರೊಕ್ಕ ಸಾಕಷ್ಟು ಕೊಟ್ಟು ಕೆಲಸ ನಡೆಸಬೇಕು.

ಇನ್ನೊಂದು ಈ Housing Co-operative Society ಬಗ್ಗೆ ನಾನು ಹೇಳುವುದಿದೆ. ಮಾನ್ಯ ಶ್ರೀ ಸಾಮಾಜಿಯವರು ಮತ್ತು ಇತರರು ಇಲ್ಲಿ questionಗಳನ್ನು ಮಾಡಿದ್ದನ್ನೂ ಕೇಳಿದ್ದೇನೆ. ನಾವು ಕಾಂಗ್ರೆಸ್ಸಿನವರಾದುದರಿಂದ ನಮಗೇ ಸಮಸ್ತವಾದ ನೌಕರಿಗಳನ್ನು ಕೊಡುತ್ತಿದ್ದಾರೆಂದು ಕೂತ ಹೇಳಿದ್ದಾರೆ. ನಾನು ಒಂದು ಮಾತನ್ನು ಉತ್ತರರೂಪವಾಗಿ ಹೇಳುತ್ತೇನೆ. ಕಾಂಗ್ರೆಸ್ಸಿನವರೇ ಆಗಲಿ ಯಾರೇ ಆಗಲೀ ಅವರ ಪೈಕಿ ಯೋಗ್ಯತೆ ಇರುವವರಿಲ್ಲವೇನು? ಕಾಂಗ್ರೆಸ್ ಎಂದರೆ "ಹುಳ ಶಿಕಾರಿ" ನೌಕರರೇನು? ಆ ಕಾರಣ ತೆಗೆದುಕೊಳ್ಳಬಾರದೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥಿಸುತ್ತಿದ್ದೇನೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನನಗೆ ಕೊಟ್ಟಿರತಕ್ಕ ಹತ್ತು ನಿಮಿಷದಲ್ಲಿ Grand Trunk Express speedನಲ್ಲಿ ನನ್ನ ವಿಷಯಗಳನ್ನು ಹೇಳಬೇಕಾಗಿದೆ. ಹೊಸದಾಗಿ ಬಂದಿರುವ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ನಾನು ಹೇಳುವ ವಿಷಯಗಳಿಗೆ ಗಮನ ಕೊಡಬೇಕೆಂದು ಕೋರುತ್ತೇನೆ.

ಮೊದಲನೆಯದಾಗಿ, ನಮ್ಮ ಲ್ಯಾಂಡ್ ರೆವಿನ್ಯೂ ಕೋಡನ್ನು ಮಾಡಿ ಬಹಳ ವರ್ಷಗಳಾಗಿವೆ. 1888ನೆಯ ಇಸವಿಯಲ್ಲಿ ತಯಾರು ಮಾಡಿ ಈಚೆಗೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಅದು ಸರಿಯಾದ ರೀತಿಯಲ್ಲಿಲ್ಲ. ಇದರಿಂದ ರೆವಿನ್ಯೂ ಇಲಾಖೆಯಲ್ಲಿರುವ ಅಧಿಕಾರಿಗಳ ಸ್ವೇಚ್ಛಾಪ್ರವರ್ತನೆಗೆ ಹೆಚ್ಚಿನ ಸ್ಕೋಪು ಸಿಕ್ಕುತ್ತಿದೆ. ಆದುದರಿಂದ ಈಗ ಹೊಸ ಮೈಸೂರು ಆಗಿರುವುದರಿಂದ ಇದಕ್ಕೆ ತಕ್ಕಂತೆ ಒಂದು ಹೊಸ ಕೋಡನ್ನು ಮಾಡಬೇಕೆಂದು ನನ್ನ ಸಲಹೆ.

ಎರಡನೆಯದು, ರೆವಿನ್ಯೂ ಅಕೌಂಟುಗಳ ವಿಷಯವಾಗಿ ಹೇಳಬೇಕಾಗಿದೆ. ಈ ರೆವಿನ್ಯೂ ಲೆಕ್ಕಗಳನ್ನು ಸರಿಯಾಗಿ ಬರೆಯುತ್ತಿಲ್ಲ. ಉದಾಹರಣೆಗೆ ಈಗ Form No. VII. T.T. ಎಂದಿದೆ. T.T. ಎಂದರೆ ತಕರಾರು ತಃಖ್ತೆ ಮತ್ತು ಪಹಣೀಫಾರಂ. ಇದನ್ನು ಬರೆಯುವವರು ಹಳ್ಳಿಯಲ್ಲಿರುವ ಶ್ಯಾನುಭೋಗರು. ಇವರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ತಾಲ್ಲೂಕು ಆಫೀಸಿಗೆ ಈ ಲೆಕ್ಕವನ್ನು ಶ್ಯಾನುಭೋಗರು ಪ್ರತಿವರ್ಷವೂ ಕಳುಹಿಸಬೇಕು. ಮೂರು ನಾಲ್ಕು ವರ್ಷದವರೆಗೆ ಶ್ಯಾನುಭೋಗರು ಲೆಕ್ಕಗಳನ್ನು ತಾಲ್ಲೂಕು ಆಫೀಸಿಗೆ ಕಳುಹಿಸುವುದಿಲ್ಲ. ಕಳುಹಿಸುವಾಗ ಈ ಫಾರಂಗೆ ಬೇರೆ ಒಂದು ಹಾಳೆಯನ್ನು ಅಂಟಿಸಿ ಬರೆದಿರುತ್ತಾರೆ. ಆ ಲೆಕ್ಕಗಳಿಗೆ ಕೊನೆಯ ಹಾಳೆಯ ಕಡೆಯಲ್ಲಿ ಅಮಲ್ದಾರರುಗಳ ಸ್ಹೈನನ್ನು ಮಾಡಿಸುತ್ತಾರೆ. ನಾಲ್ಕೈದು ವರ್ಷಗಳಾದಮೇಲೆ ಆ ಫಾರಂನ್ನು ನೋಡಿದರೆ ಅದರಲ್ಲಿ ಸರಿಯಾದ ವಿವರಗಳೇ ಸಿಕ್ಕುವುದಿಲ್ಲ. ಕೆಲವು ಬದಲಾವಣೆಯೂ ಆಗಿರುತ್ತದೆ. ಈಗ Tenancy Act ಜಾರಿಗೆ ಬಂದಿದೆ. ಆದುದರಿಂದ ಈಗ ಶ್ಯಾನುಭೋಗರು ಈ ರೀತಿಯಾದ ಬೇರೆ ಹಾಳೆಗಳನ್ನು ಅಂಟಿಸಿ entry ಹಾಕಿಸುವುದನ್ನು ತಪ್ಪಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಈ ತರಹ ನೂರಾರು ಉದಾಹರಣೆಗಳನ್ನು ಬೇಕಾದರೆ ನಾನು ಕೊಡಬಲ್ಲೆ. ಒಬ್ಬ ಡಾಕ್ಟರ ಕೈಯಲ್ಲಿ ಒಂದು ಚೂರಿ ಇದ್ದರೆ ರೋಗಿಯನ್ನು ಆಪರೇಷನು ಮಾಡಿ ಬದುಕಿಸಬಹುದು. ಅದೇ ಚೂರಿ ಕಟುಕನ ಕೈಯಲ್ಲಿದ್ದರೆ ಒಬ್ಬನನ್ನು ಸಾಯಿಸಲೂಬಹುದು. ಹಾಗೆ ಈ ಪಹಣೀ ಲೆಕ್ಕ ಎನ್ನುವುದು ಶ್ಯಾನುಭೋಗರ ಕೈಯೊಳಗೆ ಸಿಕ್ಕಿ ರೈತರಿಗೆ ಅನೇಕ ಕಷ್ಟಗಳಾಗುತ್ತಿವೆ. ಇದನ್ನು ಸರಿಪಡಿಸಬೇಕು. ಶ್ಯಾನುಭೋಗರು ಪಹಣಿ ಲೆಕ್ಕ ಬರೆದು ಮೊದಲು ರೆವೆನ್ಯೂ ಇನ್ಸ್‌ಪೆಕ್ಟರಿಗೆ ಕೊಟ್ಟು ಅನಂತರ ಅವರಿಂದ ತನಿಖೆ ಮಾಡಿಸಿ ತಾಲ್ಲೂಕು ಆಫೀಸಿಗೆ ಬರುತ್ತದೆ. ಅನಂತರ ಅಮಲ್ದಾರರು ಇದನ್ನು initial ಮಾಡುತ್ತಾರೆ. ಆದರೆ ಈ ಹಾಳೆಗಳು ಕೆಲವು ಕಾಲದ ಮೇಲೆ, ಬದಲಾಗುತ್ತವೆ. ಆದುದರಿಂದ ಈ ರೀತಿ ಹಾಳೆ ಬೇರೆ ಮಾಡುವುದು ದೊಡ್ಡ ಅಪರಾಧ.

ಇನ್ನು ಜಮಾಬಂದಿಯ ವಿಚಾರವಾಗಿ ಅರಿಕೆ ಮಾಡಬೇಕಾಗಿದೆ. 10-15 ವರ್ಷಗಳ ಹಿಂದೆ ಕೊಂಬು, ಕಹಳೆ, ತುತ್ತೂರಿ, ಮುಂತಾದುವುಗಳನ್ನು ಊದಿಸಿ ಊರಿನಲ್ಲಿ ತೋರಣ ಕಟ್ಟಿಸಿ ಆಯಾ ಜಿಲ್ಲೆಯ ಡೆಪ್ಯುಟೀ ಕಮಿಷನರು, ಸಬ್ ಡಿವಿಜನ್ ಆಫೀಸರು ಐದಾರು ದಿನಗಳ ಕಾಲ ಅಲ್ಲಿಯೇ ಕ್ಯಾಂಪ್ ಮಾಡಿ ಇಂಟೆನ್ಸಿವ್ ಇನ್‌ಸ್ಪೆಕ್ಷನ್ನನ್ನು ಮಾಡಿ ಜಮಾಬಂದಿಯನ್ನು ನಡೆಸುವ ಪದ್ಧತಿಯಿತ್ತು. ಈಚೆಗೆ ಏನಾಗಿದೆ ಎಂದರೆ ಜಮಾಬಂದಿ ಎನ್ನುವುದು ಬಹಳ ಸಾಧಾರಣವಾಗಿ ಹೋಗಿದೆ. ಮೊದಲು ತಾಲ್ಲೂಕು ಆಫೀಸಿನಿಂದ ಗುಮಾಸ್ತರು ಹೋಗುತ್ತಾರೆ. ಅವರು ಜಮಾಬಂದಿ ಕ್ಯಾಂಪಿಗೆ ಹೋಗಿ ಶಾಖಾಯ ಲವಣಾಯ ಸಂಪಾದಿಸಿಕೊಂಡು ಡೆಪ್ಯುಟೀ ಕಮಿಷನರವರು ಬರುವ ವೇಳೆಗೆ ಫಾರಂಗಳನ್ನು ಸೈನಿಗಾಗಿ ಸಿದ್ಧಪಡಿಸಿರುತ್ತಾರೆ. ಸಾಮಾನ್ಯವಾಗಿ ಡೆಪ್ಯುಟೀ ಕಮಿಷನರವರು ಸಾಯಂಕಾಲ ಕಾರಿನಲ್ಲಿ ಹೊರಟು ಬಂದು ಲೆಕ್ಕಗಳಿಗೆ ಸೈನು ಮಾಡಿ ಸಂಜೆ ಹೊತ್ತಿಗೆ ವಾಪಸು ಹೊರಡುತ್ತಾರೆ. ಹೀಗಿದೆ ಈಗಿನ ಜಮಾಬಂದಿಯ ವೈಖರಿ ಇದರಿಂದ ಸರಿಯಾದ ಲೆಕ್ಕಗಳು ಸರ್ಕಾರಕ್ಕೆ ದೊರಕುತ್ತಿಲ್ಲ.

ಈಗ ಸರ್ಕಾರದವರು ಅಮಲ್ದಾರರುಗಳಿಗೆ National Extension Schemeನಲ್ಲಿ Jeep Vanಗಳನ್ನು ಕೊಟ್ಟಿದ್ದಾರೆ. ಇವನ್ನು ಅಮಲ್ದಾರರು ಸ್ವಂತ ಉಪಯೋಗಕ್ಕಾಗಿ ಉಪಯೋಗಿಸುತ್ತಿದ್ದಾರೆ.

ಶ್ರೀ ಎಂ. ಪಿ. ಪಾಟೀಲ್.—ಇದನ್ನು Revenue Officers ಎಂದರೆ Block Development ಆಫೀಸರುಗಳ ಉಪಯೋಗಕ್ಕೆ ಕೊಟ್ಟಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ತಮಗೆ ವಿಷಯ ಪೂರ್ತಿಯಾಗಿ ಗೊತ್ತಿಲ್ಲ ಎಂದು ತೋರುತ್ತದೆ. ಎಲ್ಲಿ ಈ ರೀತಿಯಾದ Jeep Vanಇವೆಯೋ ಅಲ್ಲಿ ಅವು ಸರ್ಕಾರದ ಕೆಲಸಕ್ಕೆ ಉಪಯೋಗವಾಗದೆ ಖಾಸಗಿ ಕೆಲಸಕ್ಕೆ ಉಪಯೋಗವಾಗುತ್ತಿವೆ ಎನ್ನುವ ವಿವರಗಳನ್ನು ತಮಗೆ ಬೇಕಾದರೆ ಕೊಡುತ್ತೇನೆ. ಪರಿಶೀಲಿಸಬಹುದು. ಅದಕ್ಕಾಗಿ ನಾನು ಸಲಹೆ ಮಾಡುವುದು, ಇವರುಗಳು ಯಾವ ಯಾವ ಗ್ರಾಮಗಳಿಗೆ ಹೋಗುತ್ತಾರೆ ಎಂಬುದಕ್ಕೆ Villages visited, surprise Inspections made," ಎನ್ನುವ ವಿವರಗಳನ್ನು ತೋರಿಸುವ ಒಂದು Register ಇಡುವ ಪದ್ಧತಿಯನ್ನು ಜಾರಿಗೆ ತಂದರೆ ಉತ್ತಮವೆಂದು ತೋರುತ್ತದೆ. ಹೀಗೆ ಇಲ್ಲಿ ಹೇಳುವಾಗ ನಾನು ಯಾರ ಮೇಲೆಯೂ ಆರೋಪವನ್ನು ಹೊರಿಸುತ್ತಿಲ್ಲ. ಇದನ್ನು ಗಮನದಲ್ಲಿಡಬೇಕು. ಈಗ ಜಮಾಬಂದಿಯನ್ನು ಒಬ್ಬರೇ ಆಫೀಸರಿಗೆ ವಹಿಸಿದ್ದಾರೆ. ನಾನು ಹಿಂದೆ Officer ಆಗಿದ್ದಾಗ ಈ ರೀತಿ check ಮಾಡಿದ್ದೇನೆ. ಇಲ್ಲಿ ಹೇಗಿದೆ ಎಂದರೆ ಆಫೀಸು ಇನ್ಸ್‌ಪೆಕ್ಷನ್ ಮಾಡುವ ಅನೇಕ ಆಫೀಸರುಗಳಿಗೆ ಅಷ್ಟು ಅನುಭವವಿಲ್ಲ. ಅವರ ಗುಮಾಸ್ತರುಗಳು ಮೊದಲೇ ಹೋಗಿ ಆಫೀಸುಗಳ ಲೆಕ್ಕಗಳನ್ನು ತನಿಖೆ ಮಾಡಿರುತ್ತಾರೆ. ಅದಕ್ಕೆ ತಕ್ಕ ಹಾಗೆ ಒಂದು Printed Form ಇದೆ. ಅದರಲ್ಲಿ "Yes or No" ಎಂದಿದೆ, ಅದನ್ನು ಭರ್ತಿ ಹಾಕಿ ಬರೆದು ಇಟ್ಟಿರುತ್ತಾರೆ. ಆಫೀಸರು ಬಂದು ಅವರ ಗುದ್ದಲಿ ಗುರ್ತನ್ನು (sign) ಎಲ್ಲಿ ಹಾಕಬೇಕು ಎಂದು ತೋರಿಸುತ್ತಾರೋ ಅಲ್ಲಿ ಹಾಕಿ ವಾಪಸು ತೆರಳುತ್ತಾರೆ. ಇದರಲ್ಲಿ Dependency on false Accounts ಇದೆ. ಸಬ್ ಡಿವಿಜನ್ನು ಆಫೀಸರವರ ಆಫೀಸಿನ ಸ್ಟಾಫ್ ಮೊದಲೇ ಹೋಗಿ ಅವರೇನು ಬರೆದಿರುತ್ತಾರೆಯೋ ಅದಕ್ಕೆ "Yes or No" ಎಂದು ಬರೆದು ಬರುವ ಪದ್ಧತಿ ರೂಢಿಯಲ್ಲಿದೆ. ಇನ್ನೂ ಹೆಚ್ಚಾಗಿ ಹೇಳಬಹುದು, ಆದರೆ ಅವನ್ನೆಲ್ಲ ಇಲ್ಲಿ ಹೇಳುವುದು ಅಸಹ್ಯವಾಗಿ ಕಾಣುತ್ತದೆ. ಆದುದರಿಂದ ಹೇಳುವುದಿಲ್ಲ.

(ಶ್ರೀ ಜಿ. ಎನ್. ಪುಟ್ಟಣ್ಣ)

ಒಬ್ಬ ರೈತನು ಯಾವ ಆಫೀಸಿಗೇ ಆಗಲಿ ಅರ್ಜಿಯನ್ನು ಕೊಟ್ಟರೆ ಅವನ ಅರ್ಜಿಗೆ ಆಯಾ ಆಫೀಸುಗಳಿಂದ Acknowledgement ಕೊಡುವ ಪದ್ಧತಿಯಿದೆ. ಆದರೆ ಅದರಂತೆ ಇವೊತ್ತಿನ ದಿವಸ ಆ ರೂಲನ್ನು ಯಾರೂ ಪಾಲಿಸುತ್ತಿಲ್ಲ. ಇದರಿಂದ ರೈತರಿಗೆ ಅವರು ಬರೆಯುವ ಅರ್ಜಿಗಳ ವಿಷಯವಾಗಿ ಏನಾಗುತ್ತೋ ಅವರಿಗೆ ತಿಳಿಯುವುದಿಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕಾದುದು ಅಗತ್ಯ.

ಗ್ರಾಮಗಳಲ್ಲಿ ಇರತಕ್ಕ ಭೂಮಿಯಲ್ಲಿ ಗೋಮಾಳವಿಲ್ಲದಿದ್ದರೆ ಗೋಮಾಳಕ್ಕಾಗಿ ಸ್ವಲ್ಪ ಜಮೀನನ್ನು ಕೊಡಬೇಕೆಂದು ಈಗಿನ ಮಾನ್ಯ ರೆವಿನ್ಯೂ ಮಂತ್ರಿಗಳು ಆರ್ಡರು ಕೊಡಿಸಿರುವರೆಂದು ತಿಳಿಯಿತು. ಆದರೆ ಅದರಂತೆ ನಡೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಾನೇ ಒಂದು ಅರ್ಜಿ ಕಳುಹಿಸಿದ್ದೆ. ತುಮಕೂರು ತಾಲ್ಲೂಕಿಗೆ ಸೇರಿದ್ದ ಕರಡಗೆರೆ ಕಾವಲು, ತುರುವೇಕೆರೆ ತಾಲ್ಲೂಕಿನ ಸಂಪಿಗೆ ಹೊಸಹಳ್ಳಿ ಕಾವಲು, ಈ ಕಡೆಗಳಲ್ಲಿ ಸುಮಾರು ನಾನೂರು ಎಕರೆ ಜಮೀನುಗಳಿದ್ದದ್ದನ್ನು ಎಪ್ಪತ್ತು, ಎಂಭತ್ತು ಜನಗಳು ಹಂಚಿಕೊಂಡು ಅಲ್ಲಿ ಜಮಾನು ಇಲ್ಲದಂತೆ ಮಾಡಿದ್ದಾರೆ. ಹೀಗೆ ನೋಡಿದರೆ ಊರಿನಲ್ಲಿ ಜಮೀನಿಲ್ಲದಿದ್ದರೇ ವಾಸಿ ಎಂದು ತೋರುತ್ತದೆ. ಈ ರೀತಿಯಾಗಿ ಈಗ ಸುಮಾರು ಹತ್ತು ವರ್ಷಗಳಿಂದಲೂ ನಡೆಯುತ್ತಿದೆ ಎಂದು ಕೇಳಿದ್ದೇನೆ. ಭೂಮಿ ಇಲ್ಲದೇ ಇರತಕ್ಕ ನೂರಾರು ಜನಗಳ ಹೆಸರನ್ನು ತೋರಿಸಿ ಜಮಾನನ್ನು ಹಂಚಿಕೊಳ್ಳುತ್ತಿದ್ದಾರೆ. ಈಚೆಗೆ ಡೆಪ್ಯುಟಿ ಕಮಿಷನರವರು ಹೋಗಿದ್ದಾಗ ಗೋಮಾಳವೇ ಆಗತಕ್ಕದ್ದು ಸರಿ ಎಂದು ಆರ್ಡರು ಮಾಡಿದ್ದಾರೆ ಎಂದು ಕೇಳಿ ಸಂತೋಷವಾಯಿತು. ಈಗಲೂ ಕಾಂಗ್ರೆಸ್ ಸರಕಾರ ಬಂದು ಹತ್ತು ವರ್ಷಗಳಾದರೂ ಗೋಮಾಳಕ್ಕಾಗಿ ಸರಿಯಾದ ಜಮೀನುಗಳು ಸಿಕ್ಕುತ್ತಿಲ್ಲ. ಕೆಲವು ಕಡೆ ಗೋಮಾಳಕ್ಕಾಗಿ ಜಮೀನುಗಳನ್ನು ಕೊಡಬೇಕೆಂದು ಡೆಪ್ಯುಟೀ ಕಮಿಷನರವರಿಗೆ ಹೇಳಿದರೂ ಏನೂ ಆಗಲಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ಗುಬ್ಬಿ ತಾಲ್ಲೂಕಿನಲ್ಲಿ ಮಣ್ಣಿಮಾಲೆ ಕಾವಲಿನಲ್ಲಿ ಹತ್ತಾರು ಗ್ರಾಮಗಳಿಗೆ ಗೋಮಾಳವೇ ಇಲ್ಲದಿದ್ದರೂ ಸಹ ಜಮಾನನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಇದೇ ರೀತಿಯಾಗಿ ತುಮಕೂರು ತಾಲ್ಲೂಕು ಕುಂಕುಮನಹಳ್ಳಿ ಗ್ರಾಮದಲ್ಲೂ ಕೊಟ್ಟಿದ್ದಾರೆ. ದನಗಳು ಹೆಜ್ಜೆ ಇಡುವುದಕ್ಕೂ ಸಹ ಜಾಗವಿಲ್ಲದಂತೆ ಗೋಮಾಳವನ್ನು ಸಾಗುವಳಿಗೆ ತಮ್ಮ ಇಷ್ಟಾನುಸಾರ ತಮಗೆ ಬೇಕಾದವರಿಗೇ ಕೊಡುತ್ತಿದ್ದಾರೆ. ಇದೇ ರೀತಿ ಗುಬ್ಬಿ ತಾಲ್ಲೂಕಿನಲ್ಲಿರುವ ಚಿಕ್ಕನೆಟ್ಟಗುಂಟೆ ಗ್ರಾಮದಲ್ಲಿಯೂ ಆಗಿದೆ. ಈಗಲಾದರೂ ಸರಕಾರದವರು ಈ ವಿಚಾರದಲ್ಲಿ ಮುಂದಿನ ಕ್ರಮ ನಡೆಸಿ ರೈತರಿಗೆ ಅನುಕೂಲಪಡಿಸಿಕೊಡಬೇಕಾಗಿ ಪ್ರಾರ್ಥನೆ.

ಇನ್ನು Redundancy of Accounts ವಿಚಾರ. ಈಗ ಸರಕಾರದವರು ಇರಿಗೇಷನ್ ಸೆಸ್ಸು ಎಂದು ಹಾಕುತ್ತಾರೆ. ಬೊಂಬಾಯಿಯಲ್ಲಿ 1888ರಲ್ಲಿ ಒಂದು ಆಕ್ಟು ಪಾಸಾದದ್ದನ್ನು ಇಲ್ಲಿ ಅನುಸರಿಸುವುದರಿಂದ ಇಲ್ಲಿಯ ಸರಕಾರದಲ್ಲಿರುವ ಪೆಂಡಿಂಗ್ ಛಾರ್ಜುಗಳನ್ನು ತಿಳಿದುಕೊಳ್ಳಲು ಹೇಗೆ ಸಾಧ್ಯ? ಇಲ್ಲಿಯ ಕಮೀಷನರುಗಳಿಗೆ ಅದೇನು ಎನ್ನುವುದೇ ತಿಳಿದಿರುವುದಿಲ್ಲ.

ಮತ್ತೊಂದು ವಿಚಾರ ಅರಿಕೆಮಾಡಬೇಕಾಗಿದೆ. ಸರಕಾರದವರು ಎಲ್ಲ ಆಫೀಸುಗಳಿಗೂ furniture ಸರಬರಾಜು ಮಾಡುತ್ತಿದ್ದಾರೆ. ಸ್ಟಾಕ್ ರಿಜಿಸ್ಟರು ಎಂಬುದನ್ನೇನೋ ಅಧಿಕಾರಿಗಳು ಇನ್ಸ್‌ಪೆಕ್ಟ್ ಮಾಡಿಕೊಂಡು ಬರುತ್ತಾರೆ. ಹಿಂದೆ ನಾನಿದ್ದಾಗಲೂ ಸಹ ಈ ರೀತಿಯಾಗಿ ಇನ್ಸ್‌ಪೆಕ್ಷನನ್ನು ಮಾಡಿದ್ದೇನೆ; ಚೆಕ್ಕನ್ನು ಮಾಡಿದ್ದೇನೆ. ತನಿಖೆಗಾಗಿ ಹೋದ ಅಧಿಕಾರಿಗಳು "Checked and found correct" ಎಂದು ಆ ಸ್ಟಾಕು ರಿಜಿಸ್ಟರಿನಲ್ಲಿ ಬರೆದು ರುಜು ಹಾಕಬೇಕು. ಆಫೀಸಿನಲ್ಲಿರುವ ಎಷ್ಟೋ ಕುರ್ಚಿಗಳು ಟೇಬಲ್ಲುಗಳು ಮುಂತಾದವುಗಳು ಆಫೀಸಿನಿಂದ ಅದಲುಬದಲಾಗಿ ಆಫೀಸರುಗಳ ಮತ್ತು ಇನ್ನಿತರ ಅಧಿಕಾರಿಗಳ ಮನೆಗಳಿಗೆ ಹೋಗಿವೆ. ಅಂತಹ ಉದಾಹರಣೆಗಳು ಎಷ್ಟೋ ಇವೆ.

11 A.M.

ರೆವಿನ್ಯೂ ಆಫೀಸುಗಳಲ್ಲಿ ಇನ್ನೊಂದು ವಿಚಾರ ನಡೆಯುತ್ತಿದೆ. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡತಕ್ಕ ಕೋಟಾ ಕೊಡುವುದಿಲ್ಲ. ಅಕೌಂಟ್ಸ್ ಮಾಡಿರುವುದಿಲ್ಲ. ಮಂತ್ರಿಗಳೇನೋ ಕೊಡುತ್ತೇವೆಂದು ಹೇಳಿದರು. ಎರಡನೆಯದಾಗಿ, ದರಖಾಸ್ತು ಅರ್ಜಿಗಳನ್ನು ರಿಜಿಸ್ಟರಿನಲ್ಲಿ ದಾಖಲು ಮಾಡಿಕೊಳ್ಳುವುದೇ ಇಲ್ಲ. ರೈತ ಬಂದು ಏನಾದರೂ ಕೊಟ್ಟರೆ ಮಾಡುತ್ತಾರೆ.

Sri T. SUBRAMANYA (Turuvekere).—Probably he is giving out his experiences when he was a Revenue Officer.

Sri G. N. PUTTANNA.—That is what I am saying. I never did it in my life time.

Mr. SPEAKER.—What is the point please?

Sri T. SUBRAMANYA.—I was not hearing him completely. He was a Revene Officer. Probably he was giving out his experience. I wanted to hear him completely.

ಶ್ರೀ ಜಿ. ಎನ್. ಪುಟ್ಟಣ್ಣ.—ನನ್ನ ಮಿತ್ರರೂ ನಾನೂ ಒಂದೇ ಸ್ಥಳದವರು, ಒಂದೇ ಮನೆಯಲ್ಲಿರುವಂತೆ ಇರುವವರು, ಅವರೂ ನನ್ನಂತೆ ಜಮೀನ್ದಾರರು. ಅವರು ಭಾರಿ ಜಮೀನ್ದಾರರು, ಒಳ್ಳೆಯ ದೊಡ್ಡ ಮನೆತನದವರು. ನಾನೂ ಜಮೀನ್ದಾರ, ಜೋಡಿದಾರ, ಆದರೆ ಬಡ ರೈತ.

ದರಖಾಸ್ತು ಅರ್ಜಿಯನ್ನು ಯಾರಾದರೂ ಒಬ್ಬ ಕೊಟ್ಟರೆ, ಅದು ಯಾರದೆಂದೂ ನೋಡುವುದಿಲ್ಲ. ಶಾಕಾಯ ಲವಣಾಯ ಬಿದ್ದರೆ ಆಗ ಆ ದರಖಾಸ್ತು ಹೊರಗೆ ಬರುತ್ತದೆ, ರಿಜಿಸ್ಟರಾಗುತ್ತದೆ.

ಒಬ್ಬ ಸದಸ್ಯರು.—"ಶಾಕಾಯ ಲವಣಾಯ" ಎಂದರೆ ಏನೆಂಬುದು ಅರ್ಥವಾಗಲಿಲ್ಲ. (ನಗು!)

ಶ್ರೀ ಜಿ. ಎನ್. ಪುಟ್ಟಣ್ಣ.—ಲಂಚ ಎಂದರ್ಥ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಶಾಕ ಎಂದರೆ ತರಕಾರಿ, ಲವಣ ಎಂದರೆ ಉಪ್ಪು ಎಂದು ಶ್ರೀ ವೀರಣ್ಣಗೌಡರು ಅರ್ಥ ಹೇಳಿದ್ದಾರೆ. (ನಗು!)

ಶ್ರೀ ಜಿ. ಎನ್. ಪುಟ್ಟಣ್ಣ.—ಸಾಲು ಮರಗಳು ದೇಶದ ಆಸ್ತಿ. ಅನೇಕ ಕಡೆ ಈ ಮರಗಳಿಗೆ ಬೆಂಕಿ ಹಾಕುತ್ತಿದ್ದರೆ, ಹಾಳು ಮಾಡುತ್ತಿದ್ದಾರೆಂದು ವಿಷಾದದಿಂದ ಹೇಳುತ್ತೇನೆ. ಯಾರು

ಮರಗಳನ್ನು ಹಾಕುತ್ತಾರೋ ಅವರಿಗೆ ಸನ್ನದು ಕೊಡಬೇಕು. ಇದೊಂದು ರಚನಾತ್ಮಕ ಸಲಹೆ ಯೆಂದು ಭಾವಿಸಬೇಕು.

ಕೆಲವು ಸರ್ಕಾರಿ ನೌಕರರು ಬೆಂಗಳೂರಿನಲ್ಲೇ ಹುಟ್ಟಿ ಬೆಂಗಳೂರಿನಲ್ಲೇ ನಿವೃತ್ತರಾಗುತ್ತಾರೆ. ಈ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಒಳ್ಳೆಯ ಫ್ಯಾನ್ ಹಾಕಿ ಕೊಂಡು ಮಜಾ ಮಾಡುತ್ತಿದ್ದಾರೆ. ಇವರು ಯಾವಾ ಗಲೂ ಇಲ್ಲೇ ಇರುತ್ತಾರೆ. ಆದರೆ ಕೆಲವರು ಬಡ ಪಾಯಿಗಳು ಮಲೆನಾಡಿನಲ್ಲೇ ಸರ್ಕಾರಿ ಕೆಲಸದಲ್ಲೇ ಸಾಯುತ್ತಾರೆ. ಹೀಗಾಗಬಾರದು. ಇದನ್ನು ಸರಿ ಪಡಿಸಬೇಕು.

Date of birth ಎಂದು ಹೇಳಿಕೊಂಡು ಅನೇಕರಿಗೆ ತಲೆ ಹೊಡೆದಿದ್ದಾರೆ. ಇನ್ನು ಕೆಲವರು ನಿಮ್ಮ ವರ್ಗ ದವರೂ, ಹಿಂದುಳಿದ ವರ್ಗದವರೂ ಕೂಡ ಹತ್ತಾರು ವರ್ಷಕಾಲ ಸರ್ಕಾರದಲ್ಲಿ ಕೆಲಸಮಾಡಿಯೂ ಕೂಡ ಇನ್ನೂ ಕ್ಲಾರ್ಕುಗಳೋ ಸೂಪರಿಂಟೆಂಡೆಂಟ್‌ಗಳೋ ಆಗಿರುತ್ತಾರೆ, ಇಂಥವರನ್ನು ಕೇಳುವವರೇ ಇಲ್ಲ. ಇದೇ ಸೆಕ್ರೆಟೇರಿಯೆಟ್‌ನಲ್ಲಿ ಇಂಥವರೆಷ್ಟೋ ಜನ ರಿದ್ದಾರೆ. ಅಸಿಸ್ಟೆಂಟ್ ಕಮೀಷನರುಗಳನ್ನು ಚುನಾ ವಣೆ ಮಾಡುವುದರಲ್ಲಿಯೂ ಹೀಗೆಯೇ ನಡೆಯುತ್ತಿದೆ.

ಡಿವಿಜನಲ್ ಕಮೀಷನರುಗಳ ಹುದ್ದೆಗಳನ್ನು ರದ್ದು ಮಾಡದ ಹೊರತು ದೇಶ ಉಳಿಯುವುದಿಲ್ಲ.

ರೈತ ಸರ್ಕಾರದಿಂದ ನೂರು ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೆ, ಅವನು 25 ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಇದನ್ನು ತಪ್ಪಿಸಬೇಕು.

ಸರ್ವೆ ಮತ್ತು ಸೆಟ್ಲ್‌ಮೆಂಟ್ ವಿಚಾರ. ಶ್ರೀ ಸುಬ್ರಹ್ಮಣ್ಯ ಅವರು ಆಗಲೇ ಹೇಳಿದ್ದಾರೆ. ಅವರೂ ನಾನೂ ಒಂದೇ ಗ್ರಾಮದ ಜಮೀನ್ದಾರರು. ಸರ್ಕಾರದವರು ಎಷ್ಟೋ ವರ್ಷಗಳಿಂದ ಏನನ್ನು ಮಾಡುವುದಕ್ಕೆ ಸಾಧ್ಯವಾಗದೇ ಕಷ್ಟ ಪಡುತ್ತಿದ್ದಾರೋ ಅದನ್ನು ನಾವು ಇಪ್ಪತ್ತು ವರ್ಷಗಳ ಹಿಂದೆಯೇ ಮಾಡಿ ದ್ದೇವೆ. ಸರ್ಕಾರದವರು ಇತರ ಕಡೆಗಳಲ್ಲಿ ಜಾಗ್ರತೆ ಸೆಟ್ಲ್‌ಮೆಂಟ್ ಮಾಡಬೇಕು.

ಮಂತ್ರಿಗಳು ಪ್ರವಾಸ ಹೋಗುವ ಕಾಲದಲ್ಲಿ ಸಾರ್ವಜನಿಕರಲ್ಲಿ ಕೆಲವರಿಗೆ interview ಕೊಡು ತ್ತಾರೆ. Interview ಒಂದು ರಹಸ್ಯ ವಿಚಾರವೆಂದು ತಿಳಿಯಬೇಕು. ಬರೀ ತಮ್ಮ ಒಂದು ಪಕ್ಷದವರಿಗೇ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡುತ್ತಾ ರೆಂದು ಜನರು ಆಕ್ಷೇಪಣೆ ಮಾಡುತ್ತಿದ್ದಾರೆ.

ಹೊಸದುರ್ಗ ರೋಡು ಸದ್ರಾಮೇಶ್ವರ ಸಹಕಾರ ಸಂಘ ಹಿಂದೆ ಚೆನ್ನಾಗಿ ಕೆಲಸಮಾಡುತ್ತಿದ್ದು ಸಾವಿ ರಾರು ರೂಪಾಯಿ ಲಾಭ ತೋರಿಸುತ್ತಿತ್ತು, ಈಗ ಬಹಳ ಸೊಸೈಟಿಗಳು ಹೀನಸ್ಥಿತಿಗೆ ಬಂದು ಹಾಳಾ ಗಿವೆ. ತುಮಕೂರು ಜಿಲ್ಲೆಯೊಂದರಲ್ಲೇ ಹತ್ತು ಹನ್ನೆ ರಡು ಸಂಘಗಳು ಲಿಕ್ವಿಡೇಟ್ ಆಗಿವೆ. ಹೀಗಾಗು ವುದಕ್ಕೆ ಅವಕಾಶವಾಗದಂತೆ ಏರ್ಪಾಡು ಮಾಡಬೇಕು.

ಬರಗಾಲದಲ್ಲಿ ರೈತರಿಗೆ ಬಾವಿಗಳನ್ನು ತೆಗೆದು ಕೊಳ್ಳುವುದಕ್ಕಾಗಿ ಸರ್ಕಾರದಿಂದ ಹಣಕೊಡುತ್ತಾರೆ. ಹಳ್ಳಿಯವರಿಗೆ ಹಣ ಕೊಡದಿದ್ದರೂ ಅವರು ಬಾವಿ ಗಳನ್ನು ಮಾಡಿಯೇ ಮಾಡುತ್ತಾರೆ. ಒಬ್ಬ ಅಮ ಲ್ದಾರರು ಆರು ಸಾವಿರ ರೂಪಾಯಿ ದುಡ್ಡು ಹೊಡೆದು ಹೆಂಡತಿಗೆ ಓಲೆ ಡಾಬು ಮಾಡಿಸಿದರು. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದೆ. ಅವರ ಮನೆಗೆ ಒಳ್ಳೆಯ ಎರಡು ಹಸುಗಳು ಬಂದವು. ಅಲ್ಲಿಗೆ ಮುಗಿ ಯಿತು ! ಕ್ಷಾಮನಿವಾರಣೆಗೆಂದು ಹಣ ಕೊಟ್ಟರೆ ಅದು ದುರುಪಯೋಗವಾಗಬಾರದು, ಸದ್ವಿನಿಯೋಗ ವಾಗುವಂತೆ ನೋಡಿಕೊಳ್ಳಬೇಕು. ಫ್ಯಾಮಿನ್ ರಿಲೀಫ್ ವರ್ಕ್ಸ್‌ಗೆ ಹಣ ಕೊಡುವಾಗ, ಅದರಲ್ಲಿ ಕೆರೆ ಕಟ್ಟೆಗಳನ್ನು ಕಟ್ಟುವಾಗ ಅನ್ಯಾಯವಾಗಿ ಹಣದ ದುರುಪಯೋಗ ವನ್ನು ತಪ್ಪಿಸಬೇಕು. ಗುಬ್ಬಿ ತಾಲ್ಲೂಕು ಮಣ್ಣಿಮಾಲೆ ಕಾವಲಿನಲ್ಲಿ ಎಷ್ಟೋ ಅನಾಹುತ ನಡೆಯುತ್ತದೆ. ಅದರ ಕಡೆ ಗಮನ ಕೊಡಬೇಕು. ಮುಜರಾಯಿ ಇಲಾಖೆಯ ಅನೇಕ ಮಠಗಳು ಹೀನಸ್ಥಿತಿಯಲ್ಲಿವೆ. ವರ್ಷಕ್ಕೆ ಮೂರು-ನಾಲ್ಕು ಸಾವಿರ ರೂಪಾಯಿ ಸರ್ಕಾರಕ್ಕೆ ಉತ್ಪತ್ತಿ ಬರುವ ಸಂಸ್ಥೆಗಳು ರೆವಿನ್ಯೂ ಅಧಿಕಾರಿಗಳ ತಾತ್ಸಾರದಿಂದ ಹೀಗಾಗಿವೆ. ದಯ ವಿಟ್ಟು ಇದನ್ನು ವಿಚಾರಮಾಡಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು, ನಾನು ಅಮೇಲೆ ಹೆಚ್ಚಿನ ವಿವರ ಗಳನ್ನು ಹೇಳುತ್ತೇನೆ.

ಶ್ರೀ ಪಿ. ಜಿ. ಸಿದ್ದಾಂತಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾಗಿರುವ ಈ ಮನವಿಗಳ ಸಂಬಂಧವಾಗಿ ನಾನು ಕೆಲವು ಸೂಚನೆ ಗಳನ್ನು ಮಾಡಬೇಕಾಗಿದೆ. ಈಗ ಗೇಣೀದಾರರ ಕಾಯಿದೆ ಆಗಿದೆಯಷ್ಟೆ. ಇದರಲ್ಲಿ ಟೆನೆನ್ಸಿ ಕಲಮಿನಲ್ಲಿ ತಾವೇ ಸ್ವತಃ ವ್ಯವಸಾಯ ಮಾಡದೇಯಿದ್ದರೂಕೂಡ ಕೆಲವರು ತಾವೇ ಸ್ವಂತ ಬೆಳೆಯುತ್ತೇವೆಂದು ತಮ್ಮ ಹೆಸರನ್ನೇ ಬರೆಯುತ್ತಾರೆ. ಆದಕಾರಣ ಅಮಲ್ದಾರರು ನಿಜಸ್ಥಿತಿಯನ್ನು ತಿಳಿದುಕೊಂಡು ಆ ಕಲಮಿನಲ್ಲಿ ಬರೆಯಬೇಕು.

ಇನ್ನುಮೇಲೆ Agricultural Income Tax ಕಾನೂನು ಜಾರಿಗೆ ಬರುತ್ತದೆ. ತಲಾಟಿಯವರು ತಮ್ಮ ಮನೆಯಲ್ಲೇ ಕುಳಿತುಕೊಂಡು ಜಮೀನು ಗಳಲ್ಲಿ ಇಷ್ಟು ಶೇಂಗಾಯಿ ಬೆಳೆಯುತ್ತಾರೆ, ಇಷ್ಟು ಹತ್ತಿ ಬೆಳೆಯುತ್ತಾರೆಂದು ಬರೆದು ಲೆಕ್ಕ ಕೊಡ ಬಹುದು. ಇದಕ್ಕೆ ಅವಕಾಶವಾಗದಂತೆ ಅವರು ಮನೆಯಲ್ಲೇ ಕುಳಿತು ಬರೆಯದೆ ನಿಜಸ್ಥಿತಿಯನ್ನು ತಿಳಿಸುವಂತೆ ಮಾಡಬೇಕು.

ಬಿಜಾಪುರ ಜಿಲ್ಲೆಯಲ್ಲಿ ರೆವಿನ್ಯೂ ಸೆಟ್ಲ್‌ಮೆಂಟ್ ಪ್ರಾರಂಭ ಮಾಡಿದ್ದಾರೆ. ಹೀಗೆ ಮಾಡಿ ಕಂದಾಯ ವನ್ನು ನೂರಕ್ಕೆ ನೂರರಷ್ಟು ಹೆಚ್ಚುಮಾಡುತ್ತಾರೆಂದು ಹೇಳುತ್ತಿದ್ದಾರೆ. ಅಷ್ಟೊಂದು ಕಂದಾಯವನ್ನು ಹೆಚ್ಚಿಸಿದರೆ ಜನರಿಗೆ ಬಹಳ ಕಷ್ಟವಾಗುತ್ತದೆ. ಶೇಕಡ 50ಕ್ಕಿಂತ ಹೆಚ್ಚು ಮಾಡಬಾರದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಬೊಂಬಾಯಿ ಕರ್ನಾಟಕದಲ್ಲಿ ಪರಗಣ ಕುಲಕರ್ಣಿ ವತನ ರದ್ದುಮಾಡುವ ಕಾಯಿದೆ ಯನ್ನು ಮಾಡುವಾಗ ಹಳ ಚಳವಳಿ ನಡೆಯಿತು. ಈ ಚಳವಳಿಯ ದುಷ್ಪರಿಣಾಮ ಇನಾಂದಾರರಮೇಲೆ ಬೀಳಲಿಲ್ಲ ; ಬಡ ರೈತರಮೇಲೆ ಬಿದ್ದಿದೆ. ನಮ್ಮ ಜಿಲ್ಲೆ ಯಲ್ಲಿ ಎಂಟು ಲಕ್ಷ ಎಕರೆಗಳಿಗಿಂತ ಹೆಚ್ಚಾಗಿದೆ. ಖಾಯಂಕುಳ ಇದ್ದವರಿಗೆ ಹೊಲದ ಕಿಮ್ಮತ್ತಿನಷ್ಟು ಹಣ ಕೊಡಬೇಕೆಂದು ಮಾಡಿದ್ದಾರೆ. ಈ ಖಾಯಂ ಕುಳಗಳಿಗೆ ಮಾಲೀಕತ್ವದ ಹಕ್ಕುಗಳೆಲ್ಲವೂ ಇದ್ದವು. ಇವರಿಗೆ ಮಾರಾಟಮಾಡುವ ಹಕ್ಕು ಕೂಡ ಇತ್ತು. ಮೊದಲು ಆರು ಪಟ್ಟಾಗಲಿ, ಇಪ್ಪತ್ತಾರು ಪಟ್ಟಾಗಲೀ ತುಂಬಿಕೊಂಡು ಅವರಿಗೆ ಕೊಡುತ್ತೇವೆಂದು ಹೇಳಿದರು ; ಆದರೆ ಇದನ್ನು ಈಚೆಗೆ ಬದ ಲಾವಣೆ ಮಾಡಿ ಚಳವಳಿಗಾರರಮೇಲಿನ ಕೋಪ ವನ್ನು ಇವರಮೇಲೆ ತೀರಿಸಿಕೊಳ್ಳುತ್ತಿದ್ದಾರೆ ಸರ್ಕಾರದವರು ತಮಗೆ ಬಹಳ ಹಣ ಬರುತ್ತದೆಂಬ ಕಾರಣದ ಮೇಲಾಗಲಿ ಅಥವಾ ಬೇರೆ ಕಾರಣಗಳಿಂ ದಾಗಲಿ ರೈತರಿಗೆ ತೊಂದರೆ ಮಾಡಬಾರದು. ಜಮೀನು ಕಿಮ್ಮತ್ತು ವಸೂಲು ಮಾಡಬೇಕೆಂದು ಬೊಂಬಾಯಿ ಸರ್ಕಾರ ಮಾಡಿದ್ದಾರೆಂದು ಮೈಸೂರು

(ಶ್ರೀ ಪಿ. ಜಿ. ಸಿದ್ಧಾಂತಿ)

ಸರ್ಕಾರದವರು ಮಾಡಿದರು. ಆದರೆ ಮತ್ತೊಮ್ಮೆ ಹೊಸ ಹುಕುಂ ಹೊರಡಿಸುವುದಕ್ಕಿಂತ ಮುಂಚೆ ಬರಿಯ ಮುಂಬಯಿ ಸರ್ಕಾರದವರು ಮಾಡಿದ್ದಾರೆಂದು ಅದೇರೀತಿ ಮಾಡಬಾರದು. ಜನರ ಕೇಳಿಕೆಯ ಪ್ರಕಾರ ಈಗ stay ಮಾಡಿದ್ದಾರೆ. ಖಾಯಂ ಕುಳಗಳಿಗೆ ಅನುಕೂಲವಾಗುವಂತೆ ಹುಕುಂ ಹೊರಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದೂ ಅಲ್ಲದೆ ಈ ಒಂದು ಕಾಯಿದೆ ಆಗಿ ಈಗಾಗಲೇ ಆರು ವರ್ಷಗಳ ಮೇಲಾಯಿತು. ಆದರೆ ಯಾರೊಬ್ಬರಿಗೂ ಇನ್ನೂ ಆ ಪರಿಹಾರವೂ ಬಂದಿಲ್ಲ; ಬಾಂಡೇವೂ ಕೊಟ್ಟಿಲ್ಲ. ಆ ಕಾರಣದಿಂದ ಈಗ ಪ್ರತಿಯೊಬ್ಬರೂ ಅರ್ಜಿ ಮಾಡಿಕೊಳ್ಳಲಿಕ್ಕೆ ಹತ್ತಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ಇವರಿಗೆ ಬೇಗ ಪರಿಹಾರ ಕೊಡಿಸಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗತಾನೆ ಮಾತನಾಡಿದ ಶ್ರೀ ಎಸ್. ವೈ. ಪಾಟೀಲ್‌ರವರು ವಿಜಾಪುರ ಜಿಲ್ಲಾ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿರುತ್ತಾರೆ. ಆದರೆ ಈಗ ನಾನು ಅವರು ತಿಳಿಸದಿರುವಂಥ ಹೊಸ ವಿಚಾರವನ್ನು ತಿಳಿಸುತ್ತೇನೆ. ಈ ಹಿಂದೆ ವಿಜಾಪುರ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳ ಸಂಬಂಧವಾಗಿ ''ಗಪ್‌ಚಿಪ್'' ಎಂಬ ಇಂಜನಿಯರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದ್ದರು. ಆ ಸಮಿತಿಯವರು ಕೊಯಿನಾದಿಂದ ನೀರನ್ನು ತೆಗೆದುಕೊಂಡು ಅದಕ್ಕೆ ದೊಡ್ಡ ದೊಡ್ಡ ಒಡ್ಡುಗಳನ್ನು ಹಾಕಿ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಲು ಅವಕಾಶವಿದೆ ಎಂದು ಹೇಳಿದ್ದಾರೆ. ಆ ನದಿಯ ನೀರಿಗೆ ಕಟ್ಟೆಹಾಕಿ ಎರಡುನೂರು ಫೂಟ್ ಎತ್ತರಕ್ಕೆ ನೀರು ಹತ್ತುವಂತೆ ಮಾಡಿದರೆ ಅನೇಕ ಪ್ರದೇಶಗಳಿಗೆ ನೀರಿನ ಸೌಲಭ್ಯ ದೊರೆಯುತ್ತದೆ. ಇದಕ್ಕೆ ವಿದ್ಯುಚ್ಛಕ್ತಿಯ ಸೌಕರ್ಯ ಬೇಕಾಗಿದೆ. ವಿದ್ಯುಚ್ಛಕ್ತಿಯ ಸಹಾಯದಿಂದ ಹಾಗೆ ನೀರಿನ ಲೆವಲ್ಲನ್ನು 200 ಫೂಟಿಗೆ ಎತ್ತಿದರೆ—ವಿಜಾಪುರ, ಬಾಗೇವಾಡಿ, ಇತ್ಯಾದಿ. ಪ್ರದೇಶಗಳಲ್ಲಿ ಸುಮಾರು ನಾಲ್ಕು ಲಕ್ಷ ಎಕರೆ ಜಮೀನು ನೀರು ಹೊಂದುವಂತೆ ಒಂದು ಏರ್ಪಾಡನ್ನು ಮಾಡಿದ್ದರು. ಆದರೆ ಈ ದಿವಸ ಆ ಕೊಯಿನಾ ನದಿಯಲ್ಲಿ ಮೊದಲಿನಂತೆ ನೀರು ಸರಬರಾಯಿ ಇರುವುದಿಲ್ಲ. ಆ ನದಿಯ ನೀರ ಈಗ ಹೆಚ್ಚಾಗಿ ಮಹಾರಾಷ್ಟ್ರ—ಮುಂಬೈಕಡೆಗೇ ಹೋಗುತ್ತಿದೆ ಅದ್ದರಿಂದ ಈಗ ಆ ನದಿ ನೀರಿನ ಉಪಯೋಗ ತಪ್ಪಿತು. ಇನ್ನು ನಮಗೆ ಈಗ ಅನುಕೂಲವಾಗಬೇಕಾಗಿದ್ದರೆ ಕೃಷ್ಣಾನದಿಗೆ ಒಂದೆರಡುಕಡೆ ಒಡ್ಡುಗಳನ್ನು ಹಾಕಬಹುದು. ಹಾಗೆ ಎರಡು ಕಡೆಗಳಲ್ಲಿ ಕೃಷ್ಣಾನದಿಗೆ ಒಡ್ಡನ್ನು ಹಾಕಿದರೆ ಬಹಳ ಅನುಕೂಲವಿದೆ. ಆ ಒಡ್ಡುಗಳಲ್ಲಿ ನೀರು ಬಹಳ ಆಳವಾಗಿ ನಿಂತು ಹನ್ನೆರಡು ತಿಂಗಳಲ್ಲೂ ನೀರಿನ ಸರಬರಾಯಿ ಇದ್ದೇ ಇರುತ್ತದೆ. ಆದರೆ ಈ ದಿವಸ ಅಲ್ಲಿ ನೀರಿನ ಮಟ್ಟವನ್ನು 200 ಫೂಟಕ್ಕೆ ಎತ್ತರಿಸಲು ನಮಗೆ ಶಕ್ತಿಯಿಲ್ಲ. ಇದಕ್ಕೆ ನಮಗೀಗ ಎಲೆಕ್ಟ್ರಿಸಿಟಿಯ ಅಗತ್ಯ ವಿಶೇಷವಾಗಿದೆ. ಎಲೆಕ್ಟ್ರಿಸಿಟಿ ಈಗ ನರಗುಂದದವರೆಗೂ ಬಂದಿದೆ. ಅದರ ಸೌಕರ್ಯವನ್ನು ಈ ಯೋಜನೆಗೆ ಒದಗಿಸಿ ಕೊಟ್ಟಲ್ಲಿ ಆ ಒಡ್ಡುಗಳಲ್ಲಿ ನಿಲ್ಲುವ ನೀರಿನ ಮಟ್ಟವನ್ನು 200 ಫೂಟಕ್ಕೆ ಎತ್ತರಿಸಬಹುದು. ಆಗ 4 ಲಕ್ಷ ಎಕರೆ ಜಮೀನಿಗೆ ನೀರು ಸರಬರಾಯಿ ಆಗುತ್ತದೆ.

ಆದ್ದರಿಂದ ಈ ಒಂದು ದೊಡ್ಡ ಯೋಜನೆಯನ್ನು ಕೃಷ್ಣಾನದಿಯ ನೀರಿನಿಂದ ಮಾಡಬೇಕಾಗಿದೆ. ಈಗ ಆ ಕೃಷ್ಣಾನದಿಯ ಕೆಳಭಾಗದಲ್ಲಿ ಮಲಪ್ರಭಾ, ಘಟಪ್ರಭಾ, ಇತ್ಯಾದಿ, ನೀರಾವರಿ ಯೋಜನೆಗಳು ತಯಾರಾಗುವುವಿವೆ. ಆದರೆ ಕೃಷ್ಣಾನದಿಯ ಉತ್ತರ ಭಾಗಕ್ಕೆ ಅನುಕೂಲ ಉಂಟುಮಾಡತಕ್ಕಂಥ ಯೋಜನೆ ಯಾವುದೂ ಇಲ್ಲ. ಈ ದಿವಸ ಸರ್ಕಾರದವರು ಕೃಷ್ಣಾನದಿಗೆ ನಾನು ಹೇಳುವ ಕಡೆ ಎರಡು ಬಾಂದುಗಳನ್ನು ಹಾಕಿದರೆ ಆ ಪ್ರದೇಶದಲ್ಲಿರತಕ್ಕ ಜಮೀನುಗಳಿಗೆ ಎಕರೆಗೆ ಎರಡುಸಾವಿರ ರೂಪಾಯಿ ಬೆಲೆ ಬರುವುದುಎಂಬುದಾಗಿ ಆ ಸಮಿತಿಯವರು ಹೇಳಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ''ಗಪ್‌ಚಿಪ್'' ಸಮಿತಿಯವರ ವರದಿಯನ್ನು ತರಿಸಿಕೊಂಡು ಅವರು ಏನು ತಿಳಿಸಿರುತ್ತಾರೆಂಬುದನ್ನು ಪರಿಶೀಲನೆಮಾಡಿ ಯಾವ ರೀತಿ ಕೆಲಸ ಮಾಡಿದರೆ ನಮಗೆ ಅನುಕೂಲವಾಗುತ್ತದೆಂಬುದನ್ನು ನೋಡಿಕೊಂಡು ಆ ರೀತಿ ಕೆಲಸ ಮಾಡಿ ವಿಜಾಪುರದ ಉತ್ತರಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ನಮ್ಮ ಆ ಪ್ರದೇಶದಲ್ಲಿ ಆಗಿಂದಾಗ್ಗೆ ದುಷ್ಕಾಲ ಬಂದೇಬರುತ್ತದೆ. ಮೊದಲಿನ ಕಾಲದಲ್ಲಿ ದೇಶದಲ್ಲಿ ಬರುತ್ತಿದ್ದಂಥ ದುಷ್ಕಾಲಗಳನ್ನು ತಡೆಗಟ್ಟಲು ಏನೇನು ಕೆಲಸಕಾರ್ಯಗಳನ್ನು ನಡೆಸಬೇಕೆಂಬ ಬಗ್ಗೆ ಒಂದು ಪಟ್ಟಿಯನ್ನೇ ತಯಾರಿಸುತ್ತಿದ್ದರು. ಈಗ ಆ ಪದ್ಧತಿಯನ್ನು ಸಂಪೂರ್ಣವಾಗಿ ಕೈಬಿಟ್ಟುಬಿಟ್ಟಿದ್ದಾರೆ. ಈಗಿನ ಪದ್ಧತಿಯೇ ಒಂದು ನಮೂನೆ ಆಗಿದೆ. ನಾವು ಅಧಿಕಾರಿಗಳಲ್ಲಿ ಹೋಗಿ ಇಂಥ ಒಂದು ಯೋಜನೆಯಿತ್ತು ಅದೇನಾಗಿದೆ ಎಂದು ಕೇಳಿದರೆ ಅವರು ಆ ರೀತಿ ಯಾವುದೂ ನಮ್ಮ ಪೋಸ್ಟ್‌ವಾರ್ ಪ್ಲಾನಿನಲ್ಲೂ ಇಲ್ಲ ಎರಡನೆ, ಪಾಂಚವಾರ್ಷಿಕ ಯೋಜನೆಯಲ್ಲೂ ಇಲ್ಲ ಎಂದು ಹೇಳಿಬಿಡುತ್ತಾರೆ. ಹೋಗಲಿ, ಈಗ ಹೊಸದಾಗಿಯಾದರೂ ತೆಗೆದುಕೊಳ್ಳಿ ಎಂದರೆ ನಮ್ಮಲ್ಲಿ ಹ್ಯಾಗೂ ರೊಕ್ಕವಿಲ್ಲ—ಆದ್ದರಿಂದ ಈ ಕಾರ್ಯ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಹೇಳಿಬಿಡುತ್ತಾರೆ. ಹೀಗೆ ಈ ದಿವಸ ನಮ್ಮಲ್ಲಿ ಕಾಳಜಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳೂ ಇಲ್ಲ. ಜನರು ಹೋಗಿ ಏನಾದರೂ ವಿಚಾರ ಕೇಳಿದರೆ ಕಲೆಕ್ಟರ್ ಸರ್ಕಾರದ ಮೇಲೆ ಹೇಳಿ ಅತ್ತಕಡೆ ಕೈತೋರಿಸಿಬಿಡುತ್ತಾರೆ. ಸರ್ಕಾರದಲ್ಲಿ ಹೋದರೆ ಅವರು ಕಲೆಕ್ಟರರಕಡೆಗೆ ಕೈತೋರಿಸಿಬಿಡುತ್ತಾರೆ. ಆದರೆ, ಈ ದಿವಸ ಕಲೆಕ್ಟರನಿಗೇನೂ ಹಿಂದಿದ್ದಹಾಗೆ ಅಧಿಕಾರವಿಲ್ಲ. ಜನರು ಸರ್ಕಾರದಿಂದ, ಕಲೆಕ್ಟರಕಡೆಗೂ ಕಲೆಕ್ಟರ್‌ಕಡೆಯಿಂದ ಸರ್ಕಾರಕ್ಕೂ ಓಡಾಡುವುದರಲ್ಲೇ ಅವರ ವ್ಯಾಳ್ಯ ವೆಲ್ಲಾ ಹೋಗುತ್ತಿದೆ. ನಾನು 25 ವರ್ಷಗಳಿಂದಲೂ ದುಷ್ಕಾಲ ಪರಿಹಾರಕಾರ್ಯದಲ್ಲಿ ಕೆಲಸಮಾಡುತ್ತಿದ್ದೇನೆ. ಹಿಂದಿನ ಕಾಲದಲ್ಲಿ ನಾವೇನಾದರೂ ಅಮಲ್ದಾರನಬಳಿ ಹೋಗಿ ಇಂಥ ಕೆಲಸವಾಗಬೇಕು, ಅದರಿಂದ ಪ್ರಜೆಗಳಿಗೆ ಅನುಕೂಲವಿದೆ ಎಂದು ಹೇಳಿದರೆ ಆಗ ನಮ್ಮಮಾತಿಗೆ ಬೆಲೆಯಿರುತ್ತಿತ್ತು; ಮಾನ್ಯತೆ ದೊರೆಯುತ್ತಿತ್ತು. ಈ ದಿವಸ ನಾವು ಹೇಳಿದರೂ ಆ ಕೆಲಸವಾಗುವುದೇ ಬಹಳ ತ್ರಾಸಾಗಿದೆ. ಈ ರೀತಿ ತ್ರಾಸಾಗುವುದನ್ನು ನಾನು ಎಂದೂ ಕಂಡಿದ್ದಿಲ್ಲ. ಈ ಹಿಂದೆ ಎಂ.ಎಲ್.ಎ.ಗಳು ಮತ್ತು ಕೆಲಸಗಾರರು ಅಧಿಕಾರಿಗಳಬಳಿ ಹೋಗಿ ''ಇದು ಬರಾಬರಿ; ಇದು ಸರಿಯಾಗಿಲ್ಲ; ಇದು ಚಲೋ ಅದೆ--ಇದು ಇಲ್ಲ'' ಎಂದು ಹೇಳಿದ್ದರೆ ಅದೇರೀತಿ ಕೆಲಸಗಳಾಗುತ್ತಿದ್ದವು. ಈಗ ಆ ರೀತಿ ಇಲ್ಲ. ಮುಂದಿಗೆ ಬಹಳ ತ್ರಾಸಾಗುತ್ತಿದೆ. ಆದರೆ ಮೂರು ವರ್ಷಕ್ಕೊಮ್ಮೆ ನಮ್ಮಕಡೆ ದುಷ್ಕಾಲ ಬರುತ್ತಿದೆ. ಅದನ್ನು ತಪ್ಪಿಸಲು ತಕ್ಷಣ ಸರ್ಕಾರ ಪ್ರಯತ್ನ ನಡೆಸಬೇಕೆಂದು ನಾನು ಮಂತ್ರಿಗಳಲ್ಲೂ, ಮಾನ್ಯಸಭೆಯಲ್ಲೂ, ವಿನಂತಿಮಾಡಿಕೊಳ್ಳುತ್ತೇನೆ.

*ಶ್ರೀ ಪುಟ್ಟೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ದಿವಸ ರೆವಿನ್ಯೂ ಇಲಾಖೆಯಲ್ಲಿ ರೈತಾಪಿ ಜನರಿಗೆ ಆಗುತ್ತಿರುವ ಕೆಲವು ತೊಂದರೆಗಳೇನಿರುತ್ತ ವೆಂಬುದನ್ನು ನಾನೀಗ ಸರ್ಕಾರದವರ ಮುಂದೆ ಹೇಳ ಬೇಕೆಂಬ ಅಭಿಪ್ರಾಯ ಉಳ್ಳವನಾಗಿದ್ದೇನೆ. ರೈತರು ತಮ್ಮ ಜಮೀನುಗಳನ್ನು ಕ್ರಯ, ಭೋಗ್ಯ, ಇತ್ಯಾದಿ, ಮಾಡಿಕೊಡತಕ್ಕ ಸಂದರ್ಭಗಳಲ್ಲಿಪತ್ರ ಸಬ್-ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ರಿಜಿಸ್ಟ್ರಾಗುವಕಾಲದಲ್ಲೇ—ಪೋಡ್ ಫೀ ಮತ್ತು ಮ್ಯೂಟೇಷನ್ ಫೀ ಇತ್ಯಾದಿಗಳನ್ನೆಲ್ಲ ಅಲ್ಲೇ ಕಟ್ಟಿಸಿಕೊಂಡು ಬಿಡುತ್ತಾರೆ. ಹೀಗೆಯೇ ವರ್ಷಾನುಗಟ್ಟಲೆಯಿಂದ ನಡೆದುಕೊಂಡು ಬರುತ್ತಿದೆ. ಆದರೆ ಇದುವರೆಗೂ ಆ ಜಮೀನುಗಳನ್ನು ಪೋಡ್‌ಮಾಡಿ-ಖಾತೆ ಬದಲಾವಣೆಗಳನ್ನು ಮಾಡಿರುವುದಿಲ್ಲ. ಇದರಿಂದ ರೈತಾಪಿ ಜನರು ಸಿವಿಲ್ ಮೊಕದ್ದಮೆಗಳನ್ನು ಹೂಡಿ ಕೋರ್ಟಿಗೆ ತಿರುಗುತ್ತಿರುವ ನಿದರ್ಶನಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಹೆಚ್ಚಾಗುತ್ತಿವೆ. ಸಂಬಂಧಪಟ್ಟ ಜನರು ಸ್ಥಳೀಯ ಅಧಿಕಾರಿಗಳ ಹತ್ತಿರ ಹೋಗಿ ಕೇಳಿದರೆ ಅವರು ಜಮೀನು ಅಳತೆಮಾಡುವ ಕೆಲಸ ಸರ್ವೆ ಇಲಾಖೆಯವರಿಗೆ ಸೇರಿದ್ದು ಎಂದು ಹೇಳಿ ಬಿಡುತ್ತಾರೆ. ಸರ್ವೆ ಇಲಾಖೆಯವರ ಹತ್ತಿರಹೋಗಿ ಕೇಳಿದರೆ ನಮಗೆ ಇನ್ನೂ ಅನೇಕ ಕೆಲಸಗಳಿರುತ್ತವೆಂದು ಅವರು ಉತ್ತರ ಹೇಳುತ್ತಿದ್ದಾರೆ. ಆದರೆ, ಈ ದಿವಸ ರೈತರು ನಾನಾ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವುದಕ್ಕೆ ಸರ್ವೆ ಇಲಾಖೆಯವರೇ ಕಾರಣರೆಂದು ನನ್ನ ಅಭಿಪ್ರಾಯ. ನಮ್ಮ ಹಳೇಯ ಮೈಸೂರಿಗೆ ಸಂಬಂಧಪಟ್ಟಂತೆ ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಈ ಮೂರು ಜಿಲ್ಲೆಗಳೂ ಮಲೆನಾಡಿಗೆ ಸೇರಿರತಕ್ಕವು. ಈ ಪ್ರದೇಶದಲ್ಲಿ ಒಟ್ಟು ಹತ್ತು ಲಕ್ಷ ಸ್ವಂತ ವ್ಯವಸಾಯ ಮಾಡಿಕೊಂಡಿರತಕ್ಕ ಜನಗಳಿದ್ದಾರೆ. ಇವರ ಪೈಕಿ ಒಂದೂವರೆ ಲಕ್ಷ ವಾರಕ್ಕೋ ಅಥವಾ ಗುತ್ತಿಗೆಗೋ ಜಮೀನು ಮಾಡಿಕೊಂಡು ತಮ್ಮ ಜೀವನ ಮಾಡಿಕೊಂಡಿರತಕ್ಕ ಜನರಿದ್ದಾರೆ. ಆದರೆ ಇತ್ತೀಚೆಗೆ ಹೋದ ಸಾಲಿನಲ್ಲಿ ಅನಿರೀಕ್ಷಿತವಾಗಿ ವಿಶೇಷವಾಗಿ ಮಳೆ ಬಿದ್ದು ಅನೇಕ ಕೆರೆಕಟ್ಟೆಗಳು ತುಂಬಿ ಒಡೆದುಹೋಗಿರುತ್ತವೆ. ಹೀಗಾಗಿ ರೈತರು ಬೆಳೆಯಿಟ್ಟಿದ್ದ ಖುಷ್ಕಿ ಜಮೀನುಗಳಿಗೆಲ್ಲ ನೀರು ನುಗ್ಗಿ ಫಸಲು ತುಂಬ ನಷ್ಟವಾಗಿ ಹೋಗಿದೆ. ಪೈರುಗಳೆಲ್ಲ ಕೊಳೆತುಹೋಗಿ ರೈತರು ಬಹಳ ನಿರಾಶರಾಗಿದ್ದಾರೆ. ಆದರೆ, ಅವರು ಜಮೀನ್ದಾರರಿಗೆ ಫಸಲು ಗುತ್ತಿಗೆ ಕೊಡಬೇಕಾದ ಸಂದರ್ಭವಿರುವುದರಿಂದ ಎಲ್ಲೆಲ್ಲಿ ರಾಗಿ ಬೆಳೆ ನಷ್ಟವಾಗಿ ಹೋಗಿದೆಯೋ ಅಂಥ ಕಡೆಗಳಲ್ಲೆಲ್ಲಾ ಬೇರೆ ಭೂಮಿಯಲ್ಲಿ ಬೆಳೆದ ಬತ್ತವನ್ನು ಕೊಡಬೇಕಾದಂಥ ಸಂದರ್ಭಗಳು ಅನೇಕ ಕಡೆ ಉಂಟಾಗಿದೆ. ಇದೇ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅನೇಕ ಸಂದರ್ಭಗಳಲ್ಲಿ ಅನಿವಾರ್ಯದಿಂದ ಹಂಗಾಮಿ ನೀರಾವರಿ ಬೆಳೆಗಳನ್ನಿಟ್ಟಾಗ ರೆವೆನ್ಯೂ ಇಲಾಖೆಯವರು ಆಕಸ್ಮಿಕವಾಗಿ ಎಷ್ಟೋ ಅನ್ಯಾಯಗಳು ಅನಾನುಕೂಲಗಳು ಆಗುತ್ತಿದ್ದರೂ ಅವುಗಳನ್ನು ಗಮನಕ್ಕೇ ತೆಗೆದುಕೊಳ್ಳದೆ ತಕರಾರ್ ತಃಖ್ತೆಯನ್ನಿಟ್ಟು ರೈತರಿಂದ ಡಬ್ಬಲ್ ವಾಟರ್‌ರೇಟ್ ಮತ್ತು ಜುಲ್ಮಾನೆಗಳೆಲ್ಲದನ್ನು ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಈ ಹಿಂದೆ ಯಾವ ಯಾವ ಪ್ರದೇಶದಲ್ಲಿ ರೈತರಿಗೆ ಅನಾನುಕೂಲಗಳುಂಟಾಗಿ ಇಟ್ಟಿದ್ದ ಬೆಳೆಗಳೆಲ್ಲ ನಾಶವಾಗಿ ಹೋಗಿರುತ್ತವೋ ಅಂಥ ಕಡೆಗಳಲ್ಲಿ ಸರ್ಕಾರದವರು ಪ್ರತಿಯೊಂದೂ ಅಂಶವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿ ರೈತರಿಗೆ ಎಲ್ಲೆಲ್ಲಿ ನೀರಾವರಿ ಫಸಲನ್ನು ಬೆಳೆಯಲು ಅವಕಾಶವಿದೆಯೋ ಅಂಥ ಕಡೆಗಳಲ್ಲೆಲ್ಲಾ ರೈತರಿಗೆ ತರೀ ಫಸಲನ್ನು ಮಾಡಲು ಉಚಿತವಾದ ಅವಕಾಶ ಕೊಡಬೇಕೆಂದೂ, ಈಗಿನ ಆಹಾರ ಪರಿಸ್ಥಿತಿಯಲ್ಲಿ ಉಂಟಾಗಿರತಕ್ಕ ಬಿಕ್ಕಟ್ಟನ್ನು ನಿವಾರಣೆ ಮಾಡಲು ಹಂಗಾಮಿ ನೀರಾವರಿಯನ್ನು ಅನಧಿಕೃತವಾಗಿ ಪಡದವರಿಗೂ ಸಹ ಡಬ್ಬಲ್ ವಾಟರ್‌ರೇಟ್ ಮತ್ತು ಜುಲ್ಮಾನೆ ಹಾಕತಕ್ಕದ್ದನ್ನು ಸಂಪೂರ್ಣವಾಗಿ ನಿಲ್ಲಿಸಿ ಅವರಿಗೆ ಸರಿಕಂದಾಯವೆಷ್ಟು ಆಗುತ್ತದೋ ಅಷ್ಟನ್ನುಮಾತ್ರ ಅವರಿಂದ ವಸೂಲ್ಮಾಡಿಕೊಳ್ಳುವಂತೆ ಒಂದು ಸರ್ಕಾರಿ ಆರ್ಡರನ್ನು ಹೊರಡಿಸಬೇಕೆಂದೂ ಕೇಳಿಕೊಳ್ಳುತ್ತೇನೆ. ಈ ದಿವಸ ಈ ರೀತಿಯಾಗಿ ಮದರಾಸ್ ಮತ್ತು ಆಂಧ್ರ ಪ್ರದೇಶದಲ್ಲಿ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರೂ ಸಹ ಅದೇ ರೀತಿಯ ಏರ್ಪಾಡುಗಳನ್ನು ಇಲ್ಲಿಯೂ ಜಾರಿಗೆ ತರಬೇಕೆಂದು ಸೂಚನೆ ಕೊಡುತ್ತೇನೆ. ಇನ್ನು ರೈತರಿಗೆ ಪ್ರತಿದಿನವೂ ಆಗುತ್ತಿರುವ ನಾನಾ ತೊಂದರೆಗಳನ್ನು ನಿವಾರಣೆಮಾಡಲು ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡತಕ್ಕ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೇನೇ ಸರ್ವೆ ಟ್ರೈನಿಂಗ್ ಕೊಡಿಸಿ—ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಆಮೇಲೆ ಇನಾಂ ರದ್ದಿಯಾತಿಯ ವಿಚಾರದಲ್ಲಿ ಸರ್ಕಾರದವರು ರೈತರಿಂದಲೇ ದುಡ್ಡನ್ನು ವಸೂಲು ಮಾಡಿ ಜಮಿನ್ದಾರರಿಗೆ ಕೊಡಬೇಕೆಂದು ಮಾಡಿದ್ದಾರೆ. ಇದು ರೈತರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ತುಂಬ ತೊಂದರೆಯಾದಂತಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಈ ಮೊಬಲಗನ್ನು ತಾವೇ ಜಮಿನ್ದಾರರಿಗೆ ಕೊಟ್ಟು ರೈತರ ತೊಂದರೆಯನ್ನು ಪರಿಹರಿಸಬೇಕೆಂದು ನನ್ನ ಪ್ರಾರ್ಥನೆ.

ರೂರಲ್ ಕ್ರೆಡಿಟ್ ಸೊಸೈಟಿಗಳ ವಿಚಾರವಾಗಿ ಒಂದು ಮಾತು. ಸಾಮಾನ್ಯವಾಗಿ ಈ ಸೊಸೈಟಿಗಳು ಮೇ ತಿಂಗಳು ಅಥವಾ ಜೂನ್ ತಿಂಗಳಿನ ಹೊತ್ತಿಗೆ ರೈತರಿಗೆ ಗೊಬ್ಬರ ತೆಗೆದುಕೊಳ್ಳುವುದಕ್ಕಾಗಲಿ, ಬೀಜ ಕೊಂಡುಕೊಳ್ಳುವುದಕ್ಕಾಗಲಿ ಅಲ್ಪಕಾಲಾವಧಿ ಸಾಲವನ್ನು ಕೊಡುತ್ತಿವೆ. ಇಷ್ಟರೊಳಗೆ ಜಮೀನಿನ ವ್ಯವಸಾಯವೆಲ್ಲಾ ಮುಗಿದುಹೋಗಿರುತ್ತದೆ. ಹೀಗಾಗಿ ನೀವು ಕೊಡತಕ್ಕ ಹಣ ನೀವು ಕೊಟ್ಟ ಉದ್ದೇಶಕ್ಕೆ ಉಪಯೋಗವಾಗದೆ ಯಾವುದೋ ಹಬ್ಬ-ಹುಣ್ಣಿಮೆಗಾಗಿ ಖರ್ಚುಮಾಡುವ ಸಂದರ್ಭ ಬರುತ್ತದೆ. ಆದ್ದರಿಂದ ಮಾರ್ಚಿ ತಿಂಗಳಿನಲ್ಲಿ ಕೊಡುವ ಏರ್ಪಾಡು ಮಾಡಿದರೆ ರೈತರಿಗೆ ನಿಜವಾಗಿಯೂ ಅನುಕೂಲ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಅವನು ಗೊಬ್ಬರ, ಬೀಜ ಮುಂತಾದುವುಗಳನ್ನು ಸಕಾಲದಲ್ಲಿ ಕೊಂಡು ಸರಿಯಾಗಿ ವ್ಯವಸಾಯ ಮಾಡುವುದಕ್ಕೆ ಅವಕಾಶವಾಗುತ್ತದೆಯಾದ್ದರಿಂದ ಇದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Sri BALWANT RAO (Bhalki).—Mr. Speaker, I rise to oppose the demands and support the cut motions. First of all, before speaking something about the Revenue Department, I will say that Bidar District has been neglected by all the Departments even the Excise Department, the Health Department, Legal Department, Education Department, Public Works

(SRI BALWANT RAO)

Department, and Local Self-Government Department. Therefore, I cannot blame the Revenue Department alone which has neglected us. Still, I think it is my duty to refer to some grievances regarding Bidar District.

Sri R. CHENNIGARAMIAH.—Since how long it is neglected ?

Sri BALWANT RAO.—Since long. In our district, the old system of patel patwari is continuing. It is being continued from the Moghul period and though circumstances have changed, still this rotten old system is continuing. Due to this old system, the whole administration collapses because the patel patwari system is not in keeping with the changed times. These patel and patwaries have forgotten their duties and they have become a nuisance to the public and therefore I think it is the duty of the Government to bring changes in the old system of patel patwari. These patels and patwaries are very meagerly paid. They are paid only Rs. 2 per month. And do we expect them to discharge their duties faithfully and sincerely by taking Rs. two ? It is impossible. Some friends have said that Constables getting Rs. 50 per month cannot be expected to discharge their duties sincerely. So how can we expect these patels and patwaries to discharge their duties sincerely for Rs. 2 or Rs. 4 ? I suggest that this old system should be abolished and if they are not paid adequately they will not discharge their duties as we expect of them. In this connection I may say that in Bombay State the Thalati system which has been introduced has proved successful and I think in Mysore State also if we introduce that system it will become successful and it will be in keeping with the changed circumstances in the villages. Besides this, the patels and patwaries, especially patwaries, maintained some records which were completely false and due to false records so much of litigation cropped up, many disputes as regards lands arose and also murders and other offences took place. Our higher officers had not given full attention to this matter. Therefore, our officers who are Tahsildars and Collectors should give full attention to these things.

Next, I want to say something regarding Paigah. It is a new word for this House. It means Jagirs in Hyderabad State. There are so many jagirs in Hyderabad State. The Jagirdars of these Jagirs were called Nawabs. These Nawabs enjoyed civil, criminal and judicial powers as well as revenue and administrative powers. They had so many lands, nearly 40 per cent of agricultural lands, in their possession. They assessed the land revenue at whatever rate they liked during their days. In these paigah areas, we find the rate nearly four times higher than the rate prevailing in the adjacent khalsa area or areas which were not included in paiga areas. The same higher rate is continuing even now. Therefore the cultivators of these areas agitated for reduction in revenue assessment but no attention has been paid to this grievance and still higher rates are continuing. Some of the villagers have stopped giving revenue until their grievances are redresed. Therefore unless these paigah areas are dealt with properly and their revenue assessment is decreased the grievances will remain.

The next point which I want to speak on is with regard to Record of Rights. In our area, the record is kept in Urdu language at present also. You know Bidar is a bilingual area and there Marathi and Kannada languages are spoken and therefore the Record of Rights must be kept in Marathi and Kannada. But recently, orders have been issued to village officers that Records must be written in Kannada only. There are some areas where only Marathi is spoken. No other language is spoken. Then how can we expect the village officers who do not know Kannada and who do not understand the language to write in Kannada ? I request the Government to reconsider their order and issue orders for keeping records in Marathi and Kannada.

I want to say one thing regarding Pahni Pattarak, which is a most important documentary evidence. It is written by patwaries who are paid only

Rs. 2 and Rs. 4 per month. It is written very defectively and due to the defective method of writing many disputes regarding lands are taking place. They enter the names of those persons who have no possession over the lands with the result that nearly 99 per cent of the disputes as regards lands arise due to the defective entries. I therefore suggest that the system of Pahni Pattarak should be changed and some other suitable method introduced.

11-30 A.M.

Then, I come to famine. As I have already said, our Bidar District is the most neglected one. It is not only under-developed but is also undeveloped and a most backward area. In spite of this, our Government is not giving sufficient funds for the development of this area. A few months ago, they have given Rs. 5 lakhs to the Gulbarga Division, but out of this amount they have not allotted anything to the Bidar District. This is an injustice.

Sri M. P. PATIL.—Sir, that statement is not correct because Rs. 1 lakh has been allotted to Bidar District recently.

Sri BALWANT RAO.—In the beginning it was not given. It was only after some agitation was made and some memorandum was submitted that it was given.

Coming to famine works, they are started in the villages where there is no famine. They are started in places which are far away from the famine-stricken area. I, therefore, request that they should be started in those areas where famine breaks out.

Coming to Co-operation, in our area, people are always in need of loans, but they cannot get loans from the sowkars on account of the Money-lenders, Act. I therefore, suggest that at least one Land Mortgage Bank must be established in every taluka. We have been demanding the establishment of Land Mortgage Banks since a long time but no attention has been paid to this demand. I therefore, request that at least one Land Mortgage Bank must be established in every taluka. With these words, I finish my speech.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರೇ, ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಸಹಕಾರ ಇಲಾಖೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ದೇಶದಲ್ಲಿ ಆರ್ಥಿಕ ಮತ್ತು ಇತರ ವಿಷಯಗಳನ್ನು ಮುಂದಕ್ಕೆ ತರಬೇಕಾದರೆ ಸಹಕಾರ ಮನೋಭಾವ ಇಲ್ಲದಿದ್ದರೆ ಖಂಡಿತ ದೇಶ ಮುಂದಕ್ಕೆ ಬರುವುದಿಲ್ಲ. ಉದಾಹರಣೆ ಹೇಳುವುದಾದರೆ ಇಂಗ್ಲೆಂಡಿನ ಅಂಕಿಅಂಶಗಳನ್ನು ಇಲ್ಲಿ ತಿಳಿದುಕೊಳ್ಳಬಹುದು. ಆದರೆ ನಮ್ಮ ಬಜೆಟ್ಟನ್ನು ನೋಡೋಣ. ಖರ್ಚಿನ ಭಾಗದಲ್ಲಿ ಇದಕ್ಕೆ ವಿಶಾಲ ಮೈಸೂರಾದಮೇಲೆ 64,60,700 ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಹಳೆಯ ಮೈಸೂರಿನಲ್ಲಿ ಒದಗಿಸಿದ್ದು ಎಷ್ಟಿತ್ತು ಎಂದರೆ 24,12,200 ರೂಪಾಯಿಗಳ ಇತ್ತು. ವಿಶಾಲ ಮೈಸೂರಾದಮೇಲೆ ಇದರ ಡಬ್ಬಲ್ ಆಗಬೇಕಾಗಿದ್ದರೂ ಕೂಡ ಎರಡನೆ ಪಂಚವಾರ್ಷಿಕ ಯೋಜನೆಯೂ ಸೇರಿ ಹೆಚ್ಚೆಂದರೆ 16 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದೀರಿ. ರೈತರಿಗೆ ಸಹಕಾರ ನೀಡುವುದರಲ್ಲಿ ಈ ಸಹಕಾರ ಮನೋಭಾವ ಎಷ್ಟು ಹಿಂದೆ ಹೋಗಿದೆ ಎಂದು ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 5,12,500 ರೂಪಾಯಿ ಒದಗಿಸಿದ್ದೀರಿ. ಹಳ್ಳಿಗಳಿಗೆ ಒಂದೊಂದು ರೂಪಾಯಿನಂತೆ ಹಂಚಬಹುದೋ ಏನೋ. ಈ 5,12,500 ರೂಪಾಯಿಗಳಿಂದ ಎಷ್ಟು ಜನಗಳಿಗೆ ಸಹಕಾರ ನೀಡಬಹುದು ಎಂಬುದನ್ನು ನೀವೇ ಯೋಚನೆಮಾಡಿ.

ಮಾರ್ಕೆಟಿಂಗ್ ಸೆಕ್ಷನ್ ಮತ್ತು ಎಸ್ಟಾಬ್ಲಿಷ್‌ಮೆಂಟ್‌ಗೆ 50 ಸಾವಿರ ರೂಪಾಯಿ ಒದಗಿಸಿದ್ದೀರಿ. ಮಾರ್ಕೆಟಿಂಗ್ ವಿಷಯದಲ್ಲಿ ರೈತರಿಗೆ ಯಾವತರಹ ಸಹಾಯವೂ ಒದಗುತ್ತಾ ಇಲ್ಲ. ನ್ಯಾಯವಾದ ಮಾರ್ಕೆಟ್ ದೊರೆಯುತ್ತಾ ಇಲ್ಲ ಎಂದು ಈ ಸಭೆಯಲ್ಲಿ ಹೇಳಬೇಕಾಗಿದೆ. ನಿಜವಾಗಿಯೂ ರೈತ ಮುಂದೆ ಬರಬೇಕಾದರೆ, ದೇಶ ಮುಂದೆ ಬರಬೇಕಾದರೆ ರೈತ ಬೆಳೆಯತಕ್ಕ ಪದಾರ್ಥಗಳಿಗೆ ಸರಿಯಾದ ಮಾರ್ಕೆಟ್ ಸಿಕ್ಕಲೇಬೇಕು. ನಾನು ಹಿಂದಿನ ಅಸೆಂಬ್ಲಿಯಲ್ಲಿ ಇದ್ದಾಗಲೂ ಕೂಡ ರೈತನ ಆರ್ಥಿಕ ಮಟ್ಟ ಇಳಿಯುತ್ತಾ ಇದೆ, ರೈತನು ಬೆಳೆಯತಕ್ಕ ದವಸಗಳಿಗೆ ನಿಗದಿಯಾದ ಮಾರ್ಕೆಟ್ಟು ದೊರೆಯುವ ಹಾಗೆ ಮಾಡಲು ಸರ್ಕಾರ ಮುಂದೆ ಬರಬೇಕು, ಹಾಗಿಲ್ಲದೇ ಇದ್ದರೆ ಅವನ ಸಾಲಸೋಲಗಳು ಜಾಸ್ತಿಯಾಗಿ ಅವನ ಆರ್ಥಿಕಮಟ್ಟ ಕುಗ್ಗಿಹೋಗುತ್ತದೆ ಎಂದು ಹೇಳುತ್ತಾ ಇದ್ದೆ. ಈ ವಿಷಯದಲ್ಲಿ ಸರ್ಕಾರದ ಮುಂದೆ ನಾನು ಒಂದು ಸಲಹೆಯನ್ನು ಇಡುತ್ತೇನೆ. ರೈತನ ಪರಿಸ್ಥಿತಿ ಬಹಳ ಕೀಳು ಮಟ್ಟಕ್ಕೆ ಬರುತ್ತಾ ಇದೆ. ಮುಖ್ಯ ಮಂತ್ರಿಗಳೂ ಸಹ ಅದನ್ನು ಹೇಳಿದರು. ನಿಜವಾಗಿಯೂ ರೈತ ಮುಂದೆ ಬರಬೇಕಾದರೆ ಸಹಕಾರ ಮನೋಭಾವದಿಂದ ಬರಬೇಕಾಗಿದೆ. ರಾಗಿ, ಬತ್ತ, ಹೊಗೆಸೊಪ್ಪು, ಜೋಳ, ಗೋಧಿ ಇಷ್ಟು ದವಸಗಳ ಮೇಲೆ ನಿಜವಾಗಿಯೂ ಸರ್ಕಾರದವರು ಸರಿಯಾದ ದರ ನಿಗದಿಮಾಡಿ, ಮಾರ್ಕೆಟ್ ದೊರೆಯುವ ಹಾಗೆ ಮಾಡಿದರೆ ಅವನ ಅಂತಸ್ತು ಮುಂದಕ್ಕೆ ಬರುತ್ತದೆ. ಇಲ್ಲದೆ ಹೋದರೆ ಅವನು ಬಹಳ ಹೀನಸ್ಥಿತಿಗೆ ಬರುತ್ತಾನೆ. ಈ ಸಂದರ್ಭದಲ್ಲಿ ಸರ್ಕಾರದವರನ್ನೂ ಎಚ್ಚರಿಸಬೇಕಾಗಿದೆ. ಇದೇ ಭಾವನೆಯನ್ನಿಟ್ಟುಕೊಂಡು ರೈತರ ವಿಷಯದಲ್ಲಿ ಸಹಕಾರ ಕೊಡದೇ ಹಿಂದೆ ಹೋಗುವದಾದರೆ ನಿಜವಾಗಿಯೂ ಮುಂದಿನ ವರ್ಷದೊಳಗೆ ರೈತರು

(ಶ್ರೀ ಎಚ್. ಜಿ. ನರಸಿಂಹೇಗೌಡ)

ಒಗ್ಗಟ್ಟಾಗಿ ಸರ್ಕಾರಕ್ಕೆ ಕೊಡತಕ್ಕ ಎಲ್ಲಾ ತರಹ ತೆರಿಗೆಗಳನ್ನೂ ನಿಲ್ಲಿಸಿ ಸ್ಟ್ರೈಕ್ ಮಾಡತಕ್ಕ ಒಂದು ಸಂದರ್ಭ ಉಂಟಾಗುತ್ತದೆ ಎಂದು ಹೇಳುತ್ತೇನೆ.

ಎರಡನೆಯದಾಗಿ Grant-in-aid under the scheme for Co-operative Societies ನಲ್ಲಿ 50,000 ರೂಪಾಯಿಗಳನ್ನು ಒದಗಿಸಿದ್ದೀರಿ. ವಿಶಾಲ ಮೈಸೂರಿಗೆ ಅದರಲ್ಲೂ ಹಿಂದುಳಿದಿರತಕ್ಕ ಹೊಸ ಮೈಸೂರಿಗೆ ಸಹಕಾರ ನೀಡಬೇಕೆಂಬ ಕಾಲದಲ್ಲಿ ಈ 50 ಸಾವಿರ ರೂಪಾಯಿಗಳು ಹುಣಸೇಹಣ್ಣನ್ನು ಸಮುದ್ರದಲ್ಲಿ ಕಿವುಚಿದಹಾಗೆ. ಎಷ್ಟುಮಟ್ಟಿಗೆ ಸಹಕಾರ ನೀಡುತ್ತೀರೋ ಅರ್ಥವಾಗುತ್ತಿಲ್ಲ. ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಬಡ್ಜೆಟ್ಟಿನ 258ನೆಯ ಪುಟದಲ್ಲಿ ಕೊಟ್ಟಿರುವ "42, Co-operation section—Grants to the cotton seeds" ಎಂಬುದಕ್ಕೆ 3,000 ರೂಪಾಯಿ ಒದಗಿಸಿದ್ದೀರಿ. ಬಡ ರೈತ ಹತ್ತಿಹಾಕಿ ಅವನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದರೆ ತಾವು ಕೊಡುವ ದುಡ್ಡನ್ನು ತೆಗೆದುಕೊಂಡು ಬಿತ್ತನೆ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ಈ 3,000 ರೂಪಾಯಿಗಳಿಂದ ಏನಾಗುತ್ತದೆ, 3,000 ರೂಪಾಯಿಗೆ ಬದಲಾಗಿ ಮೂರು ಲಕ್ಷ ರೂಪಾಯಿಗಳನ್ನು ಈ ಡಿಮ್ಯಾಂಡ್‌ನಲ್ಲಿ ಒದಗಿಸಿ ಹತ್ತಿ ಬೆಳೆಯತಕ್ಕ ಬಡರೈತರಿಗೆ ಜಾಗ್ರತೆ ಬಿತ್ತನೆಯನ್ನು ಒದಗಿಸುತ್ತೀರಿ ಎಂದು ನಂಬಿದ್ದೇನೆ.

"Grant-in-aid for urban socities" ಎಂದು ಇದೆ. ಇದರಲ್ಲಿ ಐದು ಲಕ್ಷ 48 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಮಲ್ಟಿಪರ್ಪಸ್ ಕೋಆಪರೇಟೀವ್ ಸೊಸೈಟಿ ಕಟ್ಟಡಗಳಿಗೆ ಒದಗಿಸಿರುವುದರಲ್ಲಿ ಕೆಲವು ದೊಡ್ಡ ಸೊಸೈಟಿ ಕಟ್ಟಡಗಳಿಗೆ ಮಾತ್ರ ಕೊಡಬೇಕೆಂದು ಹೇಳಿದ್ದೀರಿ. ಬಾಕಿ ಸೊಸೈಟಿಗಳವರು ಏನು ಪಾಪ ಮಾಡಿದ್ದಾರೆ ? ಇದರಿಂದ ಸರ್ಕಾರದಲ್ಲಿರತಕ್ಕ ಘನೋಭಾವದಲ್ಲಿ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ನಮ್ಮ ರೈತರು ತಿಳಿದುಕೊಳ್ಳುತ್ತಾರೆ.

ಇನ್ನು ಮಾರ್ಕೆಟಿಂಗ್ ಸೆಕ್ಷನ್‌ನಲ್ಲಿ ಒಂದು ವಿಷಯ ಹೇಳುತ್ತೇನೆ. ನಿಜವಾಗಿಯೂ ರೈತರಿಗೆ ಉನ್ನತವಾದ ಮಾರ್ಕೆಟ್ ದೊರೆಯಬೇಕಾದರೆ ಮೊದಲು ಚೀಫ್ ಮಾರ್ಕೆಟಿಂಗ್ ಸೆಕ್ಷನ್ ಬೇರೆ ಮಾಡಿ ಕೋ-ಆಪರೇಟಿವ್ ಸೆಕ್ಷನ್ ಬೇರೆ ಮಾಡಿದರೆ ಅಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸಾಧ್ಯ. ಇದನ್ನು ವಿಂಗಡಿಸಿ ಒಳ್ಳೆಯ ಅನುಭವವಿರುವ ಒಬ್ಬರನ್ನು ಚೀಫ್ ಮಾರ್ಕೆಟಿಂಗ್ ಡೈರೆಕ್ಟರನ್ನಾಗಿ ನೇಮಿಸಿ ರೈತರಿಗೆ ಸರಿಯಾದ ಮಾರ್ಕೆಟ್ ದೊರೆಯುವ ಹಾಗೆ ಏರ್ಪಾಡು ಮಾಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಫ್ಯಾಮಿನ್ ಬಾಬಗಾಗಿ 341 ನೆಯ ಪುಟದಲ್ಲಿ ಒದಗಿಸಿರುವ ಹಣವನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅದರಲ್ಲಿ ಬೆಂಗಳೂರು ಡಿವಿಜನ್ನಿಗೆ 2,75,000 ರೂಪಾಯಿ, ಮೈಸೂರು ಡಿವಿಜನ್ನಿಗೆ 2,75,000 ರೂಪಾಯಿ, ಬೆಳಗಾಂ ಡಿವಿಜನ್ನಿಗೆ 7,90,000 ರೂಪಾಯಿ ಮತ್ತು ಗುಲ್ಬರ್ಗ ಡಿವಿಜನ್ನಿಗೆ 4,40,000 ರೂಪಾಯಿ Fanine Relief Worksಗಾಗಿ ಎಂದು ತೋರಿಸಿದ್ದಾರೆ. ಗುಲ್ಬರ್ಗ ಡಿವಿಜನ್ನಿಗೆ ಒದಗಿಸಿರುವ ಹಣ ಬಹಳ ಕಡಮೆ ಇದೆ. ಆ ಪ್ರದೇಶ ಬಹಳ ಹಿಂದುಳಿದಿದೆ. ಅಲ್ಲಿಗೂ ಕೂಡ 7,90,000 ರೂಪಾಯಿಗಳನ್ನು ಏಕೆ ಕೊಟ್ಟಿಲ್ಲವೆಂದು ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಆ ಭಾಗದ ವಿಷಯಗಳು ಗೊತ್ತಿದ್ದರೆ ಮಾತ್ರ ಹೇಳಬಹುದು.

ಶ್ರೀ ಎಚ್. ಜಿ. ನರಸಿಂಹೇ ಗೌಡ.—ನೀವು ಕೊಡುತ್ತಿರತಕ್ಕದ್ದು ಸಂತೋಷ. ಅವರೂ ಸಹ ನಮ್ಮ ಹಾಗೆಯೇ ಮುಂದೆ ಬರಬೇಕು. ಬೆಂಗಳೂರು ಮತ್ತು ಮೈಸೂರು ಡಿವಿಜನ್‌ಗಳಿಗೆ ಒದಗಿಸಲಾಗಿರುವ 2,75 000 ರೂಪಾಯಿಗಳಲ್ಲಿ, ಅದಕ್ಕೆ ಸೇರಿರುವ 40–42 ತಾಲ್ಲೂಕುಗಳಲ್ಲಿ ಎಷ್ಟು ಮಾತ್ರ famine relief ಕೆಲಸವಾಗುತ್ತದೆಯೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಕೆಲವು ತಾಲ್ಲೂಕುಗಳು ಬಹಳ ಹಿಂದುಳಿದಿವೆ. ಅಂಥ ಪ್ರದೇಶಗಳಿಗೆ ಈ ಹಣ ಸಾಕಾಗುತ್ತದೆಯೇ, ಇದರಿಂದ ಏನೇನು relief ಕೆಲಸಗಳನ್ನು ಮಾಡುವುದಕ್ಕಾಗುತ್ತದೆ ಎಂದು ಕೇಳುತ್ತೇನೆ. Irrigation works ಎಂದು ಹೇಳುತ್ತಾರೆ. ಒಂದೊಂದು ಡಿವಿಜನ್ನಿನಲ್ಲಿ ಏಳೆಂಟು ಸಾವಿರ ಹಳ್ಳಿಗಳಿರುವಾಗ 2,75,000 ರೂಪಾಯಿಗಳು ಎಲ್ಲಿ ಸಾಕಾಗುತ್ತದೆ? ಇದು ಏನೇನೂ ಸಾಲದು. ಈ ಕಾರ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನಾದರೂ ಮೀಸಲಿಡಬೇಕು.

ಕೊನೆಯದಾಗಿ ರೈತರ ಪುರೋಭಿವೃದ್ಧಿಗೋಸ್ಕರ ಮುಂದಿನಸಾಲಿನಲ್ಲಿ ಸುಮಾರು ಹತ್ತುಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕು. ರೈತರ ಏಳಿಗೆಗೋಸ್ಕರ ಏನೇನು ಕಾರ್ಯಗಳನ್ನು ಮಾಡಬೇಕೆಂಬುದರ ಅಂಕಿಅಂಶಗಳನ್ನು ತಿಳಿದುಕೊಂಡು ಮುಂದಿನ ವರ್ಷವಾದರೂ ರೈತರ ಪುರೋಭಿವೃದ್ಧಿಯನ್ನು ಸಾಧಿಸತಕ್ಕ ಒಂದು ಯೋಜನೆಯನ್ನು ಹಾಕುತ್ತೀರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, ಮೊದಲನೆಯದಾಗಿ ಈಗ ನಮ್ಮೆದುರಿನಲ್ಲಿಟ್ಟಿರತಕ್ಕ ಐದು ಬೇಡಿಕೆಗಳನ್ನೂ ಅಂಗೀಕಾರ ಮಾಡುತ್ತಾ, ಸಹಕಾರದ ವಿಚಾರದಲ್ಲಿ ಸ್ವಲ್ಪ ಮಾತನಾಡಬೇಕೆಂದು ನಿಂತಿದ್ದೇನೆ. ಸಹಕಾರ ಶಾಖೆಗೆ ಕೊಟ್ಟಿರತಕ್ಕ 64,59,200 ರೂಪಾಯಿಗಳ ಹಣ ಬಹುಮಟ್ಟಿಗೆ ಸಾಲದೆಂದರೆ ತಪ್ಪಾಗಲಾರದು. ಈಗ ವಿಶಾಲ ಮೈಸೂರಿನಲ್ಲಿ ಎಲ್ಲ ಕಡೆಯೂ ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ತೆರೆಯಬೇಕು, ಮತ್ತು ರೈತನಿಗೆ ಸಾಗಿಸತಕ್ಕ ಮತ್ತು ಕೊಳ್ಳತಕ್ಕ ಶಕ್ತಿ ಎರಡೂ ಬರಬೇಕು, ಎನ್ನುವ ದೃಷ್ಟಿಯಿಂದ ಹೇಳುವ ಸಂದರ್ಭದಲ್ಲಿ ಈ ಹಣ ಸಾಲದೆಂದು ಹೇಳುತ್ತಿದ್ದೇನೆ.

ಈಗ ಕೆಲವು ಸೊಸೈಟಿಗಳು ಏನಾಗಿವೆ ಎಂದರೆ ಟಗರುಗಳು ಮೇಯುವುದಕ್ಕೆ ಒಳ್ಳೆಯ ಮೈದಾನಗಳಾಗಿವೆ. ಯಾವ ಯಾವ ಜಿಲ್ಲೆಗಳಲ್ಲಿ ಈ ಸೊಸೈಟಿಗಳ ಜೀವಮಾನ ಯಾವ ಯಾವರೀತಿ ಇದೆ ಎಂಬುದು ಹತ್ತಾರು ವರ್ಷಗಳ ಆಡಳಿತವನ್ನು ನೋಡಿದರೆ ಗೊತ್ತಾಗುತ್ತದೆ. ಅದಕೋಸ್ಕರ ಇವನ್ನು ಸುಮ್ಮನೆ ಹೀಗೆಯೇ ತಳ್ಳಿಕೊಂಡು ಹೋಗದೆ ಏನಾದರೂ ಒಂದು ರೀತಿಯಲ್ಲಿ ಸಾರ್ವಜನಿಕರ ದುಡ್ಡು ಭದ್ರವಾಗಿರುವ ಹಾಗೆ ಮಾಡಿದರೆ ಸೊಸೈಟಿಗಳು ಉದ್ಧಾರವಾಗುತ್ತವೆ. ಅಧಿಕಾರಿಗಳಾಗಲಿ, ಇತರರೇ ಆಗಲಿ, ಸಾರ್ವಜನಿಕರಲ್ಲಿ ಹೋಗಿ ಸೊಸೈಟಿಗಳ ಷೇರು ತೆಗೆದುಕೊಳ್ಳಿ ಎಂದು ಕೇಳಿದರೆ ಅವರು ಷೇರು ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಾರೆ. ಕೆಲವರ ಅನುಕೂಲಕ್ಕೋಸ್ಕರ ನಾವೇಕೆ ಷೇರುತೆಗೆದುಕೊಂಡು ಸಹಾಯ ಮಾಡಬೇಕು ಎನ್ನುವ ಭಾವನೆ ಜನರಲ್ಲಿ ಮೂಡಿದೆ. ಈ ಇಲಾಖೆಗೆ ಸಿಬ್ಬಂದಿ ಜಾಸ್ತಿಯಾಗಿದೆ. ಈಗಾಗಲೇ ಈ ಇಲಾಖೆಯಲ್ಲಿ ಜೂನಿಯರ್ ಆಡಿಟರ್ ಮತ್ತು ಸೀನಿಯರ್ ಆಡಿಟರ್ ಎಂದು ಇದ್ದಾರೆ. ಇವರ

ಜೊತೆಗೆ ಒಂದೊಂದು ಜಿಲ್ಲೆಗೂ ಒಬ್ಬೊಬ್ಬ ಡಿಸ್ಟ್ರಿಕ್ಟ್ ಆಡಿಟರನ್ನು ಬೇರೆ ನೇಮಕವಮಾಡಿದ್ದಾರೆ. ಡಿಸ್ಟ್ರಿಕ್ಟ್ ಆಡಿಟರ್ ಆಗಿ ಇವರು ಮಾಡಬೇಕಾದಂಥ ಕೆಲಸ ವೇನು, ಇವರನ್ನು ನೇಮಕ ಮಾಡುವುದರ ಪ್ರಯೋಜನವೇನಿತ್ತು ಎಂದು ನನಗನ್ನಿಸುತ್ತದೆ. ಕೆಲವು ಅಧಿಕಾರಿಗಳಿಗೆ ಜಾಗವನ್ನು ಒದಗಿಸಿಕೊಡಲು ಈ ರೀತಿ ಡಿಸ್ಟ್ರಿಕ್ಟ್ ಆಡಿಟರ್ ಜಾಗ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಸೊಸೈಟಿಗಳ ಲೆಕ್ಕಗಳನ್ನು ಆಡಿಟ್ ಮಾಡುವುದರಲ್ಲಿ ಈಗ ಏನಾಗಿದೆ ಎಂದರೆ ಸೊಸೈಟಿಗಳಲ್ಲಿರತಕ್ಕ ಅಷ್ಟಿಷ್ಟು ಹಣವನ್ನು ಖರ್ಚು ಹಾಕಲಿಕ್ಕೆ ಹತ್ತಿದ್ದಾರೆ. ಕೆಲವು ಸೊಸೈಟಿಗಳಲ್ಲಿ ಆಡಿಟರಿಗೆ ಕೊಡಲಿಕ್ಕೆ ದುಡ್ಡಿಲ್ಲ. ಸೊಸೈಟಿಗಳಲ್ಲಿ ವಹಿವಾಟು ನಡೆಸದೆ ಹೋದರೂ, ಇಷ್ಟು ದುಡ್ಡು ಕೊಡಬೇಕೆಂದು ಮಾಡಿದ್ದಾರೆ. ಆಡಿಟ್ ಫೀ ಮೊದಲು ಬಹಳ ಜಾಸ್ತಿ ಹಾಕಿದರು, ಸಾರ್ವಜನಿಕರಿಂದ ಸ್ವಲ್ಪ ಗಲಾಟೆಯಾದ ಮೇಲೆ ಇತ್ತೀಚೆಗೆ ಕಡಮೆ ಮಾಡಿದರು. ಇದೂ ಸಹ ಹೆಚ್ಚು. ಆದುದರಿಂದ ಈಗಿರುವ ಆಡಿಟ್‌ಫೀ ಕಡಮೆ ಮಾಡಬೇಕು. ಡಿಸ್ಟ್ರಿಕ್ಟ್ ಆಡಿಟರ್ ಎಂದು ಕೆಲವರನ್ನು ಸ್ಪೆಷಲ್ ಆಗಿ ಹಾಕಿದ್ದಾರೆ. ಬಹುಶಃ ಇವರ ಸಂಬಳ 250-300ಕ್ಕೆ ಕಡಮೆ ಇರಲಾರದೆಂದು ಕಾಣಿಸುತ್ತದೆ. ಆದರೆ ಈ ಹುದ್ದೆ ಬೇಕಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಎರಡನೆಯದಾಗಿ, ಈಗ ರೆಗ್ಯುಲೇಟೆಡ್ ಮಾರ್ಕೆಟ್ ಗಳನ್ನು ಮಾಡಿದ್ದಾರೆ. ಬಹುಶಃ ಈ ಮಾರ್ಕೆಟ್ ಕಮಿಟಿಯಲ್ಲಿ ಯಾರು ಯಾರು ಮೆಂಬರುಗಳಾಗಿದ್ದಾರೆಯೋ ಅವರಿಗೆ ಮಿಟಿಂಗ್ಸ್ ಬೇಕಾದಷ್ಟು ಇಲ್ಲ ಎಂದು ತಿಳಿದಿದ್ದೇನೆ. ನಾನು ಮೂರು-ನಾಲ್ಕು ವರ್ಷಗಳಿಂದ ತುಮಕೂರು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿದ್ದೇನೆ. ಅದಕ್ಕೆ ಫೀಲ್ಡ್ ಇಲ್ಲ, ಮಾರ್ಕೆಟ್ ಕೂಡ ಇಲ್ಲ, ಇಂಥಕಡೆ ಕಮಿಟಿಗಳನ್ನು ನಡಸಬೇಕು. ಅಲ್ಲಿಗೆ ಸಾಧಾರಣವಾದ ಒಬ್ಬ ಸೆಕ್ರೆಟರಿಯನ್ನು ಕೊಟ್ಟಿರುತ್ತಾರೆ. ಅಲ್ಲಿ ರೈತರಿಗೆ ಬೇಕಾದ ಸೌಕರ್ಯವಿಲ್ಲ. Market yardನಲ್ಲಿ ಮಳೆ ಬಂದರೆ ನಿಂತುಕೊಳ್ಳಲಿಕ್ಕೆ ಜಾಗವಿಲ್ಲ. ಅಲ್ಲಿಗೆ ಒಂದು ಗಾಡಿ ಏನಾದರೂ ಬಂದರೆ, ಮಳೆಯಲ್ಲಿ ನೆನೆಯದೆ ಇರುವುದಕ್ಕೆ shelters ಬೇಕು. ಅಲ್ಲಿ ಇಂಥ ಯಾವ ಸೌಕರ್ಯಗಳೂ ಇಲ್ಲ. ಅಂಥಾದ್ದರಲ್ಲಿ ರೆಗುಲೇಟೆಡ್ ಮಾರ್ಕೆಟ್‌ಮಾಡಿ ರೈತರಿಗೆ ಏನೋ ಅನುಕೂಲಮಾಡುತ್ತೇವೆಂದು ಸರ್ಕಾರದವರು ಸುಮ್ಮನೆ ಬಾಯಲ್ಲಿ ಹೇಳುತ್ತಾರೆ, ವಾಸ್ತವವಾಗಿ ಏನೂ ಮಾಡುತ್ತಿಲ್ಲ. ಅಲ್ಲಿನ ವರ್ತಕರು, ಸರ್ಕಾರದಿಂದ ಸಾಲ ಕೊಡಿಸಿದರೆ ಕಟ್ಟಡಗಳನ್ನು ಕಟ್ಟುತ್ತೇವೆಂದು ಹೇಳುತ್ತಾರೆ. ಸರ್ಕಾರದವರು ಕಟ್ಟುವುದು ಒಳ್ಳೆಯದೆಂದು ನನಗನಿಸುತ್ತದೆ, ರೈತನಿಗೆ ಉಪಕಾರವಾಗುತ್ತದೆ. ಅವನಿಗೆ ಒಳ್ಳೆಯ ರೇಟ್ ಬರುತ್ತದೆ ಎಂದು ಬಾಯಲ್ಲಿ ಹೇಳುವುದಾಗಿದೆಯೇ ಹೊರತು ಅದರಿಂದ ಪ್ರಯೋಜನವಾಗುತ್ತಿಲ್ಲವೆಂದು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳುತ್ತಿದ್ದೇನೆ.

ಕಡೆಯದಾಗಿ ಸೊಸೈಟಿಗಳ ವಿಚಾರದಲ್ಲಿ ಮಾತ್ರ ಆಡಬೇಕೆಂದಿದ್ದ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಅಲ್ಲಿ ಗೂಳಿಗಳು ಮೇಯುವುದಕ್ಕೆ ಮೈದಾನವನ್ನು ಮಾಡಿಕೊಂಡಿವೆ, ಇವುಗಳನ್ನು ನಡೆಬಿಡಿಯದೆ ಹೋದರೆ ಈ ಇಲಾಖೆಯು ಉದ್ಧಾರವಾಗುವುದಿಲ್ಲವೆಂದು ಕಡೆಯದಾಗಿ ಹೇಳುತ್ತೇನೆ. ಕೆಲವುಕಡೆ ಲೆಕ್ಕಗಳು ಆಡಿಟ್ ಆಗಿಲ್ಲವೆಂದು ಕೇಳಿದ್ದೇನೆ. ಹಳ್ಳಿಯ ಜನಗಳಿಗೆ ಲೆಕ್ಕ ಆಡಿಟ್ ಆಗಿಲ್ಲವೆಂದು ಗೊತ್ತಾದರೆ, ಅವರು ಬಹುಶಃ ಸಾರ್ವಜನಿಕರನ್ನಾಗಲಿ, ಅಧಿಕಾರಿಗಳನ್ನಾಗಲಿ ಜೀವನಸಹಿತ ಬಿಡಲಿಕ್ಕಿಲ್ಲವೆಂದು ಕಾಣುತ್ತದೆ. ಆಡಿಟ್ ಆಯಾ ವರ್ಷ ಕ್ರಮಬದ್ಧವಾಗಿ ನಡೆಯಬೇಕೆಂದು ಹೇಳುತ್ತೇನೆ.

ಇನ್ನು Land revenue ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. "ಬಾಯುಳ್ಳವನು ಬರಗಾಲದಲ್ಲಿ ಬದುಕಿಕೊಂಡ" ಎನ್ನುವಹಾಗೆ ಪಟೇಲರೂ, ಶ್ಯಾನುಭೋಗರೂ, ಎಲ್ಲರೂ ಸೇರಿ ಮಂತ್ರಿಗಳನ್ನು ನೋಡಿ, ನಮಗೆ ಕೊಡತಕ್ಕ ಪೋಟಿಗಿ ಬಹಳ ಕಡಮೆ ಎಂದು ಹೇಳಿಕೊಂಡದ್ದರಮೇಲೆ ಅವರಿಗೆ ಮಾತ್ರ ಪೋಟಿಗಿಯನ್ನು ಜಾಸ್ತಿಮಾಡಿ 9 ಲಕ್ಷ ರೂಪಾಯಿ ಜಾಸ್ತಿಮಾಡಿದ್ದಾರೆ. ಆದರೆ ತೋಟಿ-ತಳವಾರರ ಗತಿ ಏನು ಎಂದು ವಿಚಾರಿಸಿಲ್ಲ. ವಾಸ್ತವವಾಗಿ ಕೆಲಸಮಾಡತಕ್ಕವರೆಂದರೆ ತೋಟಿತಳವಾರರು. ಅವರು ಪಟೇಲರ ಮನೆಯಲ್ಲಿ ಕೆಲಸಮಾಡಬೇಕು, ಶ್ಯಾನುಭೋಗರ ಮನೆಯಲ್ಲಿ ಕೆಲಸಮಾಡಬೇಕು, ಸಾರ್ವಜನಿಕರ ಕೆಲಸವನ್ನೂ ಮಾಡಬೇಕು. ಅವರಿಗೆ ಕೊಟ್ಟಿರತಕ್ಕ ಜಮೀನು ಬಹಳ ಅಲ್ಪ. ಕೆಲವುಕಡೆ ಏನೂ ಕೊಟ್ಟಿಲ್ಲ. ಹೀಗಿರತಕ್ಕ ಕಾಲದಲ್ಲಿ ಅವರಿಗೆ ಸರ್ಕಾರ ಸಹಾಯಮಾಡಬೇಕು. ಇವೊತ್ತಿನ ದಿವಸ ನೋಡಿದರೆ ತೋಟಿ-ತಳವಾರರ ವಿಚಾರದಲ್ಲಿ ಸರ್ಕಾರದವರು ಹೇಳುತ್ತಾರೆ, ಮಿರಾಸೆಕಾಳು ಕೊಡುವುದಿಲ್ಲವೆಂದರೆ, ರೂಪಾಯಿಗೆ ಒಂದಾಣೆಯಂತೆ ಕೊಡಿಸುತ್ತೇವೆ ಎಂದು. ಇತರ ಜಿಲ್ಲೆಗಳ ವಿಷಯ ಹೇಳುವುದಿಲ್ಲ. ತುಮಕೂರು ಜಿಲ್ಲೆಯ ವಿಷಯ ಹೇಳುತ್ತೇನೆ. ತುಮಕೂರು ತಾಲ್ಲೂಕಿನಲ್ಲಿ ಈಗ ಆರು ವರ್ಷದಿಂದ ಯಾರಾದರೂ ಒಬ್ಬ ಅಧಿಕಾರಿ ಅಲ್ಲಿರತಕ್ಕ ತೋಟಿತಳವಾರರಿಗೆ ದುಡ್ಡನ್ನಾಗಲೀ, ಕಾಳನ್ನಾಗಲೀ ಕೊಡಿಸಿದ್ದೇವೆಂದು ಹೇಳುವಪಕ್ಷದಲ್ಲಿ ನಾನು ಈ ಸಭೆಯ ಸದಸ್ಯತನವನ್ನು ಬಿಡಲಿಕ್ಕೆ ಸಿದ್ಧವಾಗಿದ್ದೇನೆಂದು ಹೇಳುತ್ತೇನೆ. ಹೀಗಾಗಿ ಅವರಸ್ಥಿತಿ ಬಹಳ ಶೋಚನೀಯವಾಗಿದೆ. ಏತಕ್ಕೆಂದರೆ ಸುಮ್ಮನೆ ಕಾನೂನಿನಲ್ಲಿ ಬರೆದು, ವಾಸ್ತವವಾಗಿ ಏನೂ ಕೊಡದೆ ಹೋದರೆ, ಅನ್ಯಾಯವಾಗುತ್ತದೆ. ಅದಕ್ಕೋಸ್ಕರವಾಗಿ ತಾವು ಏನಾದರೂ ಅನುಕೂಲ ಇವರಿಗೆ ಮಾಡಬೇಕು. ಈಗ ಹೈಯರ್ ಸರ್ಕಲ್‌ನಲ್ಲಿ ದೊಡ್ಡದೊಡ್ಡ ಅಧಿಕಾರಿಗಳಿಗೆ ಹೆಚ್ಚುಹೆಚ್ಚಾಗಿ ಹೇಗೆ ಅನುಕೂಲವಾಗುತ್ತಿದೆಯೋ ಹಾಗೆ ಬಡಬಗ್ಗರಿಗೆ ಅನುಕೂಲವಾಗುತ್ತಿಲ್ಲ. ಅದಕ್ಕೋಸ್ಕರ ಕೂಡಲೇ ಅನುಕೂಲಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಮುಜರಾಯಿ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ದೇವರ ಪೂಜೆ ಸಲುವಾಗಿ ದೇವಸ್ಥಾನಕ್ಕೆ ಜಮೀನು ಕೊಡಲಾಗಿತ್ತು. ಇತ್ತೀಚೆಗೆ ದೇವಸ್ಥಾನಗಳಿಗೆ ಜಮೀನು ಕೊಡುವ ಪದ್ಧತಿ ನಿಂತುಹೋಗಿರುವುದರಿಂದ ದೇವಸ್ಥಾನದ ಸ್ಥಿತಿ ವಿಚಿತ್ರವಾಗಿದೆ. ದೇವಸ್ಥಾನಗಳಿಗೆ ಜಮೀನು ಕೊಡದೇ ಇದ್ದಾಗ ದುಡ್ಡಿನ ಸಹಾಯವನ್ನಾದರೂ ಮಾಡಬೇಕು. ಬೆಂಗಳೂರು ಮುಜರಾಯಿ ಆಫೀಸಿನಲ್ಲಿ ಕೆಲಸ ಬಹಳ ನಿಧಾನವಾಗುತ್ತಿದೆ. ಆಫೀಸಿನೊಳಗಿನ ಟೇಬಲ್ ಮೇಲಿನ ಧೂಳನ್ನು 15 ದಿವಸದವರೆಗೆ ತೆಗೆಯುವುದಿಲ್ಲ. ಆದಕಾರಣ ಮುಖ್ಯಮಂತ್ರಿಗಳವರು ದಯವಿಟ್ಟು ಈ ಮುಜರಾಯಿ ಆಫೀಸಿನಲ್ಲಿ ಕೆಲಸವು ತಕ್ಷಣ ಆಗುವಹಾಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಕಡೆಯದಾಗಿ ಲೇಬರ್ ಡಿಪಾರ್ಟ್‌ಮೆಂಟಿನ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸುತ್ತೇನೆ. ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸರಿಯಾದ ಸಿಬ್ಬಂದಿ ಕೊಡದಿರುವುದರಿಂದ ಅಲ್ಲಿ ತೃಪ್ತಿಕರವಾಗಿ ಕೆಲಸ ನಡೆಯು

(ಶ್ರೀ ಕೆ. ಎಲ್. ನರಸಿಂಹಯ್ಯ)

ತ್ತಿಲ್ಲ. ಆದರೆ ಸಹಕಾರ ಸಂಸ್ಥೆಗಳಲ್ಲಿ ಜಿಲ್ಲಾ ಆಡಿಟರುಗಳನ್ನು ಕೆಲವರಿಗೆ ಕೆಲಸ ನೀಡಬೇಕೆಂಬ ಉದ್ದೇಶದಿಂದಲೇ ನೇಮಿಸಲಾಗಿದೆ ಎಂದು ನನಗೆ ಅನ್ನಿಸುತ್ತದೆ. ಆದುದರಿಂದ ಎಷ್ಟೋ ಅಂಗಡಿಗಳಲ್ಲಿ ವಾರಕ್ಕೊಮ್ಮೆ ಕೊಡಬೇಕಾದ ರಜಕೊಡದೆ ಅಂಗಡಿಗಳನ್ನು ತೆರೆದುಕೊಂಡು ವ್ಯಾಪಾರ ನಡೆಸಲಾಗುತ್ತಿದೆ.

ದೇಶದಲ್ಲೆಲ್ಲಾ ಒಂದೇರೀತಿಯ ತೂಕ ಮತ್ತು ಅಳತೆ ಇರಬೇಕಾದುದು ಮುಖ್ಯ. ತುಮಕೂರಿನಲ್ಲಿ ಒಂದು ರೀತಿಯಾಗಿದ್ದರೆ ಗುಬ್ಬಿಯಲ್ಲಿ ಮತ್ತೊಂದು ರೀತಿಯಾಗಿ ಇದೆ. ಒಂದೇ ರೀತಿಯ ತೂಕ ಮತ್ತು ಅಳತೆ ಎಲ್ಲಾ ಕಡೆಯಲ್ಲಿಯೂ ಇರುವಹಾಗೆ ಮಾಡುವುದು ಭಾರತ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಆದರೆ ಸಧ್ಯಕ್ಕಿರುವ ಬೇರೆ ಬೇರೆ ತೂಕ ಅಳತೆಗಳಿಂದ ಹಾನಿಯಾಗುತ್ತಾಇದೆ. ಆದಕಾರಣ ಎಲ್ಲಾ ಕಡೆಯಲ್ಲಿಯೂ ಸಮನಾಗಿ ಒಂದೇ ರೀತಿಯ ತೂಕ ಮತ್ತು ಅಳತೆ ಇರುವಂತೆ ಮಾಡಲು ತಕ್ಕ ಕ್ರಮವನ್ನು ತೀವ್ರವಾಗಿ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Srimathi VIJAYA RAGHAVENDER RAO DESAI (Chitapur).—I rise to support the Demands that are before the House. In doing so, I will confine my speech to the Scientific Departments. It is a fact that though these departments have attracted the attention of many scientists since the close of the last century, their development is not very outstanding. Even this is due to the great attention the Central Government has paid to the scientific departments. At the same time, I would like to express my deep sense of gratitude to the State Government for having given separate attention to the geological department and also for the developments that have taken place in this field. In this connection, I would like to make a suggestion in regard to the scheme under the Second Five-Year Plan. I do not mean to say that the Budget estimate of Rs. 7,85,000 is insufficient. But what I mean to say is that the survey assistants who do the mineralling, when they come across fossils, should preserve them for scrutiny. It must be remembered that the fossils are an important aid to find out missing links. Palæontology should be encouraged in the Geological Department. I hope Government would take necessary action in this direction.

Coming to the scientific societies and institutes, the budget estimate is just a lakh. Is it sufficient, Sir? I believe that the total estimate of 10 lakhs and 66 thousands ought to have been given to the chemical and biological departments only. After all most of the other branches of science, *i.e*, zoology, botany and bio-chemistry, relate to chemistry. You all know the importance of the study of the protoplasm. A study of the protoplasm leads to knowledge in chemistry and therefore chemistry is the most important branch in the scientific world. I believe that the whole estimate allotted to the scientific departments should be given to chemistry alone.

I will now speak on the provision for Museums. The budget estimate for this section is Rs. 65,400. Very broad indeed, but broader it should be so far as these museums are concerned, particularly the biological museums. Biology deals with the study of animals and plants, which include a study of man and nature. I believe that a study of biology is of great importance to the average citizen, because it discloses secrets of our life's activities, particularly those of the vitamins. The biological department also gives an idea of the struggle for existence and the law of the survival of the fittest. I therefore feel that this estimate needs re-consideration at the hands of Government.

I would now turn my attention to Government's Research Departments. There are two needs for this purpose: first, the calculating machine to work out statistical data and second, the chemical storeroom for the re-agents, etc. If these accessories are supplied to all the departments, I believe that they would develop to a great extent.

Speaking about Hyderabad-Karnatak area, the scientific departments in the Arts and Science College, Gulbarga, need some improvement. I hope the institution would be better equipped and better-organised with an efficient staff in course of time. As it is well known, the Hyderabad-Karnatak area is neglected and not backward.

12 NOON.

*ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಗೋಲ್ಡ್ ಫೀಲ್ಡ್).—ಅಧ್ಯಕ್ಷರೇ, ಕಾರ್ಮಿಕ ಶಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇತರ ಇಲಾಖೆಗಳ ವಿಚಾರದಲ್ಲಿ ಚರ್ಚಾಸ್ಪದವಾದ

ಅಂಶಗಳು ಬಹಳವಾಗಿದ್ದರೂ ಸಂಕ್ಷಿಪ್ತವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಇಂದಿನ ಆಡಳಿತವರ್ಗದವರು ಸಮತಾವಾದ ಸಮಾಜ ರಚನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಸಮತಾವಾದ ಸಮಾಜರಚನೆಯನ್ನು ಮಾಡುತ್ತೇವೆ ಎಂದು ಹೇಳುವುದಕ್ಕೂ ಮತ್ತು ಹೇಳಿದಂತೆ ಮಾಡುವುದಕ್ಕೂ ಎಷ್ಟೋ ಅಂತರವಿದೆ, ಎಷ್ಟೋ ದೂರವಿದೆ ಯೆಂದು ಹೇಳಿದರೆ ತಪ್ಪಾಗಲಾರದು. ಒಂದು ಸರಿಯಾದ ವ್ಯವಸ್ಥೆಯನ್ನು ಕಾರ್ಮಿಕವರ್ಗದವರಲ್ಲಿ ಉಂಟುಮಾಡುವುದು ಸಮತಾವಾದ ಸಮಾಜ ರಚನೆಯ ಮೂಲಭೂತವಾದ ಅಂಶ. ಆದರೆ, ದುರದೃಷ್ಟವಶಾತ್ ಈಗ ಕಾರ್ಮಿಕರ ವಿಚಾರದಲ್ಲಿ ಆಡಳಿತ ವರ್ಗ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ, ಸಮತಾವಾದ ಸಮಾಜ ರಚನೆಗೆ ಬಹಳ ದೂರವಿದೆ ಎಂದು ಕಾಣುತ್ತದೆ. ಕಾರ್ಮಿಕರಿಗೆ ವೇಜಸ್ ಬಹಳ ಮೂಲಭೂತವಾದ ಸಮಸ್ಯೆ. ಆದುದರಿಂದ ಒಂದು ವೇಜಸ್‌ಬಾಡಿ ಮೂಲಕ ಪ್ರತಿಯೊಬ್ಬ ಕಾರ್ಮಿಕನಿಗೂ ಇಷ್ಟು ಕೆಲಸಕ್ಕೆ ಇಷ್ಟು ಕೂಲಿ ಎಂದು ನಿಗದಿಮಾಡುವುದು ಒಳ್ಳೆಯ ಮೂಲ ಭೂತವಾದ ಸಮಸ್ಯೆ. ಕಾರ್ಮಿಕ ಶಾಖೆಯವರು ಹತ್ತಾರು ವರ್ಷಗಳಿಂದ ಇದುವರೆಗೂ ಅಂಥ ಒಂದು ವೇಜಸ್‌ಬಾಡಿಯನ್ನು ನಿರೂಪಣೆ ಮಾಡಲಿಲ್ಲವೆಂದು ಹೇಳಬೇಕಾಗಿದೆ. ಎರಡನೆಯದಾಗಿ ಕಾರ್ಮಿಕರ ಸಂಘಗಳು ದಿನೇ ದಿನೇ ಹೆಚ್ಚಾಗಿ ರಿಜಿಸ್ಟರ್ ಆಗಿ ಬರುತ್ತಾ ಇವೆ. ಆದರೂ ಮಾಲೀಕರ ಒತ್ತಾಯದಿಂದ ಸಮತಾವಾದ ಸಮಾಜ ರಚನೆಗನುಗುಣವಾದ ನೀತಿಯನ್ನನುಸರಿಸುವ ವಿಚಾರವನ್ನು ಮಂತ್ರಿಗಳು ಇನ್ನೂ ಆಲೋಚನೆಮಾಡುತ್ತಿದ್ದಾರೆ.

ಇನ್ನು ಇಂಡಸ್ಟ್ರಿಯಲ್ ರಿಲೇಷನ್ಸ್ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಿಂದಿನ ಸರ್ಕಾರ ಏನು ಹೇಳಿತ್ತೋ, ಅದನ್ನೇ ಈಗಿನ ಸರ್ಕಾರವೂ ಕಾರ್ಮಿಕ ಶಾಖೆಯವರ ವಿಚಾರದಲ್ಲಿ ಅನುಸರಿಸುತ್ತಿದ್ದಾರೆ. ಇಂದಿನ ಆಡಳಿತ ವರ್ಗದವರು ಕಾರ್ಖಾನೆ ಕಟ್ಟುವುದರಲ್ಲಿ ಬಹಳ ನಿಪುಣರು. ಆದರೆ ಅವರ ಕಾರ್ಮಿಕ ನೀತಿಯನ್ನು ನೋಡಿದರೆ ಅದು ಸಮಂಜಸವಾಗಿಯೂ, ತೃಪ್ತಿಕರವಾಗಿಯೂ ಇಲ್ಲವೆಂದು ಹೇಳಬಯಸುತ್ತೇನೆ. ಇನ್ನೂ ಕೆಲವು ಸಣ್ಣ ಪುಟ್ಟ ವಿಷಯಗಳನ್ನು ತೆಗೆದುಕೊಳ್ಳೋಣ. ಕಾರ್ಮಿಕ ಶಾಸನಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಏನಾದರೂ ಶೇಖರಿಸಿದ್ದಾರೆಯೇ ಎಂದರೆ ಅದೂ ಇಲ್ಲ. ಫ್ಯಾಕ್ಟರಿ ಇನ್ಸ್‌ಪೆಕ್ಷನ್ನಿಗೆ ನಮ್ಮಲ್ಲಿ ಸಾಕಷ್ಟು ಎಕ್ಸ್‌ಪರ್ಟ್ಸ್ ಇದ್ದಾರೆಯೇ ಎಂದರೆ ಅದೂ ಇಲ್ಲ. ಈ ರೀತಿಯಾಗಿ ಸಾಕಷ್ಟು ವ್ಯವಸ್ಥೆ ಇಲ್ಲದಿರುವುದರಿಂದ ಅನೇಕ ಕೈಗಾರಿಕೆಗಳಲ್ಲಿ ಇದನ್ನು ಜಾರಿಗೆ ತಂದಿಲ್ಲ. ಈಗ ಬೆಂಗಳೂರಿನಲ್ಲಿ ಸುಮಾರು 16 ಸಾವಿರ ಅಂಗಡಿಗಳಿಗೆ ಒಬ್ಬ ಇನ್ಸ್‌ಪೆಕ್ಟರ್ ಇದ್ದಾರೆ. ಎರಡು ವರ್ಷಗಳ ಕಾಲಾವಕಾಶ ಕೊಟ್ಟರೂ ಪ್ರತಿಯೊಂದು ಅಂಗಡಿಯನ್ನೂ ವಿಜಿಟ್ ಮಾಡುವುದಕ್ಕಾಗುವುದಿಲ್ಲ. ಹೆಸರಿಗಾಗಿಯೋ, ಪ್ರಚಾರಕ್ಕಾಗಿಯೋ ಅವರನ್ನು ಇಟ್ಟಿದ್ದಾರೆಂದು ಕಾಣುತ್ತದೆ. ಡೈರೆಕ್ಟರ ಕಂಟ್ರೋಲಿನಲ್ಲಿ ಇನ್ಸ್‌ಪೆಕ್ಟರೇಟ್ ಕೆಲಸ ಮಾಡುತ್ತಿವೆ. ಈ ಇಲಾಖೆಯಲ್ಲಿ ಒಂದು ಪ್ರತೀತಿ ಏನಿದೆಯೆಂದರೆ ಲಂಚರುಷುವತ್ತಿನ ಒಂದು ಸಾಂಕ್ರಾಮಿಕ ರೋಗ ಪೂರ್ಣವಾಗಿ ತುಂಬಿದೆ. ಅದಕ್ಕೆ ಸಂಬಂಧಪಟ್ಟ ಉಪಶಾಖೆಗಳಿಗೆ ಆ ಪ್ರತೀತಿ ಹಬ್ಬಿದೆ, ಉಪಶಾಖೆಗಳು ಅಷ್ಟಾಗಿ ದಕ್ಷತೆಯಿಂದ ಕೆಲಸಮಾಡುತ್ತಿಲ್ಲ. ಒಂದು ಸಾಮರ್ಥ್ಯ, ಒಂದು ಶಕ್ತಿ ಈ ಶಾಖೆಗೆ ಇಲ್ಲದಿದ್ದರೆ, ಮಾಲೀಕರ ಮೇಲೆ ಯಾವ ರೀತಿ ಕಾನೂನನ್ನು ಜಾರಿಮಾಡುವುದಕ್ಕಾಗುತ್ತದೆ? ಸ್ವತಂತ್ರ ಕರ್ಣಾಟಕವಾದ ಮೇಲೆ ಈ ಇನ್ಸ್‌ಪೆಕ್ಟೊರೇಟ್ ಕಾನೂನನ್ನು ಜಾರಿಗೆತರುವುದಕ್ಕೆ ಏನು ಸಂಕೋಚ? ಆಂಧ್ರ, ಮದರಾಸ್, ಕೇರಳದಲ್ಲಿ ಇಂತಹ ಇನ್ಸ್‌ಪೆಕ್ಟರೇಟನ್ನು ನೇಮಕಮಾಡಿರುವುದನ್ನು ಮಾನ್ಯ ಕಾರ್ಮಿಕ ಮಂತ್ರಿಗಳು ನೋಡಿದ್ದಾರೆ. ಆದರೆ ಇಲ್ಲಿ ಅದನ್ನು ಇನ್ನೂ ಏಕೆ ಮಾಡಲಿಲ್ಲವೆಂದು ನನಗೆ ಅರ್ಥವಾಗಲಿಲ್ಲ. ಇದೇ ತರಹ ಇಲ್ಲಿ ಕೇಂದ್ರ ಸರ್ಕಾರದ ಕಾರ್ಖಾನೆಗಳಿವೆ. ಮಿನಿಮಂ ವೇಜಸ್ ಆಕ್ಟನ್ನು ಇಲ್ಲಿ ಜಾರಿಗೆ ತರಬೇಕು. ಮುಖ್ಯವಾಗಿ ಇನ್ನೂ ಕೇಂದ್ರ ಸರ್ಕಾರದ ಭಾರತ್ ಎಲೆಕ್ಟ್ರೋನಿಕ್ ವರ್ಕ್ಸ್, ಎಚ್.ಎಂ.ಟಿ. ಕಾರ್ಖಾನೆಗಳಲ್ಲಿಯೂ ಇದು ಜಾರಿಯಲ್ಲಿ ಬಂದಿರುವುದಿಲ್ಲ.

ಇನ್ನು ಕೋಆಪರೇಷನ್ ವಿಷಯದಲ್ಲಿ ಹೇಳುವುದಾದರೆ ಮನಿ ಲೆಂಡರ್ಸ್ ಆಕ್ಟ್ ಸರಿಯಾಗಿ ಜಾರಿಯಲ್ಲಿಲ್ಲದೇ ಇರುವುದರಿಂದ ಕಾರ್ಮಿಕವರ್ಗದವರಿಗೆ ಬಹಳ ತೊಂದರೆಯಾಗಿದೆ. ಮಾರವಾಡಿಗಳು ಮನಿಲೆಂಡರ್ಸ್ ಎಂದರೆ ಯಾರೂ ತಪ್ಪಾಗಿ ತಿಳಿಯುವುದಿಲ್ಲವೆಂದು ತಿಳಿದಿದ್ದೇವೆ. ಅವರು ಕೆ.ಜಿ.ಎಫ್.ನಲ್ಲಿ ಬಹಳ ಜಾಸ್ತಿ ಇದ್ದಾರೆ. ಅವರ ರಿಜಿಸ್ಟರುಗಳು ಬಹಳ ವಿಚಿತ್ರವಾಗಿರುತ್ತವೆ. ಅವರು ಅವರ ಲೆಖ್ಖಗಳನ್ನು ನಮ್ಮ ಕಾರ್ಮಿಕವರ್ಗದವರಿಗೆ ತಿಳಿಯದಿರುವಹಾಗೆ ಹಿಂದಿಯಲ್ಲೋ, ಮರಾಠಿಯಲ್ಲೋ ಬರೆದುಕೊಳ್ಳುತ್ತಾರೆ. ನಮ್ಮ ಕಾರ್ಮಿಕವರ್ಗದವರಲ್ಲಿ ಅನೇಕರಿಗೆ ಕನ್ನಡವೇ ಚೆನ್ನಾಗಿ ತಿಳಿಯುವುದಿಲ್ಲ. ಹಾಗೆಂದಮೇಲೆ ನಮ್ಮ ಕಾರ್ಮಿಕರ ಗತಿಯೇನು? ಅವರಿಗೆ ಲೆಖ್ಖವೇ ಗೊತ್ತಾಗುವುದಿಲ್ಲ. ರೇಟ್ ಆಫ್ ಇಂಟರೆಸ್ಟನ್ನು ಛಾರ್ಜುಮಾಡುವಾಗ ಅವರ ಪುಸ್ತಕದಲ್ಲಿ ಏನು ಬರೆದುಕೊಂಡಿರುತ್ತಾರೋ ಅದರ ಪ್ರಕಾರ ಬಡ್ಡಿಯನ್ನು ಕೊಡಬೇಕು. ಸುಮ್ಮನೆ ಬಾಯಲ್ಲಿ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಇಂಟರೆಸ್ಟ್ ಛಾರ್ಜು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಆ ತರಹ ಮಾಡದೆ ಅದಕ್ಕೆ ಬದಲಾಗಿ ಒಂದು ಒಪ್ಪಂದವನ್ನು ಮಾಡಿಕೊಂಡು ಏನೇನೋ ಮಾಡುತ್ತಿದ್ದಾರೆ. ಮನಿ ಲೆಂಡರ್ಸ್ ಆಕ್ಟಿನ ಯಾವ ತರಹ ಕಾಯಿದೆಗೂ ಸಿಕ್ಕದಹಾಗೆ ಒಪ್ಪಂದಮಾಡಿಕೊಳ್ಳುತ್ತಾರೆ. ಇದರಿಂದ ಕಾರ್ಮಿಕವರ್ಗದವರಿಗೆ ಬಹಳ ತೊಂದರೆಯಾಗಿದೆ. ಇದರ ವಿಚಾರವಾಗಿ ಸ್ವಲ್ಪ ಸುಧಾರಣೆ ಜಾರಿಗೆ ಬರಬೇಕು.

ಇನ್ನು ಜಿಯಾಲಜಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನಾಡಬಯಸುತ್ತೇನೆ. ಈ ಇಲಾಖೆಗೆ ಕೆಲವು ವಿಚಾರಗಳಲ್ಲಿ ಹಣವನ್ನೊದಗಿಸಿದ್ದರೂ, ಅದು ಸಾಕಾದಷ್ಟು ತೃಪ್ತಿಕರವಾಗಿ ಕೆಲಸಮಾಡುತ್ತಿಲ್ಲ. ರಾಷ್ಟ್ರದ ಪುರೋಭಿವೃದ್ಧಿಯಾಗಬೇಕಾದರೆ, ಆರ್ಥಿಕ ಮಟ್ಟ ಮುಂದುವರಿಯಬೇಕಾದರೆ, ಕೈಗಾರಿಕೆಗಳು ಪ್ರಗತಿಯಾಗಬೇಕಾದರೆ ಜಿಯಾಲಜಿ ಮತ್ತು ಜಿಯೊಗ್ರಾಫಿಕಲ್ ಇಂಜನಿಯರಿಂಗ್ ಸರ್ವೇ ಸೆಕ್ಷನ್ನುಗಳು ಮುಂದುವರಿಯಬೇಕು. ಇವನ್ನು ಈಗ ನೋಡಿದರೆ, ಇವು ಬಹಳ ಹಿಂದುಳಿದಿವೆಯೆಂದು ವಿಷಾದದಿಂದ ಹೇಳಬೇಕಾಗಿದೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇವೆಲ್ಲವನ್ನೂ ಅಭಿವೃದ್ಧಿಮಾಡಬೇಕೆಂದು ಸೂಚಿಸಿದ್ದಾರೆ. 1953-54ರಲ್ಲಿ ಭೀಮಪ್ಪನಾಯಕ್ ಕಮಿಟಿಯವರು ಈ ವಿಚಾರದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ ಅವಿನ್ನೂ ಜಾರಿಯಲ್ಲಿಲ್ಲ. ಎರಡನೆಯದಾಗಿ, ಮಿನರಲ್ ಕನ್ಸರ್ವೇಷನ್ ರೂಲ್ಸನ್ನು ಸಿಕ್ಕಾಪಟ್ಟೆ ಕೊಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು ಎಂದು ತಿಳಿಸುತ್ತೇನೆ. ಈಗ ಅವುಗಳನ್ನು ಎಕನಾಮಿಕ್ ಆಗಿ ನಡೆಸಿ

(ಶ್ರೀ ಎಂ. ಸಿ. ನರಸಿಂಹನ್)

ಕೊಂಡುಹೋಗಬೇಕು. ವೇಸ್ಟೇಜ್ ಮೈನಿಂಗ್‌ನಲ್ಲಿರಬಾರದು. ಮುಖ್ಯವಾಗಿ ಪೂರ್ ಓರ್ಸ್ ಇರುತ್ತವೆ. ಇವನ್ನು ತೆಗೆಯಲು ಬಹಳ ಹಣ ಖರ್ಚಾಗುತ್ತದೆ. ಆದ್ದರಿಂದ ಬೆನಿಫಿಸಿಯೇಷನ್ ಪ್ರಾರಂಭವಾಡಬೇಕು. ಈಗಿನ ಮಿನರಲ್ ಕನ್ಸೆಷನ್ ಪಾಲಿಸಿಯನ್ನು ನೋಡಿದರೆ, ಇವೊತ್ತು ಯಾವೊಂದು ನೀತಿಯನ್ನೂ ಅನುಸರಿಸುತ್ತಾ ಇಲ್ಲ. ಸಿಕ್ಕಾಪಟ್ಟೆ ಲೈಸೆನ್ಸ್ ಕೊಡುತ್ತಾರೆ. ಲೈಸೆನ್ಸ್ ಕೊಟ್ಟರೂ ಕೂಡ, ಆ ಏರಿಯಾ ಎಷ್ಟು ಇದೆಯೋ, ಅಷ್ಟು ಪರಿಮಿತಿಯೊಳಗೆ ಕೆಲಸವಾಡುತ್ತಾ ಇಲ್ಲ. ಬಳ್ಳಾರಿಯನ್ನು ತೆಗೆದುಕೊಂಡರೆ, ಸೊಂಡೂರು ಮಹಾರಾಜರಿಗೆ 26 ಸಾವಿರ ಎಕರೆಗೆ ಲೈಸೆನ್ಸ್ ಕೊಟ್ಟಿದ್ದರೆ, 36 ಸಾವಿರ ಎಕರೆ ಮೈನಿಂಗ್ ಮಾಡಿರುತ್ತಾರೆ. ಅಂತಹ ಪರಿಸ್ಥಿತಿ ಇದೆ. ಈ ರೀತಿ ಮಿನರಲ್ ಕನ್‌ಸೆಷನ್ ರೂಲ್ಸನ್ನು ಜಾರಿಗೆ ಕೊಡಬಾರದೆಂದು ಹೇಳಬಯಸುತ್ತೇನೆ. ಡೈಮಂಡ್ ಡ್ರಿಲ್ಲಿಂಗ್ ಮಾಡುವುದು ಅವಶ್ಯಕ. ಡೈಮಂಡ್ ಡ್ರಿಲ್ಲಿಂಗ್ ಮಾಡಲು ರಾಜ್ಯದಲ್ಲಿ ಇಂಟೆನ್ಸಿವ್ ಸರ್ವೆಮಾಡಬೇಕು. ಡೈಮಂಡ್ ಡ್ರಿಲ್ಲಿಂಗ್ ಬಾಬಿಗೆ ಎಷ್ಟು ಹಣ ಒದಗಿಸಿದ್ದಾರೆಂಬುದನ್ನು ಉಲ್ಲೇಖಿಸಿಲ್ಲ. ಇದರ ಜೊತೆಗೆ ಮ್ಯಾಂಗನೀಸನ್ನು ಅನ್ವಯಿಸುವಹಾಗೆ ಬೆನಿಫಿಸಿಯೇಷನ್ ಪ್ಲಾಂಟನ್ನು ನಾಲ್ಕಾರು ಆದರೂ ಒದಗಿಸಿಕೊಳ್ಳಬೇಕು. ಬಳ್ಳಾರಿಯಲ್ಲಿ ಇಂತಹ ಒಂದು ಪ್ಲಾಂಟು ಇರಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಆದರೂ ಇದರ ಬಗ್ಗೆ ಹೆಚ್ಚು ಲಕ್ಷ್ಯ ಕೊಟ್ಟಿಲ್ಲ, ಹೆಚ್ಚು ಗಮನ ಕೊಟ್ಟಿಲ್ಲವೆಂದು ವಿಷಾದದಿಂದ ಸೂಚಿಸಬೇಕಾಗಿದೆ. ಬೋರ್ಡ್ ಆಫ್ ಮಿನರಲ್ಸ್ ಡೆವಲಪ್‌ಮೆಂಟ್ ಅಥವಾ ಒಂದು ಕಾರ್ಪೊರೇಷನ್ ಇರಬೇಕು. ಈ ರೀತಿ ಇದ್ದರೆ ಖನಿಜ ಸಂಪತ್ತು ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ ಒಂದು ಸಲಹೆಯನ್ನು ಸಮಿತಿಯವರು ಮಾಡಿದ್ದಾರೆ. ಆದರೆ ಅಂತಹ ಒಂದು ಅಟಾನಮಸ್ ಕಾರ್ಪೊರೇಷನ್ ಮಾಡುವುದಕ್ಕೆ ನಮ್ಮ ಸರ್ಕಾರದವರು ಏತಕ್ಕೋಸ್ಕರ ಹಿಂತೆಗೆಯುತ್ತಾರೋ ನನಗೆ ಗೊತ್ತಾಗಲಿಲ್ಲ. ಹಾಗೆ ಅಟಾನಮಸ್ ಕಾರ್ಪೊರೇಷನ್ ಮಾಡುವುದರಿಂದ ಎಲ್ಲಿ ಆದಾಯ ಹೋಗುತ್ತದೋ ಎಂಬ ಹೆದರಿಕೆ, ಭಯ ನಮ್ಮ ಸರ್ಕಾರಕ್ಕಿದೆಯೆಂದು ಕಾಣುತ್ತದೆ. ಆ ನೀತಿಯನ್ನು ಬಿಟ್ಟು ಒಂದು ಸಡಿಲವಾದ ರೀತಿಯಲ್ಲಿ ಅಟಾನಮಸ್ ಕಾರ್ಪೊರೇಷನ್ನನ್ನು ಮುಖ್ಯವಾಗಿ ಮಿನರಲ್ ಡೆವಲಪ್‌ಮೆಂಟ್ ಬಗ್ಗೆ ಮಾಡದಿದ್ದರೆ ನಾವು ಖಂಡಿತವಾಗಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಲೇಬರ್ ಕೋರ್ಟು ವಿಷಯದಲ್ಲಿ ನಾನು ಕಳೆದಸಲ ಟೀಕೆಮಾಡಿದಾಗ ನನ್ನ ಟೀಕೆ ಸಾಧುವಾದುದಲ್ಲ, ಲೇಬರ್ ಕೋರ್ಟು ಜಾರಿಯಲ್ಲಿದೆ ಎಂದು ಕಾರ್ಮಿಕ ಮಂತ್ರಿಗಳು ಹೇಳಿದರು. ಆದರೆ ಲೇಬರ್ ಕೋರ್ಟಿನ ಅಡ್ರೆಸ್ಸೇ ಗೊತ್ತಿಲ್ಲ. ಈಗಲೂ ಕೂಡ ಅವರಿಗೆ ಕುಳಿತುಕೊಳ್ಳಲು ಬಿಲ್ಡಿಂಗ್ ಇಲ್ಲ. ನೇಮಕಮಾಡಿರುವ ಜಡ್ಜಿಗಳೂ ಕೂಡ ಅಲ್ಲಿಗೆ ಹೋಗಿ ಅಧಿಕಾರ ವಹಿಸುವುದಕ್ಕೆ ಸಾಧ್ಯವಿಲ್ಲ. ಹೈಕೋರ್ಟನ್ನು ಕೇಳದೆ ನೇಮಕ ಮಾಡಿದ್ದಾರೆ. ಇವೊತ್ತು ನಾವು ಅವರನ್ನು ರಿಲೀಸ್ ಮಾಡುವುದಕ್ಕಾಗುವುದಿಲ್ಲ. ಬೇರೆಯವರನ್ನು ಕೇಳಿದರೆ ರಿಲೀಸ್ ಮಾಡುತ್ತೇವೆಂದು ಹೈಕೋರ್ಟಿನವರನ್ನು ಹೇಳುತ್ತಿದ್ದಾರೆ. ಅದೂ ಒಂದು ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟ ಸಣ್ಣ ವಿಷಯ. ಜನವರಿಯಿಂದ ಈ ಕೋರ್ಟು ನಮ್ಮ ದೇಶದಲ್ಲಿಲ್ಲವೆಂದು ಹೇಳುವಾಗ, ಅಂತಹ ಸಣ್ಣ ವಿಷಯಕ್ಕೆ ಸಾಕಷ್ಟು ಲಕ್ಷ್ಯ ಕೊಡದಿದ್ದರೆ, ದೇಶಕ್ಕೆ ನಷ್ಟವಾಗುತ್ತದೆ. ಕಾರ್ಮಿಕರಲ್ಲಿ ಅತೃಪ್ತಿ ಬೆಳೆಯುತ್ತದೆ. ಆಗ ಜಡ್ಜಿಗಳು ಏನು ಮಾಡಬೇಕಾಗುತ್ತದೆ? ರಿಟ್ರಾಸ್ಪೆಕ್ಟಿವ್ ಆಗಿ ಕೊಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರ ದೊಡ್ಡ ಮನೋಭಾವವನ್ನು ತಾಳಬೇಕಾಗುತ್ತದೆ. ಈ ರೀತಿ ಅನಾನುಕೂಲಕ್ಕೆ ಸರ್ಕಾರ ಮತ್ತು ಕಾರ್ಮಿಕ ಶಾಖೆ ಜವಾಬ್ದಾರರೇ ಹೊರತು ಬೇರೆ ಯಾರೂ ಅಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ತಾರೇಗೌಡ (ಸಿರಾ).—ಅಧ್ಯಕ್ಷರನ್ನು ವಂದಿಸುತ್ತಾ ಈ ಬೇಡಿಕೆಗಳ ವಿಚಾರದಲ್ಲಿ ತೃಪ್ತಿಯನ್ನು ತೋರಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಎದುರು ಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಸಹಕಾರ ಇಲಾಖೆಯ ವಿಚಾರದಲ್ಲಿ ಸಹಕಾರ ಸಂಸ್ಥೆಯನ್ನು ಕಲ್ಪವೃಕ್ಷವೆಂದು ಹೇಳಿದರು. ಆ ವಿಷಯವನ್ನು ಅಕ್ಷರಶಃ ಒಪ್ಪಬೇಕಾಗುತ್ತದೆ. ಸಹಕಾರ ಸಂಸ್ಥೆ ಈ ದೇಶಕ್ಕೆ ಕಲ್ಪವೃಕ್ಷ ಅಲ್ಲದೆ ಕಾಮಧೇನು ಸಹ ಆಗಿದೆ. ಇಂತಹ ಕಲ್ಪವೃಕ್ಷ ಮತ್ತು ಕಾಮಧೇನು ಆಗಿರುವ ಸಂಸ್ಥೆಗಳ ಸದುಪಯೋಗವನ್ನು ದೇಶದ ಜನಗಳು ಪಡೆದು ಕೊಳ್ಳಬೇಕು. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ರೈತಾಪಿವರ್ಗದವರು, ಕೂಲಿಗಾರರು, ಮತ್ತು ಬಡವರು ಹೆಚ್ಚಾಗಿದ್ದಾರೆ. ಇಂತಹ ಜನಗಳ ಆರ್ಥಿಕಾಭಿವೃದ್ಧಿಯಾಗಬೇಕಾದರೆ ಅವರಿಗೆ ಹಣದ ಸೌಲಭ್ಯ ಜಾಗ್ರತೆ ಸಿಕ್ಕುತ್ತಿರಬೇಕು. ಈ ಅವಶ್ಯಕತೆಯನ್ನು ಕಂಡು ಭಾರತ ರತ್ನ ಎಂಬ ಬಿರುದನ್ನು ಪಡೆದ, ಇಂಡಿಯಾ ದೇಶದಲ್ಲೇ ಅಲ್ಲದೆ ಪ್ರಪಂಚದಲ್ಲಿ ವಿಖ್ಯಾತ ಇಂಜನಿಯರ್ ಅವರಾದ Engineer Statesman ಸರ್. ಎಂ ವಿಶ್ವೇಶ್ವರಯ್ಯನವರು ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಕೈಗಾರಿಕಾ ಸಂಘಗಳನೂ ಬ್ಯಾಂಕ್‌ಗಳನ್ನೂ ಸ್ಥಾಪಿಸುವುದರಿಂದ ಬಡ ಜನರಿಗೆ ಸಹಾಯವಾಗುತ್ತದೆ ಎಂದು ಹೇಳಿದ್ದಾರೆ. ಮೈಸೂರು ದೇಶದ ಕೋಲಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಅವರು ಜನಿಸಿದ್ದರಿಂದ ಹಳ್ಳಿಗಳ ಮತ್ತು ಹಳ್ಳಿಗರ ಕಷ್ಟ ಅವರಿಗೆ ಗೊತ್ತಿದೆ. ಅವರ ಸೂಚನೆ ಮೇರೆಗೆ ಬೆಂಗಳೂರಲ್ಲಿ Mysore State Co-operative Central Rural Industrialisation Bank ಸಂಸ್ಥೆಯನ್ನು ಈಗ್ಗೆ ಸುಮಾರು ಏಳು ವರ್ಷಗಳ ಕೆಳಗೆ ಸರ್ಕಾರ ಸ್ಥಾಪಿಸಿ ಹಳ್ಳಿಗರಿಗೆ ಸಹಾಯ ಮಾಡುತ್ತಿದೆ. ಅವರು ಇಲಾಖೆಗೆ ಅಡಿಪಾಯ ಹಾಕಿದ್ದಾರೆ. ಅದಕ್ಕೋಸ್ಕರ ಈ ಸಂಸ್ಥೆಗೆ ಹಿಂದಿನ ಸರ್ಕಾರದವರು ಅವರ ಹೆಸರನ್ನು ಇಟ್ಟಿದ್ದಾರೆ. ಈ ಸಂಸ್ಥೆಯು ಮೂರು ನಾಲ್ಕು ವರ್ಷಗಳಿಂದ ಹಳೆಯ ಮೈಸೂರಿನ ಹತ್ತು ಜಿಲ್ಲೆಗಳಲ್ಲೂ ಚೆನ್ನಾಗಿ ಕೆಲಸ ಮಾಡುತ್ತಿದೆ. ವ್ಯವಸಾಯದಿಂದ ಜೀವನ ಮಾಡತಕ್ಕವರ ಪುರೋಭಿವೃದ್ಧಿಗೆ ಅವಶ್ಯಕವಾದ Agricultural allied industries ಉದ್ಯಮಗಳಿಗೂ ಹಣ ಸಹಾಯ ಒದಗಿಸಿದೆ. ಅತಿಮುಖ್ಯವಾದ ಇಂತಹ ಸಂಸ್ಥೆಯು ವಿಶ್ವವಿಖ್ಯಾತ ಮತ್ತು ದೇಶಪ್ರೇಮಿಗಳಾದ ಶ್ರೀ ವಿಶ್ವೇಶ್ವರಯ್ಯನವರ ಹೆಸರನ್ನು ಇಟ್ಟುಕೊಂಡು ಏತಕ್ಕೆ ಕೆಲಸಮಾಡುತ್ತಿವೆ ಮತ್ತು ಅವು ಸರಿಯಾಗಿ ನಡೆಯುತ್ತಾ ಇಲ್ಲವೆಂದು ಶ್ರೀ ಕೆಂಚಪ್ಪನವರು ಹಲವಾರು ಟೀಕೆಗಳನ್ನು ಮಾಡಿದರು. ಆದರೆ ಇಂತಹ ಸುಪ್ರಸಿದ್ಧ ಪುರುಷರ ಹೆಸರನ್ನು ಇಟ್ಟುಕೊಳ್ಳುವುದು ತಪ್ಪೇ? ಅಂಥವರ ಭಾವ ಚಿತ್ರಗಳು ಗ್ರಾಮಾಂತರದ ಎಲ್ಲಾ ಸಹಕಾರ ಸಂಸ್ಥೆಗಳಲ್ಲಿಯೂ ಕೂಡ ಇರಬೇಕು. ಅಂತಹ ವ್ಯಕ್ತಿಗಳ ನಿಷ್ಕಲ್ಮಷಹೃದಯ, ನಿಸ್ಪೃಹತೆ ಮತ್ತು ದಕ್ಷತೆ ಮುಂತಾದ ತತ್ವಗಳನ್ನು ತಿಳಿದುಕೊಂಡು ಈ ಸಂಸ್ಥೆಯು ಯಶಸ್ವಿಯಾಗಿ ನಡೆಯುವಂತೆ ಸಂಸ್ಥೆ

ಗಳ ಡೈರೆಕ್ಟರುಗಳು ಮತ್ತು ಅಧಿಕಾರವರ್ಗದವರು ನಡೆದುಕೊಂಡು ಅದರ ಉಪಯೋಗವನ್ನು ಅವಶ್ಯಕವಾಗಿ ಬೇಕಾದಂಥ ರೈತಾಪಿವರ್ಗದವರಿಗೂ ಸಣ್ಣಪುಟ್ಟ ಕೈಗಾರಿಕೆಗಳನ್ನು ನಡೆಸತಕ್ಕಂಥವರಿಗೂ ಒದಗಿಸಿಕೊಡಬೇಕು. ಆದ್ದರಿಂದ ಅಂತಹವರ ಹೆಸರು ಇರಬೇಕಾದದ್ದು ಅತ್ಯಾವಶ್ಯಕ. ಇಂಥ ಸದುಪಯೋಗವಾಗತಕ್ಕಂಥ ಒಂದು ಸಂಸ್ಥೆಯನ್ನು ಬದಲಾಯಿಸಬೇಕು ಅಥವಾ ರದ್ದುಮಾಡಬೇಕು ಎನ್ನುವ ಅಭಿಪ್ರಾಯ ಈಗ ಸರ್ಕಾರದಲ್ಲಿ ನಡೆಯುತ್ತಿದೆ. ನಾನು ಹೇಳುವುದೇನೆಂದರೆ ಹಳ್ಳಿಗಾಡಿನಲ್ಲಿ ಇರತಕ್ಕ ರೈತಾಪಿವರ್ಗದವರಿಗೆ ಮತ್ತು ಸಣ್ಣಪುಟ್ಟ ಕೈಗಾರಿಕೆಯವರಿಗೆ ಹಣದ ಸಹಾಯ ಅವಶ್ಯಕವಾಗಿದೆ. ಹಿಂದೆ ಇಂತಹ ಸಹಾಯ ಅವರಿಗೆ ಒದಗುತ್ತಾ ಇರಲಿಲ್ಲ. ಕೇವಲ ಪಟ್ಟಣದಲ್ಲಿರುವವರಿಗೆ ಮತ್ತು ವರ್ತಕರಿಗೆ ದೊಡ್ಡ ದೊಡ್ಡ ಬ್ಯಾಂಕುಗಳು ಸೌಲಭ್ಯವನ್ನು ಒದಗಿಸಿ ಹಿಂದೆ ಬಡವರಾಗಿದ್ದವರು, ಮಧ್ಯಮ ವರ್ಗದವರು ಈಗ ಲಕ್ಷಾಧೀಶರಾಗಿದ್ದಾರೆ. ಇದನ್ನು ಮನಗಂಡು ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೂ ಕೂಡ ಇಂತಹ ಸೌಲಭ್ಯಗಳನ್ನು ಒದಗಿಸಿದ ಕೀರ್ತಿ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಸೇರತಕ್ಕದ್ದು. ಈ ಸಂಸ್ಥೆಯ ಬೈಲಾಗಳ ಪ್ರಕಾರವಾಗಿ 108 ಬಾಬುಗಳ ರೂಪದಲ್ಲಿ ಹಣವನ್ನು ಉಪಯೋಗಿಸಬೇಕು ಎಂದು ಅಡಕವಾಗಿದೆ. ಈಗ ರೈತರಿಗೆ ಬರೀ ವ್ಯವಸಾಯದಿಂದ ಮಾತ್ರ ಅವರ ಆರ್ಥಿಕಾಭಿವೃದ್ಧಿ ಯಾಗುವುದಿಲ್ಲ. ವ್ಯವಸಾಯದ ಖರ್ಚಿಗೆ ಸರಿಯಾದ ಲಾಭ ದೊರೆಯುತ್ತಾ ಇಲ್ಲ ವ್ಯವಸಾಯ ಲಾಭದಾಯಕವಾದ ಕಸಬಾಗಿಲ್ಲ. ಆದ್ದರಿಂದ ಅವರು ಒಂದು ಉಪಕೈಗಾರಿಕೆಯನ್ನು ಇಟ್ಟುಕೊಳ್ಳಲೇ ಬೇಕಾಗಿದೆ. ಅದಕ್ಕಾಗಿ ಈ ಸೊಸೈಟಿಯ ಬೈಲಾಗಳಲ್ಲಿ ಅಗ್ರಿಕಲ್ಚರಲ್ ಅಲೈಡ್ ಇಂಡಸ್ಟ್ರೀಸ್ ಎಂಬುದನ್ನು ಕೂಡ ಸೇರಿಸಿ ರೈತರಿಗೆ ಸಹಾಯ ಮಾಡುವುದನ್ನು ಮುಂದುವರಿಸಬೇಕು. ಈಗ ಕೆಲವು ಕೈಗಾರಿಕೆಗಳಿಗೆ ಇದರ ಸಹಾಯ ಒದಗುತ್ತಾ ಇದೆ. ಕೆಲವು ಸಂಸ್ಥೆಗಳಲ್ಲಿ ಕೆಲವು ವ್ಯಕ್ತಿಗಳು ತಪ್ಪುಗಳನ್ನು ಮಾಡಿ ಹಣ ದುರ್ವಿನಿಯೋಗವಾಗಿರಬಹುದು. ಅದಕ್ಕಾಗಿ ಆ ಸಂಸ್ಥೆಯನ್ನೇ ವಜಾ ಮಾಡಬೇಕಾಗಿಲ್ಲ. ಮತ್ತು ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ತೆಗೆದುಹಾಕಬೇಕಾಗಿಲ್ಲ. ಭಾರತ ಸರ್ಕಾರದವರು ಈ ಸಂಸ್ಥೆಗಳಿಗೆ ಸಹಾಯ ಮಾಡಲು ಈಗ ಮುಂದೆ ಬಂದಿದ್ದಾರೆ. ಈ ಸಂಸ್ಥೆಯನ್ನು ಮುಂಚಿತವಾಗಿಯೇ ಮೈಸೂರು ದೇಶದಲ್ಲಿ ಸ್ಥಾಪನೆ ಮಾಡಿ ಅದರ ಸೌಲಭ್ಯವನ್ನು ಮೈಸೂರಿನ ಜನತೆಗೆ ಒದಗಿಸಿಕೊಟ್ಟಂಥ ಕೀರ್ತಿ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಸೇರಿದೆ. ಈ ಇಲಾಖೆಯ ಡೈರೆಕ್ಟರ್ ಮತ್ತು ಅಧಿಕಾರ ವರ್ಗದವರು, V.G.D. ಇನ್ಸ್ಪೆಕ್ಟರುಗಳು ಮತ್ತು ಸರ್ಕಾರದಲ್ಲಿ ಇರತಕ್ಕಂಥ ಅಧಿಕಾರಿಗಳು ಪಟ್ಟ ಶ್ರಮವನ್ನು ಮತ್ತು ಅವರ ದಕ್ಷತೆಯನ್ನು ನಿಜವಾಗಿಯೂ ಕೂಡ ನಾವು ಮರೆಯುವಂತಿಲ್ಲ. ಈ ಇಲಾಖೆಯಲ್ಲಿ ಹಾಲಿ ಇರುವ ಸುಮಾರು 400 ಜನ V.G.D. ಇನ್ಸ್ಪೆಕ್ಟರುಗಳು S.S.L.C ಪರೀಕ್ಷೆ ಮಾಡಿಕೊಂಡು ಈ ಇಲಾಖೆಯಲ್ಲಿ ಟ್ರೈನಿಂಗ್ ಪಡೆದು ಈಗ ಮೂರು ನಾಲ್ಕು ವರ್ಷಗಳಿಂದ ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದಾರೆ. ಇವರಲ್ಲದೆ ಅನೇಕರು 28 ವರ್ಷ 25 ವರ್ಷದ ವಯೋಮಿತಿಗೆ ಮೀರಿದ್ದಾರೆ. P.S.C. ರೂಲ್ಸ್ ಮೇರೆ ಇವರನ್ನೆಲ್ಲಾ ಸರ್ಕಾರದ ಕೆಲಸಕ್ಕೆ ನೇಮಿಸಿಕೊಳ್ಳಲು ಅನರ್ಹರಾಗಬಹುದು. ಆದ್ದರಿಂದ ಇವರನ್ನೆಲ್ಲಾ ಸಹಕಾರ ಇಲಾಖೆಯಲ್ಲಿಯೇ ಖಾಯಂ ಮಾಡಬೇಕಾದದ್ದು ಧರ್ಮ ಮತ್ತು ನ್ಯಾಯ. ಈಗ ನಾವು ಇಂಡಿಯಾ ಸರ್ಕಾರದ ಸ್ಕೀಮಿನ ಸೌಲಭ್ಯವನ್ನು ಪಡೆದುಕೊಂಡು ಈಗಿರುವ ಸಂಸ್ಥೆಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಮಾರ್ಪಡಿಸಿಕೊಳ್ಳತಕ್ಕ ಕಾಲ ಬಂದಿದೆ. ಈ V.G.D. ಇನ್ಸ್ಪೆಕ್ಟರುಗಳಲ್ಲಿ ಅನೇಕರು ದೇಶದಲ್ಲಿ ಬೆಳೆಯುತ್ತಿರುವ ಸಹಕಾರ ಸಂಸ್ಥೆಗಳಿಗೆ ಸಹಾಯವಾಗಲು ಸೊಸೈಟಿಗಳಿಗೆ ಗುಮಾಸ್ತರಾಗಲು, ಅಕೌಂಟೆಂಟರಾಗಲು ಸೊಸೈಟಿ ಇನ್ಸ್ಪೆಕ್ಟರಾಗಲು ಸಹಕಾರ ಸ್ಕೂಲು, ಕಾಲೇಜುಗಳಲ್ಲಿ ಟ್ರೈನಿಂಗ್ ಕೊಟ್ಟು ಇವರಿಗೆ ಸರ್ಕಾರದ ಕೆಲಸ ಖಾಯಂ ಮಾಡಿ ಹಾಲಿ ಇರುವ ಸೊಸೈಟಿಗಳಲ್ಲಾಗಲಿ ಹೊಸದಾಗಿ ಸ್ಥಾಪಿತವಾಗುವ ಸೊಸೈಟಿಗಳಲ್ಲಾಗಲಿ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾದದ್ದು ಅಗತ್ಯ. ಡಿಸ್ಟ್ರಿಕ್ಟ್ ಸಹಕಾರ ಬ್ಯಾಂಕಿನಿಂದ ಅಲ್ಪಕಾಲಾವಧಿ ಸಾಲಗಳನ್ನು ಎಲ್ಲಾ ರೈತಾಪಿ ವರ್ಗದವರಿಗೆ ಕೊಡುವುದಾಗಿ ತಿಳಿಸಿದ್ದಾರೆ. ಆದಾಗ್ಯೂ ಈ ಸೌಲಭ್ಯ ಎಷ್ಟು ಸಂಸ್ಥೆಗಳಿಗೆ ಸಿಕ್ಕುತ್ತಾ ಇದೆ ಎಂಬುದನ್ನು ನೋಡಬೇಕು. ರೈತರಿಗೆ ಮತ್ತು ಗ್ರಾಮಾಂತರದಲ್ಲಿರುವವರಿಗೆ ಹಣದ ಸಹಾಯ ಜಾಗ್ರತೆಯಾಗಿ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಈಗ ನಮ್ಮ ಡಿಸ್ಟ್ರಿಕ್ಟಿನ ವಿಚಾರ ಹೇಳುವುದಾದರೆ ನಮ್ಮ ಡಿಸ್ಟ್ರಿಕ್ಟ್ ಬ್ಯಾಂಕಿಗೆ ಸಿರಾ ತಾಲ್ಲೋಕಿನ ಕೇವಲ ನಾಲ್ಕು ಪ್ರೈಮರಿ ಸೊಸೈಟಿಗಳನ್ನು ಮಾತ್ರ ಸೇರಿಸಿದ್ದಾರೆ. ಇದರಿಂದ ಕೆಲವರಿಗೆ ಮಾತ್ರ ಸಹಾಯ ಒದಗಿದೆ. ಸರ್. ಎಂ. ವಿಶ್ವೇಶ್ವರಯ್ಯನವರ ಸ್ಕೀಮಿನ ಪ್ರಕಾರ ಹೋಬಳಿಗಳಿಗೆ ಒಂದೊಂದು ಸೊಸೈಟಿ ಇರುತ್ತದೆ. ಇವು ಎರಡು ಮೂರು ವರ್ಷಗಳಿಂದ ಕೆಲಸ ಮಾಡುತ್ತಿವೆ. ಇಡೀ ತಾಲ್ಲೋಕಿನ ಎಲ್ಲಾ ಹೋಬಳಿಗಳ ಸೊಸೈಟಿಗಳು ಡಿಸ್ಟ್ರಿಕ್ಟ್ ಬ್ಯಾಂಕಿನ ಈ ಸೌಲಭ್ಯವನ್ನು ಪಡೆಯುತಕ್ಕ ಅವಕಾಶವಿದೆ. ಆದರೆ, ಈಗ ಇದರ ಸೌಲಭ್ಯ ಶಿರಾ ತಾಲ್ಲೂಕಿನಲ್ಲಿ ನಾಲ್ಕು ಸೊಸೈಟಿಗಳಿಗೆ ಮಾತ್ರ ಸಿಕ್ಕಿರುತ್ತದೆ. ಇದರ ವ್ಯಾಪ್ತಿಯನ್ನು ವಿಶಾಲ ಮಾಡಬೇಕಾದರೆ ಇನ್ನು ಎರಡು ಮೂರು ವರ್ಷಗಳು ಬೇಕಾಗುತ್ತವೆ. ಆದ್ದರಿಂದ ಸಹಾಯ ಪಡೆಯುವ ಅವಶ್ಯಕತೆ ಇರತಕ್ಕಂಥ ಮೇಲ್ಕಂಡ ನಾಲ್ಕು ಸೊಸೈಟಿಗಳ ವ್ಯಾಪ್ತಿಗೆ ಸೇರಿಲ್ಲದ ರೈತಾಪಿ ಜನಗಳಿಗೆ ಈ ಹಣದ ಸಹಾಯ ಸಿಕ್ಕದ ಹಾಗಾಗಿದೆ. ಈ ದೃಷ್ಟಿಯಿಂದ ಅವರಿಗೆ ಹಣದ ಸಹಾಯ ಸಿಕ್ಕಲಿ ಎನ್ನುವ ಉದ್ದೇಶದಿಂದ ಎಲ್ಲಾ ಸೊಸೈಟಿಗಳನ್ನೂ ಡಿಸ್ಟ್ರಿಕ್ಟ್ ಬ್ಯಾಂಕಿಗೆ ಪ್ರೈಮರಿ ಸೊಸೈಟಿಗಳಾಗಿ ಸೇರಿಸಿಕೊಂಡು ಸರ್ಕಾರದವರು Short term ಮತ್ತು X Medium term ಸಾಲದ ಸೌಲಭ್ಯ ಒದಗಿಸಿಕೊಡಬೇಕು. ಅಲ್ಲಿನವರೆಗೂ ವಿಶ್ವೇಶ್ವರಯ್ಯನವರ ಸ್ಕೀಮಿನ V.G.D. ಸೊಸೈಟಿಗಳ ಮೂಲಕ ರೈತರಿಗೆ agricultural allied industries ಗಳಾದ Virginia tobacco curing ಕೈಗಾರಿಕೆಗಳಿಗೆ ಹಣವನ್ನು ಸಾಲದ ರೂಪದಲ್ಲಿ ಒದಗಿಸಬೇಕು. ಸಹಕಾರ ಇಲಾಖೆಯಲ್ಲಿನ ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಲು ಆಶಿಸುತ್ತೇನೆ.

ಸಹಕಾರ ಇಲಾಖೆ ಬಹಳ ಮುಖ್ಯವಾದುದು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನೊದಗಿಸಿ ಸಹಕಾರ ಸಂಘಗಳ ಮೂಲಕ ರೈತರಿಗೂ ಕೈಗಾರಿಕಾ ಕಸಬುದಾರರಿಗೂ ಸಾಲದ ರೂಪದಲ್ಲಿ ಹಣ ಕೊಟ್ಟು ರೈತರನ್ನು ಋಣಮುಕ್ತರನ್ನಾಗಿ ಮಾಡಿ ಅವರ ಆರ್ಥಿಕ ಸ್ಥಿತಿ ಉತ್ತಮವಾಗುವಂತೆ ಮಾಡಿ ತನ್ಮೂಲಕವಾಗಿ ಸರ್ಕಾರದವರು ದೇಶಾಭಿವೃದ್ಧಿ ಮಾಡಬೇಕೆಂದು ಮನಸ್ಸು ಮಾಡಿದ್ದಾರೆ. ಇದು ಬಹಳ ಸ್ತುತ್ಯವಾದುದು, ಆದರೆ

(ಶ್ರೀ ಟಿ. ತಾರೇಗೌಡ)

ಇಂಥ ಇಲಾಖೆಯನ್ನು ಒಬ್ಬರೇ ಒಬ್ಬರು ದಕ್ಷರಾದ ಅಧಿಕಾರಿಗಳ ವಶಕ್ಕೆ ಕೊಟ್ಟು ಹಿಂದಿನಿಂದ ಈ ಸಂಸ್ಥೆಗಳಲ್ಲಿ ಹೆಗ್ಗಣ ಸೇರಿಕೊಂಡು ದುರ್ವಿನಿಯೋಗವಾಗುತ್ತಿದಯೆಂಬುದನ್ನು ನಾವು ಇನ್ನೂ ಮರೆತಿಲ್ಲ. ಇದನ್ನು ಚಕ್ ಮಾಡಲು ಇಲಾಖೆಗೆ ಇಬ್ಬರು ಮೂವರು ದೊಡ್ಡ ದೊಡ್ಡ ಅಧಿಕಾರಿಗಳು ಬೇಕು. ಈಗ ನಮ್ಮಲ್ಲಿ ಸಹಕಾರ ತತ್ವದಲ್ಲಿ ಮತ್ತು ಸಹಕಾರ ವಿಚಾರಗಳಲ್ಲಿ ಪಾಂಡಿತ್ಯ ಪಡೆದವರೂ, ಅನುಭವಸ್ತರೂ, ದಕ್ಷರೂ ಆದ ಅಧಿಕಾರಿಗಳಿದ್ದಾರೆ; ಅಂಥವರನ್ನು ಉಪಯೋಗಿಸಿಕೊಳ್ಳಬೇಕು. ಚೀಫ್ ಮಾರ್ಕೆಟಿಂಗ್ ಆಫೀಸರನ್ನು ಪಾಶ್ಚಾತ್ಯ ದೇಶಕ್ಕೆ ಕಳಿಸಿ ಸುಮಾರು 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂಥವರ ಸಹಾಯ ಪಡೆಯದೆ ಅವರನ್ನು ಸೋಷಿಯಲ್ ವೆಲ್ ಫೇರ್ ಬೋರ್ಡ್ ಡೈರೆಕ್ಟರಾಗಿ ಮಾಡಿದ್ದಾರೆ. ಅವರನ್ನು ಸಹಕಾರ ಇಲಾಖೆ ಕಳೆದುಕೊಂಡದ್ದು ಒಂದು ಭಾರಿ ನಷ್ಟ. ಇದೇ ರೀತಿ ಲ್ಯಾಂಡ್ ಮಾರ್ಟ್‍ಗೇಜ್ ಬ್ಯಾಂಕಿನಲ್ಲಿ ಅಲ್ಲಿರುವ ಲೋಪದೋಷಗಳನ್ನು ತಿದ್ದಿ ಅಭಿವೃದ್ಧಿಗೆ ತಂದು ಹೆಚ್ಚು ಜನರಿಗೆ ಸಹಾಯ ಮಾಡಲು ಕ್ರಮ ಕೈಕೊಂಡು ನಿಸ್ಪೃಹತೆಯಿಂದ ಕೆಲಸ ಮಾಡುತ್ತಾ ಜನಾನುರಾಗಿಯಾಗಿ ಕಾರ್ಯದರ್ಶಿಯಾಗಿರುವ ಶ್ರೀ ತಮ್ಮಯ್ಯನವರನ್ನು ಬದಲಾಯಿಸಕೂಡದು. ಹಾಗೆಯೇ ದಕ್ಷರಾದ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಅವರಿಗೆ ಇಲಾಖೆಗಳಲ್ಲಿ ಮುಖ್ಯ ಮುಖ್ಯವಾದ ಸ್ಥಾನಗಳನ್ನು ಕಲ್ಪಿಸಿ ಆಯಾ ಡಿವಿಜನ್‍ಗಳಲ್ಲಿರುವವರಿಗೆ ಆಯಾ ಪ್ರದೇಶದಲ್ಲೇ ಅವಕಾಶ ಕಲ್ಪಿಸಿ ಅವರು ಸಹಕಾರದಿಂದ, ದಕ್ಷತೆಯಿಂದ ಹೆಚ್ಚಿನ ಸೇವೆ ಸಲ್ಲಿಸಿ ಸಹಕಾರ ಇಲಾಖೆಗೆ ಕೀರ್ತಿತರುವಂತೆ ಸಹಕಾರ ಇಲಾಖೆ ರಿಜಿಸ್ಟ್ರಾರ್ ಅವರಾದ ಶ್ರೀ ಬಿ. ಎ. ಪಾಟೀಲ್ ರವರು ವ್ಯವಸ್ಥೆ ಮಾಡಬೇಕು. ಮೈಸೂರು ದೇಶ ವಿಶಾಲವಾಗಿದೆ. ಸಹಕಾರ ಇಲಾಖೆ ಕಲ್ಪವೃಕ್ಷವಾಗಿ ಬೆಳೆಯುತ್ತಿದೆ. ಈ ಕಾಮಧೇನು ಕಲ್ಪವೃಕ್ಷಗಳ ಫಲ, ಆವಶ್ಯಕತೆ ಇರುವ ನಾಡಿನ ಎಲ್ಲಾ ಪ್ರದೇಶದ ಎಲ್ಲಾ ವರ್ಗದ ಜನರಿಗೂ ಜಾಗ್ರತೆ ದೊರಕಲೆಂಬ ಸದ್ಭಾವನೆಯಿಂದ ಈ ಸಲಹೆಯನ್ನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತಂದು ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚೆನ್ನಬಸಪ್ಪ (ಕೃಷ್ಣರಾಜನಗರ).—ಸ್ವಾಮಿ, ಭೂಮಿಯ ಆಡಳಿತ ಶಾಖೆಗೆ ಸಂಬಂಧಪಟ್ಟಂಥ ಈ ಡಿಮ್ಯಾಂಡ್ ನಮ್ಮ ಮುಂದಿರುವಾಗ ಅನೇಕ ವಿಷಯಗಳನ್ನು ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಈವರೆಗೆ ಒಂದು ಬಹಳ ಪ್ರಾಮುಖ್ಯವಾದಂಥ ವಿಷಯವನ್ನು ಯಾವ ಮಾನ್ಯ ಸದಸ್ಯರೊಬ್ಬರೂ ಪ್ರಸ್ತಾಪಮಾಡದಿರುವ ಕಾರಣ ಆ ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಭೂಮಿಯ ಉಪಯೋಗ ಹೇಗಾಗುತ್ತದೆಂಬುದನ್ನು ನಾನಾ ದೃಷ್ಟಿಯಿಂದ ನೋಡಿದ್ದಾರೆ. ಸ್ವರಾಜ್ಯ ಬರುವುದಕ್ಕೆ ಮುನ್ನ ಭೂಮಿಯ ಆಡಳಿತ ಶಾಖೆ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ಕೊಡುವ ಒಂದು ಬಹಳ ಪ್ರಾಮುಖ್ಯವಾದ ಶಾಖೆಯಾಗಿತ್ತು. ಉತ್ಪತ್ತಿ, ಅಥವಾ ಅದರಿಂದ ಬರತಕ್ಕ ವರಮಾನ ನಮಗೆ ಅಷ್ಟು ಪ್ರಾಮುಖ್ಯವಲ್ಲ. ಅದರ ಉಪಯೋಗ ಇದೆಯಲ್ಲಾ ಆ Land use ಪಾಲಿಸಿ ಈಗ ಬಹಳ ಪ್ರಾಮುಖ್ಯತೆಗೆ ಬಂದಿದೆ. ಇಂದು ಈ ಭೂಮಿಯಿಂದ ಮಾನವನಿಗೆ ಅವಶ್ಯಕವಾದಂಥ ಸಮಸ್ತ ಪದಾರ್ಥಗಳೂ ಕೂಡ ಉತ್ಪನ್ನವಾಗಬೇಕು. ಆದ್ದರಿಂದ ದೇಶದಲ್ಲಿರತಕ್ಕಂಥ ವ್ಯವಸಾಯಕ್ಕೆ ಲಾಯಕ್ಕಾದ ಪ್ರತಿಯೊಂದು ಅಂಗುಲ ಭೂಮಿಯನ್ನೂ ಕೂಡ ಸದ್ವಿನಿಯೋಗ ಮಾಡಿ ಅದಕ್ಕೆ ತಕ್ಕಂಥ ಭೂ ಸ್ವಾಮ್ಯ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಕಡೆಗೆ ನಮ್ಮ ಗಮನವಿದೆ. ಇದನ್ನು ಎರಡು ವಿಭಾಗ ಮಾಡಬಹುದು. ಈಗಾಗಲೆ ಜನರಲ್ಲಿರುವ ಭೂಮಿಯನ್ನು ಉಪಯೋಗ ಮಾಡಬೇಕಾದರೆ ಯಾವ ರೀತಿ ಮಾಡಬೇಕು ಮತ್ತು ಸರ್ಕಾರದ ವಶದಲ್ಲಿರುವ ಭೂಮಿಯನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುದಾಗಿ ಹೀಗೆ ಈ ಎರಡು ವಿಭಾಗಗಳನ್ನು ಮಾಡಿ ನಾವು ಇದನ್ನು ಪರಿಶೀಲನೆ ಮಾಡಬೇಕು. ನಮ್ಮ ಈ ಯೋಜನೆಯಲ್ಲಿ ಭೂಮಿಯ ಉಪಯೋಗದ ಬಗ್ಗೆ ಇನ್ನೂ ಕೂಡ ಸರಿಯಾದ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡಂತೆ ಕಾಣುವುದಿಲ್ಲ. ಚೈನ ಮತ್ತು ರಷ್ಯಾ ದೇಶಗಳನ್ನು ನೋಡಿ, ಅವರ ಗುರಿ ಒಂದೇ. ಅದನ್ನು ಸಾಧಿಸುವಾಗ ಅಡ್ಡಿ ಆತಂಕವೇನೇ ಬಂದರೂ ಅವನ್ನು ಲಕ್ಷಿಸದೆ ಅವರು ಗುರಿ ಮುಟ್ಟಿದ್ದಾರೆ. ಆದರೆ ನಮ್ಮಲ್ಲಿ ಆ ನಮ್ಮ ಗುರಿಯೇನು ಎಂಬುದನ್ನು ಇನ್ನೂ ಸರಿಯಾದ ರೀತಿಯಲ್ಲಿ ನಿರ್ದಿಷ್ಟವಾಗಿ ರೂಪಿಸಿದಂತೆ ನನಗೆ ಕಂಡುಬರುತ್ತಿಲ್ಲ. ಭೂಮಿಯ ಉಪಯೋಗ ಒಂದು ಯೋಜಿತವಾದ ಮಾರ್ಗದಲ್ಲಿ ಆಗಬೇಕು. ಒಂದು ಕಡೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿ ಎಂಬ ಕೂಗೇಳುತ್ತಿದೆ. ಒಂದು ಕಡೆ ಇಂಡಿವಿಜುಯಲ್ ಫಾರ್ಮಿಂಗ್ ಮಾಡಿ ಎಂದು ಹೇಳುತ್ತಾರೆ, ಒಂದು ಕಡೆ ಪೆಸೆಂಟ್ ಫಾರ್ಮಿಂಗ್ ಆಗ ಬೇಕೆಂದು ಹೇಳುತ್ತಾರೆ; ಇದರ ಜೊತೆಗೆ ಕಲೆಕ್ಟಿವೈಸೇಷನ್ ಮಾಡುವುದೊಂದು. ಯಾವ ರೀತಿ ಈ ಭೂಮಿಯ ಉಪಯೋಗ ಸಾಧಿಸಬೇಕೆಂಬ ವಿಷಯದಲ್ಲಿ ಸರ್ಕಾರ ನಿರ್ದಿಷ್ಟವಾದ ಧೋರಣೆಯನ್ನು ಹಾಕಿಕೊಳ್ಳತಕ್ಕದ್ದು ಬಹಳ ಆವಶ್ಯಕ, ವೇದಿಕೆಗಳ ಮೇಲೆ, ಪತ್ರಿಕೆಗಳಲ್ಲಿ, ಕಾನೂನು ಮಾಡುವಾಗ ಸಂಬಂಧಪಟ್ಟ ಕಾನೂನಿನ ಉದ್ದೇಶ ಮತ್ತು ಕಾರಣಗಳ ವಿವರದಲ್ಲಿ

> "We want to build up an efficient agriculture industry to produce the nation's requirements and secure the best land management,"

ಎಂದು ಹೇಳುತ್ತಾರೆ. ಓದುವಾಗ ಇದು ಬಹಳ ಚೆನ್ನಾಗಿ ಕಾಣಿಸುತ್ತದೆ; ಜಾರಿಗೆ ಕೊಡಬೇಕಾದರೆ ನಮ್ಮ ಗುರಿ ನಿರ್ದಿಷ್ಟವಾದ ಹೊರತು ಯಾವ ಒಂದು ಯೋಜನೆಯನ್ನೂ ಹಾಕುವುದಕ್ಕಾಗುವುದಿಲ್ಲ. ಈಗ ಕೋ ಆಪರೇಟಿವ್ ಫಾರ್ಮಿಂಗಿಗೆ ನಮ್ಮ ದೇಶದಲ್ಲಿ ಹೆಚ್ಚಿನ ಉತ್ತೇಜನ ಕೊಟ್ಟು ಅವನ್ನು ಸಾಧಿಸಬೇಕೆಂಬ ಒಂದು ವರದಿ ಸಹ ನಮ್ಮ ದೇಶದ ಮುಂದಿದೆ. ಅದಕ್ಕೆ ಒಂದು ಭಿನ್ನಾಭಿಪ್ರಾಯದ ವರದಿ ಕೂಡ ಇದೆ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ನಾಳೆ ದಿವಸ ಕೋಆಪರೇಟಿವ್ ಫಾರ್ಮಿಂಗ್ ಬೇಡ, ಪೆಸೆಂಟ್ ಫಾರ್ಮಿಂಗ್ ಬೇಕು ಎಂದು ಯಾವುದಾದರೂ ಪ್ರಬಲವಾದ ಇನ್‍ಫ್ಲುಯೆನ್‍ಷಿಯಲ್ ಕ್ವಾರ್ಟರ್ಸ್‌ನಿಂದ ಒತ್ತಾಯ ಬಂದರೆ 'ಪೆಸೆಂಟ್ ಫಾರ್ಮಿಂಗ್' ಎಂದು ಕೂಗು ಷುರು ವಾಗುತ್ತದೆ. ಅದು ಸರಿಯಲ್ಲ, ಕೋ ಆಪರೇಟಿವ್ ಫಾರ್ಮಿಂಗ್ ಆಗಬೇಕು, ನಮ್ಮ ದೇಶದಲ್ಲಿ ಎಲ್ಲಾ ಒಂದೇ ರೀತಿಯಾಗಿರಬೇಕು ಎಂದು ಕೂಗು ಬಂದರೆ ಅದೇ ಸರಿಯೆಂದು ಹೇಳಬಹುದು. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದು ಒಂದೇ ಒಂದು

ವಿಷಯ: ಈ ವಿಷಯದಲ್ಲಿ ತಾವು ಬಹಳ ತೀವ್ರವಾಗಿ ಗಮನ ಕೊಟ್ಟು ಯಾರು ಏನೇ ಹೇಳಲಿ, ನಮ್ಮ ದೇಶ ದಲ್ಲಿರುವ ಪರಿಸ್ಥಿತಿಗನುಗುಣವಾಗಿ ಆ ಗುರಿ ಮುಟ್ಟುವು ದಕ್ಕೆ ಯಾವುದು ಸಾಧ್ಯ ಎಂದು ಯೋಚನೆಮಾಡಿ, ಕೇಂದ್ರ ಸರ್ಕಾರದವರು ತಪ್ಪು ಎಂದು ಹೇಳಿದರೂ, ಅವರಿಗೆ ಸಲಹೆ ಮಾಡುವ ಕರ್ತವ್ಯವಿದೆ. ನಮ್ಮ ದೇಶ ದಲ್ಲಿ ಕೋ ಆಪರೇಟಿವ್ ಫಾರ್ಮಿಂಗ್ ಎಂಬುದು ಅದರಲ್ಲೂ ಮೈಸೂರಿನಲ್ಲಿ ಬೆಳೆಯುತ್ತಿದೆಯೋ ಇಲ್ಲವೆ ಎಂಬುದನ್ನು ನೋಡಬಹುದು. ಈಗ 23 ಕೋ-ಆಪ ರೇಟಿವ್ ಫಾರ್ಮಿಂಗ್ ಸೊಸೈಟಿಗಳಿವೆ. ಸುಮಾರು 9 ಸಾವಿರ ಎಕರೆ ಬಹಳ ಉತ್ಕೃಷ್ಟವಾದ ಜಮೀನು ಆ ಸೊಸೈಟಿಗಳಿಗೆ ಸೇರಿದೆ. ಅದರ ಉಪಯೋಗದ ಬಗ್ಗೆ ಮಂತ್ರಿಗಳೂ, ಸರ್ಕಾರದವರೂ ನೇರವಾಗಿ ಪರಿಶೀಲಿಸಿ ಮನವರಿಕೆ ಮಾಡಿಕೊಂಡರೆ ಆಗ ಸರಿಯಾದ ವಿಚಾರ ಗೊತ್ತಾಗುತ್ತದೆ. ಅದು ಇಲ್ಲಿಗೆ ಸರಿಹೋಗು ವುದಿಲ್ಲ. ಏಕೆ ಸರಿಹೋಗುವುದಿಲ್ಲವೆಂದು ಕೇಳಬಹುದು. ಆ ಬಗ್ಗೆ ನಾನು ಪರಿಶೀಲನೆ ಮಾಡಿದ್ದೇನೆ. ನಾನು ಈ ಖಾತೆ ಮಂತ್ರಿಯಾಗಿದ್ದಾಗ, ಶಾಸನ ಸಭಾ ಸದಸ್ಯ ನಾಗಿದ್ದಾಗ ಮತ್ತು ಇತರ ವೇಳೆಯಲ್ಲಿ, ಇತರ ದೇಶ ಗಳಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಯಾವ ಯಾವ ರೂಪ ತಾಳಿ ಯಾವ ಯಾವ ವಾತಾವರಣದಲ್ಲಿ ಬೆಳೆದಿದೆ ಯೆಂಬುದನ್ನು ಕೂಲಂಕಷವಾಗಿ ಅರಿತಿದ್ದೇನೆ. ಚೈನಾ ದಲ್ಲಿ ಈ ಕೋ-ಆಪರೇಟಿವ್ ಫಾರ್ಮಿಂಗ್ ಯಾವ ಹಿನ್ನೆಲೆ ಯಲ್ಲಿ ಯಶಸ್ವಿಯಾಗಿ ಬೆಳೆದಿದೆ ಎಂಬುದನ್ನು ತಾವು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗಿದೆ. ಆದರೆ ಈ ವಿಚಾರ ಹೇಳುವುದಕ್ಕೆ ಮುಂಚೆ ನಮ್ಮ ದೇಶದಲ್ಲಿರತಕ್ಕ ಜಮೀನನ್ನು ಈಗ ಯಾವ ರೀತಿ ಉಪಯೋಗ ಮಾಡುತ್ತಿದ್ದಾರೆ ಎಂಬ ವಿಚಾರ ದಲ್ಲಿ ಒಂದೆರಡು ಅಂಶಗಳನ್ನು ಮಾನ್ಯ ಮಂತ್ರಿ ಗಳ ಗಮನಕ್ಕೆ ತರಬೇಕಾಗಿದೆ. ಮೊದಲನೆಯದಾಗಿ ನಮ್ಮ ಸರಕಾರದ ವಶದಲ್ಲಿ ವ್ಯವಸಾಯಕ್ಕೆ ಲಾಯ ಕ್ಕಾದ ಜಮೀನು 15,64,098 ಎಕರೆ ಇದೆ ಈ ಸಂಖ್ಯೆ ಹೊಸ ಸಂಸ್ಥಾನಕ್ಕೆ ಅನ್ವಯಿಸಿದ್ದು, ವ್ಯವ ಸಾಯಕ್ಕೆ ಲಾಯಕ್ಕಾದದ್ದು. ಸರಕಾರದ ಅಧೀನ ದಲ್ಲಿರತಕ್ಕ ಬಂಜರ್ ಜಮೀನು ಬೇರೆ ಇದೆ ಎಂದರೆ, land fit for cultivation which can be brought under cultivation left uncultivated and neglected.

12-30 P.M.

Sri M. P. PATIL.—I would like to know from the Hon'ble Member how many years ago these figures were recorded.

Sri H. M. CHANNABASAPPA.—This was recorded in 1956 when Shri M. P. Patil was Revenue Minister. I invite his attention to the book "*Anki Amshagalu—1956*".

Sri M. P. PATIL.—I mean the survey has been done a number of years ago and these figures are based on that and those records are continuing from year to year.

Sri H. M. CHANNABASAPPA.—If these are not the latest figures, I have nothing to say. It only speaks of the inefficiency of the Government.

Mr. SPEAKER.—Of which the Hon'ble Member himself was once a part.

Sri H. M. CHANNABASAPPA.—I took it that it was corrected up to 1956. If it is not, I am not responsible for it. The Hon'ble Minister Shri M. P. Patil is responsible for it.

Mr. SPEAKER.—Of course, he is responsible now. ಅವಧಿ ಮುಗಿಯಿತು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಂತಹ ಮಹತ್ತರ ವಾದ ವಿಷಯದಲ್ಲಿ ನನ್ನ ಭಾಷಣ ಬೇಡ ಎಂದರೆ, I leave it to you. If you ask me to stop, I will sit down.

Mr. SPEAKER.—Don't leave any thing to me. Please adjust yourself. ಎಲ್ಲರಿಗೂ ಒಂದೇ ರೀತಿಯಾದ ನಿಯಮಗಳನ್ನು ನಾನು ಅನುಸರಿಸಬೇಕಾಗಿದೆ. ಆದ್ದರಿಂದ ದಯವಿಟ್ಟು ಸ್ವಲ್ಪ ಜಾಗ್ರತೆ ಮುಗಿಸಿದರೆ ಉತ್ತಮ.

ಶ್ರೀ ಕೆ. ವಿ. ಬೈರೆಗೌಡ (ಬೆಂಗಳೂರು ಉತ್ತರ).—ಭೂಮಿಯ ವಿಷಯ ಬಹುಮುಖ್ಯವಾದುದರಿಂದ ಮತ್ತು ಈ ಸಮಸ್ಯೆಗೆ ಸಂಬಧಪಟ್ಟ Land Reforms Committeeಯ ವರದಿಯೊಂದು ಈ ಸಭೆಯ ಮುಂದೆ ಚರ್ಚೆಗೆ ಬರತಕ್ಕದ್ದಾಗಿರುವುದರಿಂದ ಬಹಳ ಅನುಭವ ಶಾಲಿಗಳಾದ ಶ್ರೀ ಚನ್ನಬಸಪ್ಪನವರು ಆ ಬಗ್ಗೆ ಮಾತ ನಾಡುತ್ತಿರುವಾಗ ಅವರಿಗೆ ಇನ್ನಷ್ಟು ಕಾಲವನ್ನು ಕೊಡಬೇಕೆಂದು ನಾನು ಕೋರುತ್ತಿದ್ದೇನೆ.

Sri C. J. MUCKANNAPPA (Gubbi).—He is going to give us some new ideas, Sir. Yesterday we sat till 2 P.M.

ಶ್ರೀ ಹೆಚ್. ಎಂ. ಚನ್ನಬಸಪ್ಪ.—Other Fallow Land—Uncultivable Land 18,19,613 ಎಕರೆ ಅದರ ಜೊತೆಗೆ current fallow land ಎಂದರೆ. ಹಿಡುವಳಿ ಬಂಜರು ಜಮೀನು ಸಹ ಸೇರಿದೆ. ದೊಡ್ಡ ಜಮೀನುದಾರರು ಬೇಕಾದಷ್ಟು ಜಮೀನು ಗಳನ್ನು ಹಾಗೆಯೇ ಇಟ್ಟುಕೊಂಡು ಎಂದರೆ 100 ಎಕರೆ ಜಮೀನಿದ್ದರೆ ಹತ್ತು ಎಕರೆ ಸಾಗುವಳಿಮಾಡಿ ಬಾಕಿ 90 ಎಕರೆ ಜಮೀನನ್ನ ಪಾಳಾಗಿ ಇಟ್ಟುಕೊಂಡಿದ್ದಾರೆ. ಅಂತಹ ಜಮೀನು 22,11,896 ಎಕರೆ ಇದೆ. ಈ ಅಂಕಿಅಂಶಗಳನ್ನು ಒಟ್ಟು ಕೂಡಿದರೆ ಇವು ಮೂರೂ ಸೇರಿ ಸುಮಾರು 55 ಲಕ್ಷ ಎಂದರೆ, 55,95,607 ಎಕರೆ ಜಮೀನು ಎಂದರೆ ವ್ಯವಸಾಯಕ್ಕೆ ಯೋಗ್ಯವಾದುದು ಮತ್ತು ವ್ಯವಸಾಯಕ್ಕೆ ಉಪಯೋಗಿಸದೆ ಸರ್ಕಾರದ ವಶದಲ್ಲಿ ಇರತಕ್ಕದ್ದು ಮತ್ತು ಸಾರ್ವಜನಿಕರ ವಶದಲ್ಲಿ ಪಾಳು ಬಿದ್ದಿರತಕ್ಕದ್ದು. ಇದರ ಜೊತೆಗೆ ಅಮೃತ ಮಹಲ್ ಲ್ಯಾಂಡ್ಸ್ 1,65,000 ಎಕರೆ ಬಹುಉತ್ಕೃಷ್ಟ ವಾದಂಥ ಭೂಮಿಗಳು ಅಮೃತ ಮಹಲ್ ಇಲಾಖೆಯ ಲ್ಲಿವೆ. ಹೋದ ನವಂಬರಿನಲ್ಲಿಯೇ ಇದರ ಪೈಕಿ 81 ಸಾವಿರ ಎಕರೆಗಳನ್ನು ವ್ಯವಸಾಯಗಾರರಿಗೆ ಕೊಡುವು ದಕ್ಕಾಗಿ ಆರ್ಡರು ಮಾಡಿದೆ. ಅಲ್ಲಿಗೆ ಒಟ್ಟು 56 ಲಕ್ಷ ಎಕರೆ ಜಮೀನಿನ ಉತ್ಪನ್ನವನ್ನು ನಾವು ಈಗ ರೂಪಿಸಬೇಕು. Government is responsible to put all these lands to the most efficient use. ಈಗ ಸರ್ಕಾರದವರು ಈ ಬಗ್ಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

Mr. SPEAKER.—Hon'ble Member's time is up.

Sri A. BHEEMAPA NAIK (Challakere).—He was giving some valuable information, Sir. I feel that he should not be limited to ten minutes like others.

Sri V. P. DEENADAYALU NAIDU.—The Speaker has ample discretion to regulate the debate and extend the time in the case of any particular member.

Mr. SPEAKER.—Of course, I have discretion. But that does not mean that I have to use discretion in this particular case when I have not relaxed the time-limit in the case of other members. I know Shri Channabasappa's speech is very important. That is why I have given him fifteen minutes. He will get another opportunity to speak on some other occasion.

ಡಾ|| ಸರ್‌ದಾರ್ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ಕಳೆದ ಎಂಟು ದಿವಸಗಳಿಂದ ಊರಾ ಬೈಸಾ ತೆಗೆದೂ ತೆಗೆದೂ ತೊಡೆ ಗಟ್ಟಿಯಾದಮೇಲೆ ಮಾತನಾಡಲು ಟಾಯಿಂ ಸಿಕ್ಕಿತು. ನಾನು ಸುದೈವಿ. ಜಗತ್ತಿನಲ್ಲಿಯೇ ವಿಚಿತ್ರವಾದ ಗೋಳಗುಮ್ಮಟ ಇರುವುದು ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಜಗತ್ತಿನಲ್ಲಿಯೇ ವಿಚಿತ್ರವಾದ ಬರಗಾಲವು ಇದೆಯೆಂದು ವಿಷಾದದಿಂದ ಹೇಳುತ್ತೇನೆ. 56 ವರ್ಷಗಳಲ್ಲಿ 36 ಸಾರೆ ಈ ಜಿಲ್ಲೆ ಬರಗಾಲಕ್ಕೆ ತುತ್ತಾಗಿದೆ. ನಮ್ಮ ಈ ದುರ್ದೈವೀ ಬಿಜಾಪುರ ಜಿಲ್ಲೆ ಈ ಹಿಂದೆ ಮುಂಬೈ ಪ್ರಾಂತದಲ್ಲಿದ್ದಾಗ ಆ ಸರ್ಕಾರವೂ ಈ ಜಿಲ್ಲೆಯ ಬಗ್ಗೆ ಏನೂ ಮಾಡಲಿಲ್ಲ. ನಮ್ಮ ಜಿಲ್ಲೆಗೆ ಭೀಮಾ, ಕೃಷ್ಣ, ಘಟಪ್ರಭಾ, ಮಲಪ್ರಭಾ ಹೀಗೆ ನಾಲ್ಕು ನದಿಗಳೂ ಮತ್ತು ಒಂದು ಡೋಣಿ ಹಳ್ಳವೂ ಇದೆ. ಇಡೀ ಹಿಂದೂಸ್ತಾನದಲ್ಲೇ ಪಂಜಾಬ ಒಂದನ್ನು ಬಿಟ್ಟರೆ ಇಂತಹ ನಿಸರ್ಗದತ್ತ ನೀರಿನ ಸಂಪರ್ಕವುಳ್ಳ ಪ್ರದೇಶವು ಮತ್ತೆ ಎಲ್ಲಿಯೂ ಇಲ್ಲ. ಮುಂಬೈ ಪ್ರಾಂತದ ಮಂತ್ರಿಗಳು ಒಮ್ಮೆ ನಮ್ಮ ಜಿಲ್ಲೆಗೆ ಸಂಚಾರ ಬಂದಾಗ್ಗೆ "ಅಯ್ಯೋ, ಬಿಜಾಪುರ ಜಿಲ್ಲೆಯ ಜನರನ್ನು—ನೀವು ದುರ್ದೈವಿಗಳು ಇಷ್ಟೆಲ್ಲ ನದಿಗಳೂ ಹಳ್ಳಗಳೂ ಇಲ್ಲಿ ಇದ್ದರೂ ಯಾವ ನೀರಾವರೀ ಕಾರ್ಯಗಳಾಗದೆ ಇದ್ದುದಕ್ಕೆ ನೀವು ದುರ್ದೈವಿಗಳು" ಎಂದು ಹೇಳುತ್ತ ಇದ್ದರು. ಅವರ ಭಾಷಣವೂ ಒಂದು ರೀತಿ ವಿಚಿತ್ರವಾಗಿಯೇ ಇತ್ತು. ನದಿಗಳು ಹಳ್ಳಗಳು ತಾವೇ ಹರಿದು ಬಂದು ನಮ್ಮ ನಮ್ಮ ಹೊಲಗಳಲ್ಲಿ ನೆಲವನ್ನು ಉತ್ತು ಬಿತ್ತಿ ಬೆಳೆ ಕೊಡಬೇಕೇ? ಈ ತರಹದ ಮಾತುಗಳು ಮುಂಬೈ ಪ್ರಾಂತದ ಮಂತ್ರಿಗಳವರದು. ಅದರಂತೆ ನಮ್ಮ ಕರ್ನಾಟಕದ ರಾಜ್ಯದ ಮಂತ್ರಿಗಳು ಮಾಡಬಾರದಾಗಿ ನಾನು ಹೇಳುತ್ತೇನೆ. 1901ನೆಯ ಇಸವಿಯಲ್ಲಿ ಡ್ರೂವ್ ಎನ್ನುವ ಕಲೆಕ್ಟರ ಇದ್ದ ಕಾಲದಿಂದಲೂ ಈ ನೀರಾವರಿ ಯೋಜನೆಯ ಬಗ್ಗೆ ಹಾಗೆ ಬರೇ ಮಾತನಾಡುತ್ತ ಬಂದಿದ್ದಾರೆಯೇ ಹೊರತು ಯಾವುದನ್ನೂ ಕಾರ್ಯರೂಪದಲ್ಲಿ ತಂದಿಲ್ಲ.

ಮಾನ್ಯ ಮಂತ್ರಿಗಳವರು ಪ್ರವಾಸ ಮಾಡಿ ನೋಡಿ ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು ನದಿಗಳಿವೆ ಮತ್ತು ಒಂದು ಡೋಣಿಹಳ್ಳ ಬೇರೆ ಇದೆ. ಇಷ್ಟಾದರೂ ಬರಗಾಲದಿಂದ ತೊಂದರೆಪಡುತ್ತಿದ್ದಿರಿ, ನೀವು ದುರ್ದೈವಿಗಳು ಎಂದು ಸುಮ್ಮನೆ ಹೇಳಿದರೇನು ಪ್ರಯೋಜನ? ಬರಬರನೆ ಹರಿದು ಹೋಗುತ್ತಿರುವ ನದಿಗಳ ನೀರನ್ನು ನಾವು ತೆಗೆದುಕೊಂಡು ಬಂದು ನಿಮ್ಮ ಭೂಮಿಗೆ ಹಾಕುವುದಕ್ಕಾಗುತ್ತದೆಯೇ ಎಂದು ಕೇಳಬಹುದು. ಜನರು ಹಾಗೆ ಕೇಳುತ್ತಿದ್ದಾರೆಯೆ? ನಾನು ವಿಧಾನ ಸಭೆಯ ಸದಸ್ಯನಾಗಿ ಚುನಾಯಿತನಾಗಿ ಬಂದು ಮಾನ್ಯ ಮಂತ್ರಿಗಳ ಮುಂದೆ ನಮ್ಮ ಜನರ ಕಷ್ಟಗಳನ್ನು ತೋಡಿಕೊಳ್ಳುತ್ತಿದ್ದೇನೆ. ಮಾನ್ಯ ಎಂ. ಪಿ. ಪಾಟೀಲ್‌ರವರೂ, ನಿಜಲಿಂಗಪ್ಪನವರೂ ನಮ್ಮ ಕಡೆ ಬಂದು ನೋಡಿದ್ದಾರೆ. ಇನ್ನಿತರ ಮಂತ್ರಿಗಳು ಅಲ್ಲಿಗೆ ಬಂದಿಲ್ಲ. ಅವರೂ ಅಲ್ಲಿಗೆ ಬಂದು ಅಲ್ಲಿನ ನಮ್ಮ ಕಷ್ಟ ಪರಿಸ್ಥಿತಿಯನ್ನು ನೋಡಿಕೊಂಡು ಬರಬೇಕೆಂದು ನಾನು ಅವರನ್ನು ಆಹ್ವಾನಿಸುತ್ತೇನೆ. ಮೂವತ್ತು ಸಾವಿರ ರೂಪಾಯಿನ ಕಾರುಗಳೇಕೆ ಮಂತ್ರಿಗಳಿಗೆ ಎಂದು ನಾನೇ ಟೀಕೆ ಮಾಡಿದ್ದೇನೆ. ಆ ಜಿಲ್ಲೆಗೆ ಬಂದು ನೋಡಿದರೆ, ಮತ್ತೊಮ್ಮೆ ಅಲ್ಲಿ ಬರುವುದಕ್ಕೆ ಮನಸ್ಸು ಬರುವುದಿಲ್ಲ. ಅದು ನೋಡತಕ್ಕ ಪ್ರದೇಶವೇನೋ ಹೌದು. ಫಲವತ್ತಾದ ಭೂಮಿ, ನೀರು, ನಿಸರ್ಗಸಂಪತ್ತು ಇಡೀ ಕರ್ಣಾಟಕದಲ್ಲಿ ಬೇರೆ ಕಡೆ ಇನ್ನೆಲ್ಲಿಯೂ ಇಲ್ಲದೆ ಇರುವಷ್ಟು ಬೀಜಾಪುರದ ಜಿಲ್ಲೆಯಲ್ಲಿದೆ. ನಮ್ಮ ಕಡೆ ಜೋಳ, ಗೋದಿ ಮುಂತಾದವನ್ನು ನೋಡಿದರೆ ಇನ್ನೇನು ಅಡಿಗೆ ಮಾಡಬೇಕಾದ ಅವಶ್ಯಕತೆಯೇ ಇಲ್ಲ ಎನಿಸುತ್ತದೆ ಮತ್ತು ಇಂಥ ಫಲವತ್ತಾದ ನಿಸರ್ಗ ಸಂಪತ್ತಿನಿಂದ ತುಂಬಿದ ಭೂಮಿ ಇರುವಾಗ ಅಲ್ಲಿನ ಬಡ ರೈತರು ನಿಜವಾಗಿಯೂ ನಿರ್ಭಾಗ್ಯರೆಂದು ಮಾನ್ಯ ಮಂತ್ರಿಗಳಿಗೆ ಖಾತ್ರಿಯಾಗಿ ದುಃಖವಾಗುತ್ತದೆ, ಕೆಟ್ಟ ಅನಿಸುತ್ತದೆ. ಆದರೂ ಕೂಡ ಬಿಜಾಪುರ ಜಿಲ್ಲೆ ನಿರಂತರವಾದ ಬರಗಾಲಕ್ಕೆ ಈಡಾಗುತ್ತಿದೆ. 1901ರಷ್ಟು ಹಿಂದೆಯೇ ಇದರ ನಿವಾರಣೆಗೆ ಒಂದು ಯೋಜನೆ ಮಾಡಿದ್ದರು. ಆಗಿನ ಕಾಲದ ಸರ್ಕಾರ ಅದನ್ನು ಕಾರ್ಯಗತ ಮಾಡಲಿಲ್ಲ. ಅಲ್ಲಿಂದ ಇಲ್ಲಿಯವರೆಗೂ ಬರ ಬರ ಬರವೇ ಆಗಿದೆ. ಅಲ್ಲಿ ಹುಟ್ಟಿದ ಕೂಸುಗಳೂ ಹುಟ್ಟುವಾಗಲೇ ಬರ ಬರ ಎಂದು ಹೇಳಿಕೊಂಡು ಹುಟ್ಟುವ ಸ್ಥಿತಿ ಬಂದಿವೆ. ಆದುದರಿಂದ ಮಂತ್ರಿಗಳು ಬಿಜಾಪುರ ಜಿಲ್ಲೆಗೆ ಸಾಕಷ್ಟು ಗಮನ ಕೊಡಬೇಕು. ಹೋದ ವರ್ಷ ಅಳತೆ ತಪ್ಪಿ ಮಳೆಯಾಗಿ ನಮ್ಮಲ್ಲಿ ಯಾವ ಬೆಳೆಯೂ ಆಗಲಿಲ್ಲ. ಏಳು ಲಕ್ಷ ರೂಪಾಯಿಗಳನ್ನು ಬಿಜಾಪುರ ಜಿಲ್ಲೆಗೆ ಬರಗಾಲದ ಕೆಲಸಗಳಿಗಾಗಿ ಸರ್ಕಾರ ಕೊಟ್ಟಿದ್ದಾರೆ. ಇದಕ್ಕೆ ಅಲ್ಲಿನ ಪ್ರಜೆಗಳ ಪರವಾಗಿ ಧನ್ಯವಾದಗಳನ್ನರ್ಪಿಸುತ್ತಿದ್ದೇನೆ. ಆದರೂ ಈ ರೀತಿ ಎಂಟು ಹತ್ತು ಲಕ್ಷ ರೂಪಾಯಿಗಳನ್ನು ವರ್ಷಗಳಿಗೊಮ್ಮೆ ಪರಿಹಾರ ಕೊಟ್ಟರೆ ಶಾಶ್ವತವಾದ ಕೆಲಸ ಮಾಡಿದ ಹಾಗಾಗುವುದಿಲ್ಲ.

ಒಂದು ದುರ್ದೈವದ ಸಂಗತಿಯನ್ನು ಹೇಳಬೇಕಾಗಿದೆ. ಈ ಜಿಲ್ಲೆಯಲ್ಲಿ ಯಾವ ರೈತನಿಗೂ ತನ್ನ ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಅಥವಾ ಪಟ್ಟಣಕ್ಕೆ ಹೋಗುವುದಕ್ಕೆ ರಸ್ತೆಗಳ ಅನುಕೂಲವಿಲ್ಲ, ಯೋಗ್ಯ ರೀತಿಯಲ್ಲಿ ರಸ್ತೆಗಳ ನಿರ್ಮಾಣವಾಗಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಕೆಲವು ಪ್ರಭಾವಶಾಲಿಗಳಿರುವ ಕಡೆ ಮಾತ್ರ ಅವರ ಹೊಲಮನೆಗಳಿಗೆ ಹೋಗುವುದಕ್ಕೆ ಅವರ ಸಂಬಂಧೀಕರ ಊರುಗಳಿಗೆ ಹೋಗುವುದಕ್ಕೆ, ಅವರ

ಅಪ್ಪರ ಊರುಗಳಿಗೆ ಹೋಗುವುದಕ್ಕೆ ರಸ್ತೆಗಳನ್ನು ಮಾಡಲಾಗುತ್ತಿದೆ. ಬೇಕಾದರೆ ಈ ಬಗ್ಗೆ ಅವರ ಹೆಸರುಗಳನ್ನೂ ರಸ್ತೆಗಳ ಹೆಸರುಗಳನ್ನೂ ಕೊಡುತ್ತೇನೆ. ಇದೇ ರೀತಿಯಾಗಿ ರಸ್ತೆಗಳ ಅನುಕೂಲ ಬೇರೆಯವರಿಗೆ ದೊರಕುತ್ತಿಲ್ಲ. ಮುಂದಾದರೂ ಹೀಗಾಗುವುದಕ್ಕವಕಾಶವಾಗದಂತೆ ಸರ್ಕಾರ ಲಕ್ಷ್ಯಕೊಡಬೇಕು. ನಮ್ಮದು ರೈತರ ರಾಜ್ಯ, ರಾಮರಾಜ್ಯವೆಂದು ಹೇಳುತ್ತಿದ್ದಾರೆ. ಈ ರೈತರಿಗಾಗುತ್ತಿರುವ ಅನ್ಯಾಯವನ್ನು ನೋಡಿ ಸ್ವರ್ಗದಲ್ಲಿರುವ ಮಹಾತ್ಮ ಗಾಂಧಿಯವರಿಗೂ ಕಣ್ಣು ಉರಿಯುತ್ತಿದೆಯೆಂದು ಕಾಣುತ್ತದೆ. ರೈತರು ಸುಖವಾಗಿದ್ದರೆ ಮಹಾತ್ಮ ಗಾಂಧಿಯವರಿಗೂ ಸುಖವೆಂದು ತಿಳಿಯಬೇಕು. ಈರೀತಿ ಮಾತನಾಡಿದೆನೆಂದು ಅನ್ಯಥಾ ಭಾವಿಸಬಾರದು. ನಾವು ಮಾತನಾಡುವುದರಲ್ಲಿ ಲೋಪದೋಷಗಳಿದ್ದರೆ ಅದನ್ನು ಸರಿಮಾಡಿಕೊಳ್ಳಿ, ಸರಿಯಾದ ಭಾವನೆಯಿಂದ ತೆಗೆದುಕೊಳ್ಳಿ. ಮೊನ್ನೆ ನಾನು ಕೃಷ್ಣರಾಜಸಾಗರದ ವಿಚಾರದಲ್ಲಿ ಪ್ರಶ್ನೆ ಕೇಳುತ್ತಾ 53 ಲಕ್ಷ ರೂಪಾಯಿ ಉತ್ಪತ್ತಿ, 56 ಲಕ್ಷ ರೂಪಾಯಿ ಖರ್ಚಾಗಿರಲು ಕಾರಣವೇನೆಂದು ಕೇಳಿದುದಕ್ಕೆ ಶ್ರೀಮಾನ್ ವೀರಣ್ಣಗೌಡರು, ''ಸರಿಯಾಗಿ ಓದಿಕೊಂಡು ಮಾತನಾಡಿ'' ಎಂದು ಹೇಳಿದರು. ಇದು ಸರ್ಕಾರದವರು ನಮಗೆ ಮುದ್ರಣ ಮಾಡಿಸಿಕೊಟ್ಟಿರುವ ಪುಸ್ತಕದಲ್ಲೇ ಇದೆ. ಅದನ್ನೇ ನಾನು ಹೇಳುತ್ತಿರುವುದು. ಮಂತ್ರಿಗಳಿಗೆ ಇದು ಗೊತ್ತಾಗದೆ ಹೋದರೆ ತಿಳಿಯದಿದ್ದರೆ ಅವರ ಕಾರ್ಯದರ್ಶಿಗಳನ್ನಾದರೂ ಕೇಳಿಕೊಂಡು ಬರಲಿ ಎಂದು ನಾನು ಹೇಳಬೇಕಾಗಿದೆ. ನಾವು ಮಾತನಾಡುವುದರಲ್ಲಿ ಏನಾದರೂ ಸರಿಯಾಗಿಲ್ಲದೇ ಹೋದರೆ ಯೋಗ್ಯ ಸಲಹೆ ಕೊಡಬಹುದೇ ವಿನಾ ಹಾಗೆ ಹೇಳಬಾರದು.

ಶ್ರೀಮಾನ್ ಎಚ್. ಜಿ. ನರಸಿಂಹೇಗೌಡರು ಬಿಜಾಪುರ ಜಿಲ್ಲೆಗೆ ಹೆಚ್ಚು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆಂದು ಹೇಳಿದರು. ಪಾಪ ಅವರಿಗೆ ವಿಷಯ ಸರಿಯಾಗಿ ಗೊತ್ತಿಲ್ಲ! ಇಬ್ಬರು ತಪಸ್ಸಿಗೆ ಕುಳಿತುಕೊಂಡರಂತೆ—ಆಗ ಅವರು ದೇವರನ್ನು ಕುರಿತು ಕುಳಿತರು, ಆದರೆ ಈಗ ಮಾನ್ಯ ಮಂತ್ರಿಗಳನ್ನು ಕುರಿತು ಕುಳಿತುಕೊಳ್ಳಬೇಕಾಗಿದೆ—ತಪಸ್ಸು ಮಾಡಿ ಮಂತ್ರಿಗಳನ್ನು ಪ್ರತ್ಯಕ್ಷ ಮಾಡಿಕೊಂಡರು. ಮಂತ್ರಿಗಳು ''ಮೊದಲು ಯಾರು ಕೇಳುತ್ತೀರಿ ಅವರಿಗೆ ಒಂದು ವರ ಕೊಡುತ್ತೇನೆ, ಎರಡನೆಯ ಸಾರಿ ಕೇಳಿದವರಿಗೆ ಎರಡರಷ್ಟು ಕೊಡುತ್ತೇನೆ'' ಎಂದು ಹೇಳಿದರಂತೆ. ಮೊದಲು ಅವನೇ ಕೇಳಿಕೊಳ್ಳಲೆಂದು ಇವನು, ಇವನು ಮೊದಲು ಕೇಳಿಕೊಳ್ಳಲೆಂದು ಅವನು ಹೀಗೆ ಇಬ್ಬರು ಸ್ವಲ್ಪ ಹೊತ್ತು ಸುಮ್ಮನೆ ಕುಳಿತರು. ಆಮೇಲೆ ಒಬ್ಬನಿಗೆ ಕೋಪ ಬಂದು ನಾನೇ ಕೇಳಿಕೊಳ್ಳೋಣವೆಂದು ಮನಸ್ಸು ಮಾಡಿ, ನನಗೆ ಒಂದು ಕಣ್ಣನ್ನು ಕಳೆಯಿರಿ ಎಂದು ಕೇಳಿದನಂತೆ! ಅವರು ಹೇಳಿದ್ದೂ ಆ ರೀತಿಯಾಯಿತು. ಆದುದರಿಂದ ಅಲ್ಲಿಗೆ ಅಷ್ಟು ಕೊಟ್ಟಿದ್ದೀರಿ, ಇಷ್ಟು ಕೊಟ್ಟಿದ್ದೀರಿ ಎಂದು ಹೇಳುವುದು ಸರಿಯಲ್ಲ. ನಿಜವಾಗಿ ಸರ್ಕಾರ ಅನ್ಯಾಯವಾಗಿ ಏನೂ ಕೊಟ್ಟಿಲ್ಲ. ಬಿಜಾಪುರಕ್ಕೆ ಕೊಟ್ಟಿರುವಹಾಗೆ ಬೇರೆ ಕಡೆಯೂ ಬರಗಾಲ ಎಲ್ಲಿದೆಯೋ ಅಲ್ಲಿಗೂ ಕೊಟ್ಟಿದ್ದಾರೆ. ಅಲ್ಲಿನ ಸ್ಥಿತಿಯನ್ನು ಅವರು ನೋಡದೇ ತಪ್ಪು ಕಲ್ಪನೆಯಿಂದ ಹಾಗೆ ಹೇಳಿದ್ದಾರೆಯೇ ಹೊರತು ಬೇರೆಯಲ್ಲ. ಅಲ್ಲಿನ ಬರಗಾಲದ ಸ್ಥಿತಿಯಲ್ಲಿ ಜನರು ಅದರಲ್ಲಿಯೂ ಹೆಣ್ಣುಮಕ್ಕಳು ಪಡುವ ಕಷ್ಟವನ್ನು ನೋಡಿದರೆ ಕಲ್ಲುಕೂಡ ಕರಗಿಹೋಗುತ್ತದೆ. ಬಿಜಾಪುರಜಿಲ್ಲೆ ಬಹಳ ಪ್ರಸಿದ್ಧವಾದ ಸ್ಥಳ. ಇಡೀ ಭಾರತಕ್ಕೇ, ಏಕೆ ಜಗತ್ತಿನಲ್ಲೇ ಪ್ರಸಿದ್ಧವಾದ ಸೀರೆಯನ್ನು ನಮ್ಮ ಜಿಲ್ಲೆಯಲ್ಲಿ ಇಳಕಲ್‌ನಲ್ಲಿ ನೇಕಾರರು ತಯಾರಿಸುತ್ತಾರೆ. ಇಂಥಾ ಸೀರೆಗಳನ್ನು ತಯಾರು ಮಾಡುವ ಜನ ಬರಗಾಲಕ್ಕೆ ಬಲಿಯಾಗುತ್ತಿದ್ದಾರೆ. ಇಂಥ ಬಿಜಾಪುರ ಜಿಲ್ಲೆಯ ಬಗ್ಗೆ ಸರ್ಕಾರ ವಿಶೇಷ ಲಕ್ಷ್ಯ ಕೊಡಬೇಕು. ಮಾನ್ಯ ಅಧ್ಯಕ್ಷರೂ ಹಾಗೂ ನಾನೂ ಕೂಡ ಬರಗಾಲಕ್ಕೆ ಪ್ರಸಿದ್ಧವಾದ ಆ ಪ್ರದೇಶದಲ್ಲಿ ಪ್ರಸಿದ್ಧವಾದ ಮನೆತನದಲ್ಲಿ ಜನ್ಮ ಹೊತ್ತಿದ್ದೇವೆ. ಅಲ್ಲಿನ ಜನರ ಪರಿಸ್ಥಿತಿಯನ್ನು ನಮ್ಮ ಮಾನ್ಯ ಅಧ್ಯಕ್ಷರು ಚೆನ್ನಾಗಿ ಅರಿತಿದ್ದಾರೆ. ಅವರ ಕಷ್ಟವನ್ನು ಕೇಳುವವರೇ ಇಲ್ಲ. ಆದುದರಿಂದ ನಾನು ಕಳವಳದಿಂದ ಮಾತನಾಡುತ್ತಿದ್ದೇನೆ. ಪತ್ರಿಕೆಗಳಲ್ಲಿ ನನ್ನ ಹೆಸರು ಬರಬೇಕೆಂದು ನಾನು ಮಾತನಾಡುತ್ತಿಲ್ಲ. ನನ್ನನ್ನು ಆರಿಸಿ ಇಲ್ಲಿಗೆ ಕಳುಹಿಸಿದ ಜನರು ಕೇಳಿದರೆ, ಅವರ ಕಷ್ಟವನ್ನು ಮಂತ್ರಿಗಳ ಮುಂದೆ ಇಟ್ಟಿದ್ದೇನೆಂದು ಹೇಳಲು ಮಾತನಾಡುತ್ತಿದ್ದೇನೆ. ನಮ್ಮ ರಾಮರಾಜ್ಯದ ಮಂತ್ರಿಗಳು ನಮಗೆ ಉಪಕಾರ ಮಾಡುತ್ತಾರೆಂದು ನಂಬಿದ್ದೇನೆ. ಇನ್ನು ಹೆಚ್ಚು ಹೇಳಲು ಕಾಲಾವಕಾಶವಿಲ್ಲ.

ಅಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮೇಲೆ ನಮಗೆ ಮಾತನಾಡಲು ಹತ್ತು ನಿಮಿಷವೆಂದು ಗೊತ್ತು ಮಾಡದೆ ಹೆಚ್ಚು ಕಾಲವನ್ನು ಕೊಡುವಂತೆ ಅವರಿಗೆ ಸದ್ಬುದ್ಧಿಯನ್ನು ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಹೀಗೆ ಹತ್ತು ನಿಮಿಷ ಮಾತ್ರ ಕೊಟ್ಟರೆ ವರದಿಗಾರರು ಬರೆದುಕೊಳ್ಳುವುದಕ್ಕೂ ಆಗುವುದಿಲ್ಲ, ಕೇಳುವವರಿಗೂ ಸರಿಯಾಗಿ ಮನದಟ್ಟಾಗುವುದಿಲ್ಲ. ಈ ದೃಷ್ಟಿಯಿಂದ ಮುಂದಾದರೂ ಹೆಚ್ಚು ಕಾಲ ಕೊಡಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ. ನನ್ನ ಪರವಾಗಿಯೂ ಬೇರೆಯವರ ಪರವಾಗಿಯೂ ಹೀಗೆ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಐದು ಬೇಡಿಕೆಗಳಿಗೂ ನನ್ನ ಅನುಮತಿಯನ್ನು ಕೊಡುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿಚ್ಛಿಸುತ್ತೇನೆ. ಸ್ವಾಮಿ, ಮೊನ್ನೆಯ ದಿವಸ 'ಜನರಲ್ ಅಡ್ಮಿನಿಸ್ಟ್ರೇಷನ್' ಬೇಡಿಕೆಯ ಬಗ್ಗೆ ಉತ್ತರ ಕೊಡುತ್ತಾ ಅನೇಕ ಸದಸ್ಯರು ಒತ್ತಾಯ ಮಾಡಿದ ಮೇಲೆ ಡಿವಿಜನಲ್ ಕಮೀಷನರ ಕಚೇರಿ ಇನ್ನ ಆರು ತಿಂಗಳು ಅಥವ ಒಂದು ವರ್ಷ ಹೇಗೆ ಕೆಲಸ ಮಾಡುತ್ತದೆಂಬುದನ್ನು ನೋಡಿ ಆಮೇಲೆ ಹೇಳುತ್ತೇನೆಂದು ಹೇಳಿದರು. ಈಗ ಡಿವಿಜನಲ್ ಆಫೀಸುಗಳಿಗೆ ಬೇಕಾದಷ್ಟು ಹಣವನ್ನು ಒದಗಿಸಲಾಗಿದೆ. ಇದನ್ನು ತೆಗೆದುಹಾಕಿ ಇದೇ ಹಣವನ್ನು ಹಳ್ಳಿಗಳಲ್ಲಿ ರಸ್ತೆಗಳಿಗೆ, ಬಾವಿಗಳಿಗೆ ಉಪಯೋಗಿಸಿದರೆ ಅಲ್ಲಿನ ಜನರಿಗೆ ಎಷ್ಟೋ ಉಪಕಾರವಾಗುತ್ತದೆ, ರೈತರಿಗೆ ಎಷ್ಟೋ ಅನುಕೂಲವಾಗುತ್ತದೆ. ನಾಲ್ಕು ಡಿಸ್ಟ್ರಿಕ್ಟುಗಳನ್ನು ಸೇರಿಸಿ ಒಂದು ಡಿವಿಜನ್ ಮಾಡಿದರೆ, ಒಂದು ಕಾಗದ ಡಿವಿಜನ್ ಆಫೀಸಿಗೆ ಹೋದರೆ, ರೈತ ಎಷ್ಟು ದೂರಹೋಗಬೇಕೆಂಬುದನ್ನು ಯೋಚಿಸಬೇಕು. ಆದಷ್ಟು ಬೇಗ ಈ ಡಿವಿಜನ್ ಆಫೀಸುಗಳನ್ನು ರದ್ದುಮಾಡುವುದಕ್ಕೆ ಏರ್ಪಾಡುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ರೆವಿನ್ಯೂ ಆಡಳಿತದ ವಿಚಾರದಲ್ಲ ಹೇಳುವುದಾದರೆ, ತಾಲ್ಲೂಕು ಕಚೇರಿಗಳಲ್ಲಿ ಬಹಳ ನಿಧಾನವಾಗಿ ಕೆಲಸ ನಡೆಯುತ್ತಿದೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಂಸ್ಥಾನಕ್ಕೆ ಹೊಸದಾಗಿ ಬಂದಿದ್ದಾರೆ. ಅವರು ತಾಲ್ಲೂಕು ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟು ತನಿಖೆಮಾಡಬೇಕು. ಅನೇಕ ಕಚೇರಿಗಳಲ್ಲಿ ಹೊಸಬರನ್ನು ನೇಮಕಮಾಡಿಕೊಂಡಿದ್ದಾರೆ, ಅವರಿಗೆ ರಿಕಾರ್ಡುಗಳನ್ನು ನೋಡುವುದಕ್ಕೇ ಬರುವುದಿಲ್ಲ. ಅದರಲ್ಲಿರುವ ವಿಷಯಗಳನ್ನು ನೋಡಿ 'ನೋಟ್' ಹಾಕುವುದಕ್ಕೂ

(ಶ್ರೀ ಡಿ. ಎಚ್. ರುದ್ರಪ್ಪ)

ಬರುವುದಿಲ್ಲ. ದರಖಾಸ್ತುಗಳು ತೀರ್ಮಾನವಾಗಲು ಬಹಳ ತಡವಾಗುತ್ತಿದೆ. ಅವು ಬಂದು ಎಷ್ಟೆಷ್ಟು ದಿವಸವಾಗಿದೆಯೆಂಬುದನ್ನು ನೋಡಿ ಜಾಗ್ರತೆ ತೀರ್ಮಾನವಾಗಲು ಸೂಕ್ತಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಒಂದು ಪತ್ರ ರಿಜಿಸ್ಟ್ರಾದ ಕೂಡಲೆ ಆ ಜಮೀನನ್ನು ಪೋಡುಮಾಡಿ ಅದಕ್ಕೆ ಬೇರೆ ನಂಬರ್ ಇತ್ಯಾದಿಕೊಡುವಂತೆ ಸರ್ಕಾರ ಒಂದು ಹೊಸ ಕಾನೂನನ್ನಾದರೂ ಜಾರಿಗೆ ತಂದು ರೈತರಿಗೆ ಅನುಕೂಲಮಾಡಿಕೊಡಬೇಕೆಂದು ಹೇಳುತ್ತೇನೆ. ಎಷ್ಟೋ ಕಡೆಗಳಲ್ಲಿ ಪೋಡೀ ಫೀಜನ್ನು ಕೊಟ್ಟಿದ್ದರೂ ಇನ್ನೂ ಖಾತೆ ಬದಲಾವಣೆ ಆಗದೆ ಆ ಹಳೆಯ ಖಾತೆಗಳಲ್ಲೇ ಆಸ್ತಿಗಳಿರುತ್ತವೆ. ಉದಾಹರಣೆಗೆ ನಮ್ಮ ಹಳೆಯ ಮೈಸೂರಿನ ತಾಲ್ಲೂಕುಗಳಿಗೆಲ್ಲಾ ನಮ್ಮ ಕಡೂರು ತಾಲ್ಲೂಕು ವಿಸ್ತೀರ್ಣದಲ್ಲಿ ಬಹಳ ದೊಡ್ಡದು; ರೆವಿನ್ಯೂ ಉತ್ಪತ್ತಿಯಲ್ಲಿ ಆರನೆಯ ತಾಲ್ಲೂಕಾಗಿದೆ. ಇಂಥ ಒಂದು ತಾಲ್ಲೂಕಿಗೆ ಈ ಬಾಬಿಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಯಾವಾಗಲಾದರೊಂದು ದಫ ಅನಿರೀಕ್ಷಿತ ಭೇಟಿಯನ್ನು ಕೊಟ್ಟು ಕಛೇರಿಗಳ ಇನ್‌ಸ್ಪೆಕ್ಷನ್ ಮಾಡಿದರೆ ಆಗ ಆ ರೈತರಿಗೆಷ್ಟು ತೊಂದರೆಯಾಗುತ್ತಿರಬಹುದೆಂಬ ಅಂಶ ಅವರ ಅವಗಾಹನೆಗೆ ಬಂದೀತು; ಅದರ ಪರಿಣಾಮ ಈ ದಿವಸ ಏನಾಗಿದೆ ಎಂಬುದು ತಮಗೇ ಗೊತ್ತಾಗುತ್ತದೆ. ಈ ಹಿಂದೆ ಈ ಜಮೀನ್‌ವಿಲೇವಾರಿಯ ಬಗ್ಗೆ ಸರ್ಕಾರದವರೊಂದು ಆರ್ಡರನ್ನು ಮಾಡಿದರು. ಆ ಆರ್ಡರ್ ಪ್ರಕಾರ ಜಮೀನನ್ನು ಈ ಪೊಲಿಟಿಕಲ್-ಸಫರರ್ಸ್‌ಗಳಿಗೂ ಮತ್ತು ಇನಾಂತಿ ಜಮೀನುಗಳ ಬಗ್ಗೆಯೂ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ತಿಳಿಸಲಾಗಿದ್ದಿತೋ ಆ ಪ್ರಕಾರ ನಡೆಸುತ್ತಿದ್ದರು. ಆದರೆ ಈ ದಿವಸ ಹಾಗಿಲ್ಲ. ಸರ್ಕಾರದವರು ಆರ್ಡರುಗಳನ್ನೇನೋ ಹೊರಡಿಸಿಬಿಡುತ್ತಾರೆ. ಆದರೆ ಅದಕ್ಕನುಸಾರವಾಗಿ ಕೆಲಸಗಳನ್ನು ನಡೆಸುವುದಿಲ್ಲ. ಆದ್ದರಿಂದ ಸರ್ಕಾರದವರು ತಾವೇನು ಆರ್ಡರುಗಳನ್ನು ಒಂದಾವರ್ತಿ ಹೊರಡಿಸುವರೋ ಅದಕ್ಕೆ ಅನುಸರಿಸಿ ಅವರು ನಡೆದುಕೊಳ್ಳಲೇ ಬೇಕು; ಅದರಂತೆ ಅವರು ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳಲೇಬೇಕು. ಏತಕ್ಕೆಂದರೆ ದೇಶದಲ್ಲಿ ಜನರು, ಸರ್ಕಾರ ಏನು ಆಜ್ಞೆ ಹೊರಡಿಸುತ್ತಾರೋ ಅದರಿಂದ ಮುಂದೇನು ಬದಲಾವಣೆಗಳಾಗುತ್ತವೆಯೋ ಎನ್ನುವುದನ್ನೇ ಕಾದು ಎದುರು ನೋಡುತ್ತಿರುತ್ತಾರೆ. ಆದ್ದರಿಂದ ಸರ್ಕಾರದವರು ತಾವು ಹೊರಡಿಸುವ ಆಜ್ಞೆಗಳು ಸರಿಯಾಗಿ ಪರಿಪಾಲನೆ ಮಾಡಲ್ಪಡುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಹಾಗೆ ಮಾಡದಿದ್ದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಮತ್ತು ಸರ್ಕಾರಕ್ಕೂ ಹೆಸರು ಉಳಿಯುವುದಿಲ್ಲ. ಆದಕಾರಣ ಸರ್ಕಾರದವರು ಏನಾದರೂ ಒಂದು ಆರ್ಡರನ್ನು ಮಾಡಿದರೆ ಅದಕ್ಕನುಸಾರವಾಗಿ ಅವರು ಅದನ್ನು ಜಾರಿಗೆ ತರಬೇಕಾದದ್ದು ಅವರ ಕರ್ತವ್ಯ. ಈ ವಿಚಾರಕ್ಕೆ ತಾವು ಮುಖ್ಯ ಗಮನ ಕೊಡಬೇಕೆಂದು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ. ಈ ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರು ಈ ಸಭೆಯಲ್ಲೇ ಮಾತನಾಡುತ್ತ ಕೆಲವು ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಟ್ಟ ರಸ್ತೆಗಳನ್ನು ಸರ್ಕಾರದವರು ತಮ್ಮ ಕಡೆಗೆ ತೆಗೆದುಕೊಳ್ಳತಕ್ಕ ವಿಚಾರವಾಗಿ 250 ಮೈಲಿಗಳಷ್ಟು ರಸ್ತೆಕೆಲಸವನ್ನು ಸರ್ಕಾರದವರು ಕೈಗೊಳ್ಳುವುದಾಗಿ ತಿಳಿಸಿದ್ದರೆಂದೂ, ಆದರೆ ಆರ್ಥಿಕ ಮುಗ್ಗಟ್ಟಿನಿಂದ ಆ ರಿಪೇರಿ ಕಾರ್ಯಗಳನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡಲಾಗಿದೆ ಎಂದೂ ಹೇಳುತ್ತಿದ್ದರು. ಅವರು ಹಾಗೆ ಹೇಳುತ್ತಿದ್ದುದನ್ನು ನೋಡಿ ನನಗೇ ಬಹಳ ವ್ಯಸನವಾಯಿತು. ಮಂತ್ರಿಗಳಾದವರು ಎಂದೂ ಆ ರೀತಿ ಉತ್ತರ ಕೊಡಬಾರದು. ಆ ರೀತಿ ಸರ್ಕಾರದವರೊಂದು ತೀರ್ಮಾನಕ್ಕೆ ಬಂದು ಆ ಬಗ್ಗೆ ಒಂದು ಆರ್ಡರನ್ನು ಹೊರಡಿಸತಕ್ಕ ಕಾಲದಲ್ಲಿ ಸರ್ಕಾರದವರ ಆರ್ಥಿಕ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎನ್ನುವುದನ್ನು ಪರಿಗಣಿಸದೆ ಅವರೆಂದೂ ಅಂಥ ಒಂದು ಆರ್ಡರನ್ನು ಖಂಡಿತ ಹೊರಡಿಸಬಾರದು. ಹಾಗೊಂದುವೇಳೆ ಅವರು ಆರ್ಡರನ್ನು ಹೊರಡಿಸಿಬಿಟ್ಟರೆ ಅದಕ್ಕೆ ಅವರು ಕಟ್ಟುಬಿದ್ದು ಕೆಲಸನಡೆಸಲೇಬೇಕು. ಹಣವಿದೆಯೋ ಇಲ್ಲವೋ ಅದು ಪ್ರಾಮುಖ್ಯವಲ್ಲ. ಆ ರೀತಿ ಆರ್ಡರನ್ನು ಹೊರಡಿಸಿ-ಅದಕ್ಕೆ ಸರ್ಕಾರದವರೇ ಕಟ್ಟು ಬೀಳದೆ ಹೋದರೆ ಮುಂದೆ ಸಾರ್ವಜನಿಕರ ಹಿತಕ್ಕೆ ಅದರಿಂದ ತುಂಬ ಧಕ್ಕೆ ಬರುತ್ತದೆ.

ಇನ್ನು ಲ್ಯಾಂಡ್ ರೆವಿನ್ಯೂ ಬಾಬನ್ನು ತೆಗೆದುಕೊಂಡರೆ ನಮ್ಮ ಸರ್ಕಾರ ಹಳ್ಳಿಗಳ ವಿಚಾರದಲ್ಲಿ ಬಹಳ ತಾತ್ಸಾರ ಮನೋಭಾವವನ್ನು ತಾಳಿದೆಯೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ರಾಜ್ಯದಲ್ಲಿ ಶೇಕಡ 80 ರಷ್ಟು ಹಳ್ಳಿಗಳಿವೆ. ಇಂಥ ಹಳ್ಳಿಗಳಲ್ಲಿರುವ ರೈತನ ಸ್ಥಿತಿಗತಿಗಳೇನು, ಆತನ ತೊಂದರೆ—ತಾಪತ್ರಯಗಳೇನು ಎಂಬುದು ಸರ್ಕಾರದವರು ಪ್ರಾಮುಖ್ಯವಾಗಿ ಪರಿಶೀಲಿಸಬೇಕಾದಂಥ ವಿಚಾರವಾಗಿದೆ. ಅನೇಕ ಹಳ್ಳಿಗಳಲ್ಲಿ ಅಷ್ಟೇಕೆ ಪ್ರತಿಯೊಂದು ಹಳ್ಳಿಯಲ್ಲೂ ರೈತರಿಗೆ ಪಟೇಲ್ ಶ್ಯಾನುಭೋಗರುಗಳಿಂದ ವಿಪರೀತ ಕಿರುಕುಳಗಳಾಗುತ್ತಿದೆಯೆಂಬ ಪುಕಾರು ಕೇಳಿಬರುತ್ತಿದೆ. ನಾನೀಗ ಹೇಳುತ್ತಿರುವುದೆಲ್ಲ ನಮ್ಮ ಹಳೆಯ ಮೈಸೂರಿನ ವಿಚಾರ. ನನಗೆ ಹೊಸಮೈಸೂರಿನ ವಿಚಾರ ಅಷ್ಟಾಗಿ ಗೊತ್ತಿಲ್ಲ. ಈ ದಿವಸ ಪ್ರತಿಯೊಂದು ಗ್ರಾಮದಲ್ಲೂ ಪಾರ್ಟಿಗಳನ್ನು ಬೆಳಸುತ್ತಿರುವವರೆಂದರೆ ಅದು ಈ ಪಟೇಲ್-ಶ್ಯಾನುಭೋಗರೇ ಹೊರತು ಇನ್ನೊಬ್ಬರಲ್ಲ. ಇವರಿಂದಲೇ ಈ ದಿವಸ ಸರ್ಕಾರದ ಆಡಳಿತ ಕೂಡ ಸರಾಗವಾಗಿ ನಡೆಯಲು ತೊಂದರೆಯುಂಟಾಗಿದೆಯೆಂದು ನಾನು ಹೇಳುತ್ತೇನೆ. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಂಡಿಯಾ ದೇಶದಲ್ಲಿದ್ದ ಸುಮಾರು 500–600 ಸಂಸ್ಥಾನಗಳನ್ನು ಭಾರತಸರ್ಕಾರ ಒಟ್ಟಿಗೆ ಒಂದುಗೂಡಿಸಿತು. ಅದೇ ರೀತಿ ಇನ್ನೂ ಬೇಕಾದಷ್ಟು ನಮ್ಮ ದೇಶದಲ್ಲಿ ರಿಫಾರಂಸ್‌ಗಳಾದುವು. ಅಷ್ಟೆಲ್ಲಾ ಆದನಂತರವೂ ಈ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಟೇಲ್-ಶ್ಯಾನುಭೋಗರ ವಂಶಪಾರಂಪರ್ಯದ ಹಕ್ಕು ಹೋಗದಿರುವುದು ಒಂದು ಬಹಳ ವಿಷಾದಕರವಾದ ಸಂಗತಿ. ಗ್ರಾಮಾಂತರ ಪ್ರದೇಶದಲ್ಲಿರುವ ರೈತನಿಗೆ ಈ ದಿವಸ ಸಹ ಏನೇನೂ ಗೊತ್ತಾಗುತ್ತಿಲ್ಲ. ಅವರೆಲ್ಲ ಅನಕ್ಷರಸ್ಥರು. ಅವರ ಮಂಕುತನವನ್ನು ಈ ಗ್ರಾಮಾಧಿಕಾರಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. '' ಏನೋ, ನಿನಗೆ ದುಡ್ಡು ಬಂದಿದೆ- ಈ ಕಾಗದಕ್ಕೆ ಹೆಬ್ಬೆಟ್ಟು ಒತ್ತು '' ಎಂದು ಕಾಗದಕ್ಕೆ ರೈತನಿಂದ ರುಜುವು ಹಾಕಿಸಿಕೊಂಡು ಅವನಿಗೆ ಸರ್ಕಾರದಿಂದ ಎತ್ತು ವಗೈರೆಕೊಳ್ಳಲು 200ರೂಪಾಯಿಗಳ ಹಣ ಬಂದಿದ್ದರೆ ಅದರಲ್ಲಿ ಪಟೇಲ್-ಶ್ಯಾನುಭೋಗರುಗಳು 100 ರೂಪಾಯಿಗಳನ್ನು ತಾವು ಹೊಡೆದುಕೊಂಡು ಆ ರೈತನಿಗೆ-ಅವನಿಗೆ ಮಂಜೂರಾಗಿ ಬಂದದ್ದೇ ಒಂದು ನೂರು ರೂಪಾಯಿಗಳೆಂದು ಹೇಳಿ ಕಳುಹಿಸಿಬಿಡುವರು. ಈ ರೀತಿಯಾಗಿ ಅನೇಕ ಕಡೆ ನಡೆಯುತ್ತಿದೆ. ನಾನು ಕೆಲವು ನಿದರ್ಶನಗಳನ್ನೂ ಸಹ ನೋಡಿದ್ದೇನೆ. ಆದ್ದರಿಂದ ಈಗಲಾದರೂ ಸರ್ಕಾರದವರು ಪಟೇಲ್-ಶ್ಯಾನುಭೋಗರ ವಂಶಪಾರಂಪರ್ಯವಾದ ಹಕ್ಕನ್ನು ತಪ್ಪಿಸಿ

ಬೇರೆಯವರಿಗೆ ಸಂಬಳ ರೂಪದಲ್ಲಿಟ್ಟರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಸರ್ಕಾರದವರು ಖಂಡಿತವಾಗಿಯೂ ರೈತರ ಹಿತದೃಷ್ಟಿಯಿಂದ ನೋಡತಕ್ಕದ್ದು ಅತ್ಯಗತ್ಯವೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಆದರೆ ಮಾನ್ಯ ರೆವಿನ್ಯೂ ಮಂತ್ರಿಗಳು ಏನು ಉತ್ತರ ಹೇಳುತ್ತಾರೆಂಬುದನ್ನು ನಾನು ಈಗಲೇ ತಿಳಿದುಕೊಂಡಿದ್ದೇನೆ. ಸರ್ಕಾರದಲ್ಲಿ ದುಡ್ಡಿಲ್ಲ, ಪಟೇಲ್-ಶ್ಯಾನುಭೋಗರುಗಳಿಗೆ ಸಂಬಳಕೊಡಲು ಸಾಧ್ಯವಿಲ್ಲ, ಎಂದು ಹೇಳಬಹುದು. ಆದರೆ ಸರ್ಕಾರಕ್ಕೆ ದುಡ್ಡಿನ ತಗಾದೆ ಇನ್ನೂ ಸ್ವಲ್ಪ ಹೆಚ್ಚಾದರೂ ಚಿಂತೆಯಿಲ್ಲ, ತಾವು ಇದನ್ನು ಅಗತ್ಯವಾಗಿಮಾಡಲೇಬೇಕೆಂದು ಒತ್ತಾಯದಿಂದ ಕೇಳಿಕೊಳ್ಳುತ್ತೇನೆ. ಈ ದಿವಸ ಗ್ರಾಮಾಂತರ ಪ್ರದೇಶದಲ್ಲಿ ರೆವಿನ್ಯೂ ಇಲಾಖೆಯವರು ಅಲ್ಲಲ್ಲೇ ಕೆಲವು ರಸ್ತೆಗಳ ಮತ್ತು ಸಣ್ಣಪುಟ್ಟಕೆರೆಗಳ ಕಾಂಗಾರಿಯನ್ನು ನಡೆಸುತ್ತಿದ್ದಾರೆ. ಇವರಿಗೆ ಇನ್ನೂ ಹೆಚ್ಚಿಗೆ ಮೊಬಲಗನ್ನು ಕೊಟ್ಟು ಸಾಮಾನ್ಯಕೆರೆಗಳ ರಿಪೇರಿಯನ್ನೆಲ್ಲಾ ಇವರೇ ನಡೆಸಲು ಇವರಿಗೆ ಒಂದು ಹೆಚ್ಚಿನ ಅವಕಾಶವನ್ನು ಮಾನ್ಯಮಂತ್ರಿಗಳು ಉಂಟು ಮಾಡಿಕೊಡಬೇಕೆಂದು ಹೇಳುತ್ತೇನೆ. ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನೇನೋ ಸರ್ಕಾರದವರು ಅಲ್ಲಲ್ಲೇ ತೆರೆದಿದ್ದಾರೆ. ಆದರೆ ಈ ಕೋ-ಆಪರೇಷನ್ ರೀತ್ಯಾ ರೈತರಿಗೆ ಸಾಕಷ್ಟು ಧನ ಸಹಾಯ ದೊರೆಯುತ್ತಿಲ್ಲ. ವರ್ತಕರ ಕಿರುಕುಳದಿಂದ ರೈತನನ್ನು ಪಾರುಮಾಡಲು ಒಂದು ಬ್ಯಾಂಕಿಂಗ್ ಸಿಸ್ಟಂ ಅನ್ನು ಈ ರೆಗ್ಯುಲೇಟೆಡ್ ವ್ಯವಸ್ಥೆಗೆ ಮಾರ್ಕೆಟಿಂಗ್ ಹೊಂದಾವಣಿಕೆಯಾಗುವಂತೆ ಏರ್ಪಾಡುಮಾಡಿ ಅದಕ್ಕೆಬೇಕಾದ ಧನ ಸಹಾಯವನ್ನೂ ಸಹ ಕೊಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದರು. ಈ ರೀತಿಮಾಡಿದರೆ ರೈತನಿಗೆ ಬಹಳ ತೊಂದರೆಗಳು ನಿವಾರಣೆ ಆದಂತೆ ಆಗುತ್ತದೆ. ಇನ್ನು ಈ ಲೋ-ಇನ್‌ಕಂ ಗ್ರೂಪಿನವರಿಗೆ ಸೊಸೈಟಿಗಳ ಮೂಲಕ ವಾಸದ ಮನೆಗಳನ್ನು ಕಟ್ಟಿಕೊಳ್ಳತಕ್ಕ ಬಗ್ಗೆ ಸಾಲಕೊಡಲಾಗುತ್ತಿದೆ. ಆ ಸಂಬಂಧದಲ್ಲಿ ಅವರಿಗೆ ಶೇಕಡ ಐದರಂತೆ ಬಡ್ಡಿ ವಿಧಿಸುತ್ತಿದ್ದಾರೆಂದು ಕೇಳುತ್ತೇನೆ. ಮನೆ ಕಟ್ಟಲು ಕೊಡತಕ್ಕ ಸಾಲಕ್ಕೆ ಬಡ್ಡಿಹಾಕಬಾರದು; ಏಕೆಂದರೆ ಅದು ಉತ್ಪತ್ತಿ ತರತಕ್ಕ ಉದ್ಯಮವಲ್ಲ. ಈ ಮೊಬಲಗಾದರೋ ಕೇವಲ ಮಧ್ಯಮ ತರಗತಿಯವರಿಗೆ ಕೆಳಗಿರತಕ್ಕವರಿಗೆ ಕೊಡುತ್ತಿರುವ ಸಾಲವಾದ್ದರಿಂದ ಕೇಂದ್ರದವರು ಹಾಕಿರತಕ್ಕ ಶೇಕಡ ಮೂರರಂತೆ ಬಡ್ಡಿ ಏನಿದೆಯೋ ಅಷ್ಟನ್ನೇ ಹಾಕಬೇಕೆಂದೂ, ಆ ಜನರಿಗೆ ಆ ರೀತಿ ಒಂದು ಅನುಕೂಲ ನೀಡಬೇಕೆಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ದೊಡ್ಡ ಮನಸ್ಸುಮಾಡಿ ಅವಕಾಶವಿತ್ತ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—ಸ್ವಾಮಿ, ಈ ದಿವಸ ಸಭೆಯ ಮುಂದೆ ಇಟ್ಟಿರತಕ್ಕ ಡಿಮ್ಯಾಂಡ್‌ಗಳಲ್ಲಿ ಪಾಲಸಿ ಪ್ರಶ್ನೆಗೆ ಸಂಬಂಧಪಟ್ಟ ವಿಚಾರಗಳು ಸೇರಿರುತ್ತವೆ. ಇಲ್ಲಿಯವರೆಗೂ ನಮ್ಮ ಪಕ್ಷದಲ್ಲಿ ಕೇವಲ ಎರಡು ಜನರಿಗೆ ಮಾತ್ರ ಮಾತನಾಡಲು ಅವಕಾಶ ಸಿಕ್ಕಿದೆ. ಈ ವಿಚಾರದಲ್ಲಿ ನಮ್ಮ ಪಾರ್ಟಿಯವರ ನೀತಿ ಏನಿದೆ ಎಂಬುದನ್ನು ತಿಳಿಸಬೇಕಾಗಿದೆ, ನಾವು ಅಲ್ಲಲ್ಲೇ ಈ ದಿವಸ ಒಬ್ಬಿಬ್ಬರು ನಮ್ಮ ಪಕ್ಷದಿಂದ ಚುನಾವಣೆಯಾಗಿ ಈ ದಿವಸ ಆಡಳಿತ ನಡೆಸುತ್ತಿರುವ ಪಾರ್ಟಿಯನ್ನು ಸರಿಯಾಗಿ ತಿದ್ದಬೇಕೆಂಬ ಉದ್ದೇಶದಿಂದ ನಾವಿಲ್ಲಿಗೆ ಬಂದಿದ್ದೇವೆ. ನಮ್ಮ ಪಕ್ಷದಲ್ಲಿ ಮಾತನಾಡಬೇಕೆಂಬ ಜನರು ಇನ್ನೂ ಜಾಸ್ತಿಯಾಗಿದ್ದಾರೆ. ಆದ್ದರಿಂದ ಅವರೆಲ್ಲರಿಗೂ ತಾವು ಕಾಲಾವಕಾಶಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri M. P. PATIL.—Sir, I want to bring to your notice that we are sitting from 8-30 and now it is about 1 O'clock I would like to know how long have we to sit here.

Mr. SPEAKER.—I am not prepared to sit longer. It seems to me that there is very little discipline amongst P.S.P. members. P.S.P. ಪಕ್ಷದಲ್ಲಿ ಈಗ ಎಷ್ಟು ಜನರು ಮಾತನಾಡಿದ್ದಾರೆಂಬುದರ ಬಗ್ಗೆ ನನ್ನಲ್ಲಿ ಪಟ್ಟಿಯಿದೆ. ನಿಮ್ಮ ಪಾರ್ಟಿಯಲ್ಲಿ ಶ್ರೀಮಾನ್ ಕೆ. ಕೆಂಚಪ್ಪನವರು, ಶ್ರೀ ಜಿ. ಎನ್. ಪುಟ್ಟಣ್ಣನವರು ಮತ್ತು ಶ್ರೀ ಎನ್. ಜಿ. ನರಸಿಂಹೇಗೌಡರು ಈ ಮೂರು ಜನರು ಮಾತನಾಡಿರುತ್ತಾರೆ. ಈ ಮೂರು ಜನರೇ ಮಾತನಾಡಲು ಒಂದೂವರೆ ಗಂಟೆಕಾಲ ತೆಗೆದುಕೊಂಡಿರುತ್ತಾರೆ. ಹಾಗೆ ನಿಮ್ಮ ಪಕ್ಷದವರು ಇನ್ನೂ ಮಾತನಾಡಲು ಅವಕಾಶ ಬೇಕೇಬೇಕೆಂದರೆ ಇದರ ಚರ್ಚೆಯನ್ನು ನಾಳೆಗೂ ಕೂಡ ಮುಂದುವರಿಸಲು ನನ್ನ ಅಭ್ಯಂತರವೇನೂ ಇಲ್ಲ. ನಿಮ್ಮ ಪಕ್ಷದ ನಾಯಕರೇ ಈ ದಿವಸ ಈ ಡಿಮ್ಯಾಂಡ್‌ಗಳನ್ನು ಪೂರೈಸಬಹುದೆಂದು ಒಪ್ಪಿಗೆ ಕೊಟ್ಟಿರುತ್ತಾರೆ. ಹಾಗೆ ಪಕ್ಷದ ಲೀಡರ್ ಹೇಳಿದ್ದಕ್ಕೆ ಇತರ ಸದಸ್ಯರು ಅಡ್ಡಬರಬಾರದು.

If your Leader has stated that it should be finished to-day it must be finished.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತಾವೀಗ ಇತರರಿಗೆ ಕೊಡುತ್ತಿರುವಂತೆ ನಮ್ಮ ಪಕ್ಷದ ಸದಸ್ಯರಿಗೂ ಸಹ ಐದು ನಿಮಿಷದ ಅವಕಾಶವನ್ನಾದರೂ ಕೊಡಿ ಎಂದು ಕೇಳುತ್ತಿದ್ದೇನೆ.

1 P.M.

*ಶ್ರೀ ಬಿ. ಜಿ. ಖೋತ್ (ಸದಲಗ).—ಅಧ್ಯಕ್ಷ ಮಹಾಶಯರೇ, ನಮ್ಮ ಈ ಸಭೆಯ ಸನ್ಮಾನ್ಯ ಸಭಾಸದರು ಇಷ್ಟು ವೇಳೆಯವರೆಗೂ ಈ ಎರಡು ಡಿಮ್ಯಾಂಡ್‌ಗಳ ವಿಷಯವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ದೆಸೆಯಿಂದ, ಈ ಅಲ್ಪ ಕಾಲಾವಧಿಯಲ್ಲಿ ನಾನೇನನ್ನು ಹೇಳಬೇಕಾಗಿತ್ತೋ ಅದೆಲ್ಲವನ್ನೂ ಹೇಳದೆ, ಒಂದೆರಡು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ.

ಮೊದಲನೆಯದಾಗಿ ಕೋ-ಆಪರೇಷನ್ ವಿಚಾರ. ಈ ಬಗ್ಗೆಯೂ ಅನೇಕ ಸದಸ್ಯರು ಪುಷ್ಕಳವಾಗಿ ಹೇಳಿದ್ದಾರೆ: What do you mean by co-operation; who should co-operate, how should he co-operate; with whom should he co-operate ಅಂದರೆ ಕೋ-ಆಪರೇಷನ್ ಎಂದರೇನು, ಯಾರು, ಯಾವಾಗ, ಹೇಗೆ ಕೋ-ಆಪರೇಟ್ ಮಾಡಬೇಕು, ಏಕೆ ಮಾಡಬೇಕು, ಎಲ್ಲಿ ಕೋ-ಆಪರೇಟ್ ಮಾಡಬೇಕು, ಮತ್ತು ಯಾರೊಡನೆ ಕೋ-ಆಪರೇಟ್ ಮಾಡಬೇಕು—ಈ ಸಪ್ತಕಾರಕ, ಕರ್ತೃ, ಕರ್ಮ, ಕರಣ, ಉಪಾದಾನ, ಅಪಾದಾನ, ಷಷ್ಟಿ, ಸಪ್ತಮಿ—ಈ ಎಲ್ಲ ವಿಷಯಗಳನ್ನೂ ಕುರಿತು ಕೋ-ಆಪರೇಷನ್ ಎಂಬುದು ಏನೆಂಬುದನ್ನು ನಾನು ಸ್ವಲ್ಪ ಮಟ್ಟಿಗೆ ತಿಳಿಸಬಯಸುತ್ತೇನೆ.

ಕೋ-ಆಪರೇಷನ್ ಎಂಬುದು ಅಷ್ಟು ಮಹತ್ವದ ತತ್ವಗಳನ್ನೊಳಗೊಂಡಿದೆ—ಏನೆಂದರೆ ಅದರ ವಿಚಾರ

(ಶ್ರೀ ಬಿ. ಜಿ. ಖೋತ್)

ಸ್ವಲ್ಪ ಯೋಚನೆ ಮಾಡಿದರೆ ಪ್ರತಿಯೊಂದು ವಿಷಯದಲ್ಲಿಯೂ ಅದು ನಮಗೆ ಅನುಷ್ಠಾನದಲ್ಲಿದೆಯೆಂಬುದು ಗೊತ್ತಾಗುತ್ತದೆ. ಇದು ಕಣ್ಣಿಗೆ ಬೀಳುವ ವಸ್ತುವಲ್ಲ. ಪೇಟೆಗೆ ಹೋಗಿ ದುಡ್ಡು ಕೊಟ್ಟು ತರುವ ವಿಷಯವಲ್ಲ. ಅದನ್ನು preaching ಎಂದು ಹೇಳಿಬಿಡುವಂತಹುದೂ ಅಲ್ಲ. ಪ್ರತ್ಯಕ್ಷವಾಗಿ ಪ್ರಚಾರದಲ್ಲಿ ತರುವಂಥಹುದು. ಅದು ಪ್ರತಿಯೊಬ್ಬರೂ ತಮಗೆ ಎಷ್ಟು ಶಕ್ಯವಿದೆಯೋ ಅಷ್ಟು ಅದನ್ನು ಆಚರಣೆ ತರಬೇಕಾದದ್ದು ಅವಶ್ಯಕ.

ಇನ್ನು ಕೋ-ಆಪರೇಷನ್ ಇಲಾಖೆ ಹೇಗೆ ಬಂತೆಂದು ಹೇಳುತ್ತೇನೆ. ಲಾರ್ಡ್ ಕರ್ಜನ್‌ರವರು ವೈಸರಾಯಿಗಳಾಗಿದ್ದಾಗ ಈ ಇಲಾಖೆಯನ್ನು ನಿರ್ಮಾಣ ಮಾಡಿದರು. ಆದರೆ, ಅಲ್ಲಿಂದ ಇಲ್ಲಿಯತನಕ ಇದಕ್ಕಾಗಿ ಎಷ್ಟೋ ದುಡ್ಡು ಖರ್ಚಾದರೂ ನಾವು ನಿರೀಕ್ಷಿಸಿದಷ್ಟು ಫಲ ದೊರಕಿದೆಯೇ ಇಲ್ಲವೇ ಎಂಬದನ್ನು ಯೋಚನೆ ಮಾಡೋಣ, ಕೋ-ಆಪರೇಷನ್ ಇಲಾಖೆಯ ಅಂಗವಾಗಿ ರೂರಲ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಶತ್ಕಲಿ ಕೋ-ಆಪರೇಟಿವ್ ಸೊಸೈಟಿಗಳೆಂದು ಪ್ರತಿಯೊಂದು ಹಳ್ಳಿಯಲ್ಲೂ ಇದೆ. ನಮ್ಮ ಸಂಸ್ಥಾನದಲ್ಲಿ ಕೋ-ಆಪರೇಷನ್ನಿಗಾಗಿ ಎಷ್ಟು ಖರ್ಚು ಮಾಡಿದ್ದೇವೋ ಅದಕ್ಕೆ ಯೋಗ್ಯ ರೀತಿಯಲ್ಲಿ ಯಶಸ್ಸು ಲಭಿಸಿಲ್ಲ. ಸರಿಯಾದ ಯಶಸ್ಸು ದೊರಕಬೇಕಾಗಿದ್ದರೆ ಏನು ಮಾಡಬೇಕಾಗಿತ್ತು ಎಂದರೆ ನಮ್ಮಲ್ಲಿನ ಶತ್ಕಲಿ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿತ್ತು. Co-operative farming, Co-operative marketing, Co-operative industrial centres ಇವುಗಳು ಮುಖ್ಯವಾಗಿ ಏರ್ಪಾಡಾಗಬೇಕು. ಹಳ್ಳಿಗಾಡಿನಲ್ಲಿ ಯಾವುದೇ ಧಾನ್ಯಬೆಳೆಯಾಗಲಿ—ಅದು Money crop ಆಗಿರಬಹುದು ಅಥವಾ ಆಹಾರದ crop ಆಗಿರಬಹುದು—ಇವುಗಳ ಉತ್ಪಾದನೆಗೆ ಹೇಗೆ Co-operative farming ಇರಬೇಕೆನ್ನುತ್ತೇವೆಯೋ ಹಾಗೆಯೇ ಅವುಗಳ ಮಾರಾಟಕ್ಕೆ Marketing ಸೊಸೈಟಿಗಳೂ ಇರಬೇಕು ಮತ್ತು ಅವುಗಳನ್ನು ಉಪಯೋಗಿಸುವುದಕ್ಕೆ Co-operative Industrial Centre ಗಳನ್ನು ಏರ್ಪಾಡು ಮಾಡುವುದರಿಂದ ಒಂದಕ್ಕೊಂದಕ್ಕೆ ಅನುಕೂಲವಾಗುತ್ತದೆಯೇ ವಿನಾ. ಬರೀ ಯಾವುದೊ ಒಂದನ್ನು ಪ್ರಾರಂಭಿಸಿದರೆ ಸಾಲದು. ಏಕೆಂದರೆ ಉತ್ಪಾದನೆಯಾದ ಸಾಮಾನುಗಳಿಗೆ ಗಿರಾಕಿಯನ್ನು ಸರ್ಕಾರದವರು ಸಂಪಾದನೆ ಮಾಡಿಕೊಡಬೇಕು. ಗಿರಾಕಿಗಳಿಲ್ಲದಿದ್ದರೆ ನೀವೆಷ್ಟು ware houses ಏರ್ಪಡಿಸಿದರೂ, ಎಷ್ಟೇ Corporation ಗಳನ್ನು ಮಾಡಿಕೊಂಡರೂ, ಪೇಟೆ ಗಿರಾಕಿಗಳು ಎಲ್ಲಿಯವರೆಗೆ ನಿಮ್ಮ ಪದಾರ್ಥಗಳಿಗೆ ಸಿಕ್ಕುವುದಿಲ್ಲವೋ ಅಲ್ಲಿಯವರೆಗೆ, Co-operative farming ಯೋಜನೆ ಅಭಿವೃದ್ಧಿಯಾಗುವುದಿಲ್ಲ. ಆದ್ದರಿಂದ ಗಿರಾಕಿ ಸಂಪಾದನೆಯ ದೃಷ್ಟಿಯಿಂದ ದಳ್ಳಾಳಿಗಳು ಯಾವರೀತಿ ಕೆಲಸಮಾಡುತ್ತಾರೋ ಆ ರೀತಿ ಕೆಲಸಮಾಡುವಂತೆ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳು ಕೆಲಸ ಮಾಡಬೇಕು. ಅಥವಾ ಕೋ-ಆಪರೇಟಿವ್ ಬ್ಯಾಂಕಿಂಗ್ ಯೋಜನೆಯಿರಬೇಕು.

Mr. SPEAKER—Before I call upon the Ministers to reply, I wish to make a statement. In all 18 members have taken part, of which 8 are from the Congress, 10 from the Opposition, 3 P.S.P and 2 Maharashtra Ekikarana Samithi.

Sri J. SARWESH.—I have moved cut motions on this Demand.

Mr. SPEAKER.—No cut motions have been moved, but only tabled. Moving is different from tabling.

Sri B. VAIKUNTA BALIGA (Minister for Labour and Legal Affairs).—Mr. Speaker, I must at the outset congratulate the Hon'ble Members who have participated in this debate for the very high level of criticism they have maintained. With regard to the Labour Department and matters pertaining to that department, I am indeed grateful to the members who have participated in the discussions and I must say they have made very good suggestions. The premises on which criticism has been made are that what has been provided for by the Government is not excessive and that on the other hand they would like it to be enhanced. Certainly Government is very anxious to spend more money if only if it could be made available. But we cannot overlook the fact that even as it is the Budget presented is a deficit one and to find more money for every department as various members would suggest is rather an impossibility. Therefore, we have to take a practical view of the matter. I am thankful to the members for the support they have given.

I shall certainly bear in mind the criticisms made in detail. The cut motions that have been tabled will be taken note of and every effort will be made to comply with them as far as possible

For instance, so far as Demand No. 28 is concerned, there are two cut motions; one is by Sri Shyamsunder—refusal of supplies regarding charges in England. Even though it has not been mentioned in the course of the debate, I may mention that the expenditure that is incurred in England is with regard to various products that are manufactured by the concerns run by the Government and it is very productive. I do not think it would be wise for anybody to suggest that this expenditure should not be incurred. I believe that in that light it has not been mentioned in the course of the debate. The next token cut is tabled by Sri Srinivasa Shetty.

It contains a number of items. It refers to the implementation of industrial truce in the State. I should say with all respect to my friend that industrial truce is best maintained in the Mysore State. I can mention various parties with whom truce is going to be maintained. I wish my friends will not interfere with the truce. Let the truce be maintained most cordially. Truce has been entered into with the labour in Mysore Iron and Steel Works, Bhadravati, Mysore Paper Mills, Bhadravati, Imperial Tobacco Co., Kapila Textiles and it has been working smoothly. Consent truce that has been arrived at is something that has to be taken note of for purposes of satisfaction. If at this stage it is said that there is something wrong somewhere, all that I can say is that the motive behind this idea is all considerations other than those founded on truth. I might also refer to the truce that has been arrived at between the plantation labour and the planters. A very large number, nearly 1,20,000 workers, have entered into a truce and this State is certainly going to rivet attention on the maximum production. I may assure the House and my friends on the other side that Government is most anxious to produce to the maximum extent, particularly, situated as we are, with regard to the various articles that are exported from this State. I may assure the members that, so far as maximum production is concerned, there will be no negligence or lack of effort on the part of Government. An idea was mentioned that union should be made compuslory. I am quite unable to understand how we can compel a labourer or a worker to join a union or how recognition of a union can be made compulsory. On the other hand, the Government is making an all-out effort to induce them to organise themselves and enter into unions. I would certainly consider the suggestion with all the weight it deserves coming as it does from the Leader of the Opposition.

Then, the idea of temporary employees not being made permanent was mentioned. This is not at all a very big idea. If it is suggested that we should make people who are employed for a short while permanent even if there is no scope for it, it is something which is rather difficult. But rules and regulations have been framed that, whenever a temporary employee is taken, his claim will be considered with all the equities that might be possible under the circumstances.

ಶ್ರೀ ಕೆ. ಕೆಂಚಪ್ಪ.—10 12 ವರ್ಷ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡಿದರೂ ಸಹ ಖಾಯಂ ಮಾಡಿಲ್ಲ.

Sri B. VAIKUNTA BALIGA.—Sir, the Leader of the Opposition mentions an instance where for 12 years they have not been made permanent. I may mention, Sir, that all that can possibly be done is being done and every effort will be made in this direction. I trust the Leader of the Opposition will be content with the assurance that has been given that every effort will be made to see that equities will be provided. An assurance was given by the Praja Party or the Leader of the Opposition on behalf of his party and also on behalf of the other parties that the labour is very dear to them. It is rather a cursory argument placed before this House, because I must say, disassociating myself from party affiliations, that the labour is most dear to the Government and every effort is being made to protect and advance their interests and to multiply the amenities that can be given to labour.

There was also a reference to the eradication of mosquitoes. Every effort will be made in this direction and the House is aware that every effort is being made in this behalf.

A new idea was suggested with regard to the employment of what is called a land army. This idea is being mooted in more ways than one. I will certainly study this idea and try to put it to the best use. The co-operation that has been assured is most appreciated and will be availed of whenever an occasion arises.

There was a reference to the Palace employees. There is a slight error or mixing up of the ideas. They are domestic employees and as such, the Government is legally not competent to do anything. However, I may take the House into my confidence and say

(SRI B. VAIKUNTA BALIGA)

that every effort is being made to get them employed in other industries. Every effort was made to settle them and if they did not want to settle down, I do not exactly know what is the sin or the fault of the Government or what is the failure on the part of Government. It was suggested that they should be allowed to form a union. I do not know whether it is possible to be done. Anyhow, the suggestion will be considered. At this stage, I must mention that what has been done by the Maharaja, who is the employer is not inequitable. It is a matter beyond the purview of the Government and therefore, I will not be in a position to say anything more.

Sri C. J. MUCKANNAPPA.—Is he replying to the points raised with regard to Scientific Research also?

Sri B. VAIKUNTA BALIGA.—May I ask my friend to wait till I finish my speech and then find out what points I am answering and what points I am not answering and if there is any point missed then it is open to him to get up and say that a particular point has not been answered. But intervening at an earlier stage without even a little patience—I am sorry I will leave it at that.

Then, Sir, the idea of economic democracy was enunciated. I have been trying to understand it and if it is a question of trying to uplift the poor man and place him in a better position, that is exactly the target, ideal and attempt of the Government in a socialistic pattern of society. It has been often quoted without appreciating what has been done but only with a view to ridicule. I am glad that this idea of economic democracy has been enunciated, but I was not able to follow when it was said that Kolar Gold Mines could be given to the workers. The idea was suggested by the Leader of the Opposition that it might be made possible for the workers to become the owners of the mines on a co-operative basis. The idea was mixed up. Anyway, I might say that the Government, will be most willing for launching upon any venture and that is exactly what has been attempted with regard to the lands that are being brought under the Nugu Reservoir Project. Wherever possible, it is the desire of Government that the persons who are actually working should be made owners as far as possible, but if they are unable for reasons beyond their control, they cannot help it. My friends must have read that the principle of labour participating in management has been agreed to at the Labour Conference held in Delhi where all the parties participated. It has been agreed that there should be no rationalisation. In case any retrenchment is made, there should be no strike. Various other conclusions have been arrived at there Those conclusions will show how far. the Central Government and the State Government are trying their best to do whatever they can in this direction.

I must also refer to the question of housing. If there is any State in the Indian Union which has utilised the facilities afforded under the housing scheme, I must say that Mysore stands first. May I mention for the benefit of the House that nearly a crore of rupees have been sanctioned for expenditure for this purpose and actually Rs. 82 lakhs have been spent. The number of houses that have been built—about 3,000 of them have been built—does real credit to the Government. I must say not only with regard to what has been done under this scheme but also with regard to the housing facilities given all over the State, that the work done by the Government is one which cannot be criticised in the manner in which it was done.

I am very happy that the Hon'ble Member raised so many points regarding wage policy, compulsory recognition of unions, human relations, factory inspection, Wage Board for Journalists inspectorate, central institutions and so on. The Government has done its very best in all these matters. All that I can say is that because he is unable to find anything better to criticise, he has criticised in that manner. However, I am grateful to the Hon'ble Member for raising all those points and I assure him that the co-operation which he has promised will be availed of by me.

Sri M. C. NARASIMHAN.—I never promised anything.

Sri B. VAIKUNTA BALIGA.—The Leader of the Opposition on behalf of his party and on behalf of everybody promised it.

Sri M. C. NARASIMHAN.—He was prepared to co-operate so far as the land army was concerned.

Sri B. VAIKUNTA BALIGA.—I am not aware of that qualification. Anyhow, if my friend will not co-operate, I will take note of it. I will, however, beg of him to give me his co-operation. I may assure him and the House that all the proposals that are put forward with a certain amount of reasonableness will always be sympathetically considered.

I cannot refer to details because time is very precious and there are other Ministers to reply to the other Demands.

